22 January 2026 Thursday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಚಿಂತಿಸುವದರಿಂದ ಪರಿಸ್ಥಿತಿ ಬದಲಾಯಿಸಲು ಸಾಧ್ಯವಿದ್ದರೆ, ಚಿಂತಿಸುವುದು ತಪ್ಪಲ್ಲ! ಇಲ್ಲದಿದ್ದರೆ ಚಿಂತಿಸಿ ಫಲವಿಲ್ಲ!
-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**


"ಕಷ್ಟದ ಬೆಲೆ ಗೊತ್ತಿರುವವರು ಯಾರಿಗೂ ಕಷ್ಟ ಕೊಡುವುದಿಲ್ಲ "ಇಷ್ಟದ ಬೆಲೆ ಗೊತ್ತಿರುವವರು ಯಾರನ್ನೂ ದೂರ ಮಾಡಿಕೊಳ್ಳುವುದಿಲ್ಲ"
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 80 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಚಿನ್ನಸ್ವಾಮಿಯಲ್ಲಿ ಐಪಿಎಲ್ ಮ್ಯಾಚ್



**ಬೆಂಗಳೂರು:** ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಐಪಿಎಲ್ ಮ್ಯಾಚ್ ನಡೆಯಲಿವೆ ಎಂದು ಕೆಎಸ್‌ಸಿಎ ಅಧಿಕೃತವಾಗಿ ಘೋಷಿಸಿದೆ. ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಈ ಬಗ್ಗೆ ಜಿಬಿಎ, ಬೆಸ್ಕಾಂ, ಜಲಮಂಡಳಿಗೂ ಮನವಿ ಮಾಡಿದ್ದೇವೆ. ಸುರಕ್ಷತೆಗೆ ಕೆಎಸ್‌ಸಿಎ ಹೆಚ್ಚು ಆದ್ಯತೆ ನೀಡಲಿದೆ ಎಂದು ಅವರು ತಿಳಿಸಿದರು. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಐಪಿಎಲ್, ಅಂತಾರಾಷ್ಟ್ರೀಯ ಪಂದ್ಯಗಳನ್ನು ನಡೆಸಲು ಸರ್ಕಾರ ಇತ್ತೀಚೆಗೆ ಅನುಮತಿ ನೀಡಿತ್ತು.

## ಜಮೀರ್ ಆಪ್ತ ಸರ್ಫರಾಜ್ ಆಸ್ತಿ ಮೌಲ್ಯ 14 ಕೋಟಿ

**ಬೆಂಗಳೂರು:** ಸಚಿವ ಜಮೀರ್ ಅಹಮದ್ ಖಾನ್ ಆಪ್ತ ಸರ್ಫರಾಜ್ ಖಾನ್ ಮನೆಯಲ್ಲಿ ಲೋಕಾಯುಕ್ತ ದಾಳಿಯ ವೇಳೆ ಸಿಕ್ಕಿರುವ ಆಸ್ತಿಯ ಮೌಲ್ಯವನ್ನು ಲೋಕಾಯುಕ್ತ ಪೊಲೀಸರು ಬಹಿರಂಗಪಡಿಸಿದ್ದಾರೆ.

ಸರ್ಫರಾಜ್ ಖಾನ್ ಒಟ್ಟು 4 ಮನೆ, 8 ಕೋಟಿ ಮೌಲ್ಯದ 37 ಎಕರೆ ವ್ಯವಸಾಯದ ಜಮೀನು ಪತ್ರಗಳು ಸಿಕ್ಕಿವೆ. ಅಲ್ಲದೇ 66,500 ರೂಪಾಯಿ ನಗದು, 2.99 ಕೋಟಿ ಮೌಲ್ಯದ ಚಿನ್ನಾಭರಣ, ಐಷಾರಾಮಿ ಕಾರುಗಳು, 1 ಕೋಟಿ 29 ಸಾವಿರ ಠೇವಣಿ ಖಾತೆ ಸೇರಿ ಒಟ್ಟು 14.38 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತ ಅಧಿಕಾರಿಗಳು ಸರ್ಫರಾಜ್ ಖಾನ್‌ಗೆ ಸೇರಿರುವ ಒಟ್ಟು 13 ಸ್ಥಳಗಳಲ್ಲಿ ಇತ್ತೀಚೆಗೆ ದಾಳಿ ಮಾಡಿದ್ದರು. ಸರ್ಫರಾಜ್ ಖಾನ್ ವಿರುದ್ಧ

### ರಾಜ್ಯಪಾಲರು VS ರಾಜ್ಯ ಸರ್ಕಾರ

# ಭಾಷಣಕ್ಕೆ ರಾಜ್ಯಪಾಲರ ನಿರಾಕರಣೆ

## ಜಂಟಿ ಅಧಿವೇಶನದಲ್ಲಿ ಭಾಷಣಕ್ಕೆ ನಿರಾಕರಣೆ । ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿ ಸಾಧ್ಯತೆ?

**ಬೆಂಗಳೂರು:** ವಿಧಾನಮಂಡಲ ಜಂಟಿ ಅಧಿವೇಶನ ಆರಂಭಕ್ಕೂ ಮುನ್ನವೇ ರಾಜ್ಯಪಾಲ ಥಾವರ್ ಸಿಂಗ್ ಗೆಹ್ಲೋಟ್ ರಾಜ್ಯ ಸರ್ಕಾರಕ್ಕೆ ಬಿಗ್ ಶಾಕ್ ನೀಡಿದ್ದಾರೆ. ಗುರುವಾರ ಆರಂಭವಾಗಬೇಕಿದ್ದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಓದಲು ರಾಜ್ಯಪಾಲರು ನಿರಾಕರಿಸಿದ್ದಾರೆ. ಈ ಮೂಲಕ ತಮಿಳುನಾಡು ಬಳಿಕ ಕರ್ನಾಟಕದಲ್ಲಿಯೂ ರಾಜ್ಯಪಾಲರು ಮತ್ತು ಸರ್ಕಾರದ ನಡುವೆ ಸಂಘರ್ಷ ಆರಂಭವಾಗಿದೆ.

ಕೇಂದ್ರ ಸರ್ಕಾರದಿಂದ ದಕ್ಷಿಣ ರಾಜ್ಯಗಳ ವಿರುದ್ಧ ನಡೆಯುತ್ತಿರುವ ತಾರತಮ್ಯ ವಿಚಾರವಾಗಿ ಭಾಷಣದಲ್ಲಿ ರಾಜ್ಯ ಸರ್ಕಾರ ಉಲ್ಲೇಖಿಸಿದೆ ಎನ್ನಲಾಘಿದೆ. ಭಾಷಣದಲ್ಲಿ



ಕೇಂದ್ರದ ವಿರುದ್ಧ ರಾಜ್ಯ ಐದಾರು ಬಾರಿ ಅಸಮಾಧಾನ ವ್ಯಕ್ತಪಡಿಸಿದ ಅಂಶವನ್ನು ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿಸಲಾಗಿದೆ. ಭಾಷಣದಲ್ಲಿ ವಿಚಾರ ಪ್ರಸ್ತಾಪವಾದ ಬೆನ್ನಲ್ಲೇ ರಾಜ್ಯಪಾಲರು ಭಾಷಣ ಓದದೇ ಇರುವ ನಿರ್ಧಾರ ತೆಗೆದುಕೊಂಡಿದ್ದಾರೆ. ಅಲ್ಲದೆ, ಕೇಂದ್ರ ಸರ್ಕಾರ ನರೇಗಾ ಯೋಜನೆಯನ್ನು ಕೈಬಿಟ್ಟು ಈಗ ಜಾರಿಗೆ ತಂದಿರುವ ಜಿ ರಾಮ್ ಜಿ ಯೋಜನೆಯನ್ನು ವಿರೋಧಿಸಿ ವಿಶೇಷ ಅಧಿವೇಶನ ಕರೆದಿರುವುದರಿಂದ ಅಧಿವೇಶನದ ಉದ್ದೇಶವೇ ಸರಿಯಲ್ಲ ಎಂದು ರಾಜ್ಯಪಾಲರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಈ ವಿವಾದ ಸಾಂವಿಧಾನಿಕ ಬಿಕ್ಕಟ್ಟನ್ನು ಸೃಷ್ಟಿಸಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

### ಭಾಷಣ ತಿದ್ದುಪಡಿಗೆ ಸೂಚನೆ

**ಬೆಂಗಳೂರು:** ರಾಜ್ಯಪಾಲರು ಥಾವರ್ ಸಿಂಗ್ ಗೆಹ್ಲೋಟ್ ಅವರು ನಿರ್ಧಾರ ಪ್ರಕಟಿಸುತ್ತಿದ್ದಂತೆ ಬುಧವಾರ ಮಧ್ಯಾಹ್ನ 1 ಗಂಟೆಗೆ ರಾಜಭವನದಿಂದ ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರಿಗೆ ಕರೆ ಬಂದಿದೆ. ರಾಜಭವನದ ಕರೆಯಲ್ಲಿ ಈ ಭಾಷಣವನ್ನು ರಾಜ್ಯಪಾಲರು ಓದಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾಷಣವನ್ನು ಬದಲಿಸದೇ ಇದ್ದರೆ ರಾಜ್ಯಪಾಲರು ಭಾಷಣಕ್ಕೆ ಬರುವುದಿಲ್ಲ ಎಂದು ಸರ್ಕಾರಕ್ಕೆ ತಿಳಿಸಲಾಗಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಬುಧವಾರ ಬೆಳಿಗ್ಗೆಯೇ ಕರೆ ಮಾಡಿದ್ದ ಲೋಕಭವನದ ಅಧಿಕಾರಿಗಳು, ಕೇಂದ್ರ ಸರ್ಕಾರದ ವಿರುದ್ಧ ನಿರ್ಣಯ ಕೈಗೊಳ್ಳುವುದಾದರೆ ರಾಜ್ಯಪಾಲರು ಭಾಗವಹಿಸುವ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಈಗ ರಾಜ್ಯಪಾಲರ ಮನವೊಲಿಕೆಗೆ ರಾಜ್ಯ ಸರ್ಕಾರ ಕಸರತ್ತು ಮಾಡಲು ಆರಂಭಿಸಿದೆ. ರಾಜಭವನಕ್ಕೆ ಸ್ಪೀಕರ್ ಯುಟಿ ಖಾದರ್, ಸಭಾಪತಿ ಬಸವರಾಜ ಪುಟ 2ಕ್ಕೆ

### ಭಾಷಣ ಓದಲೇಬೇಕು: ಹೊರಟ್ಟಿ, ಖಾದರ್ ಅಭಿಮತ



ರಾಜ್ಯ ಸರ್ಕಾರ ಬರೆದುಕೊಡುವ ಭಾಷಣವನ್ನು ರಾಜ್ಯಪಾಲರು ಓದಲೇಬೇಕು. ಸರ್ಕಾರ ಕೊಟ್ಟಿದ್ದೇ ಅಂತಿಮ. ರಾಜ್ಯಪಾಲರು ತಮ್ಮದೇ ಲೈನ್ ಸೇರಿಸಲು ಅಥವಾ ಕಟ್ ಮಾಡಲು ಅವಕಾಶವಿಲ್ಲ. ಸರ್ಕಾರ ನೀಡಿದ ಭಾಷಣವನ್ನ ಓದೋದು ರಾಜ್ಯಪಾಲರ ಕರ್ತವ್ಯ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.

ನಮ್ಮ ರಾಜ್ಯಪಾಲರು ಪ್ರಬುದ್ಧರು, ಹಿರಿಯರು, ಸಂವಿಧಾನ, ನಿಯಮ ಎಲ್ಲ ಗೊತ್ತಿದೆ. ಅವರು ಸಂವಿಧಾನದ ಪುಟ 2ಕ್ಕೆ

### ಸರ್ಕಾರದ ಆಯ್ಕೆಗಳೇನು?

ರಾಜ್ಯಪಾಲರ ಮನವೊಲಿಕೆ ಯತ್ನ ನಡೆಸುವುದು. ಒಪ್ಪದೇ ಇದ್ದಲ್ಲಿ ಸಂವಿಧಾನದ 176ನೇ ವಿಧಿಯ ಪ್ರಕಾರ ರಾಜ್ಯಪಾಲರು ಕಡ್ಡಾಯವಾಗಿ ಭಾಷಣವನ್ನ ಓದಲೇಬೇಕೆಂಬ ವಾದ ಮುಂದಿಡುವುದು. ವೈಯಕ್ತಿಕ ಅಂಶಗಳನ್ನು ಓದಲು ಇಲ್ಲವೇ ಅಭಿಪ್ರಾಯ ವ್ಯಕ್ತ ಪಡಿಸಲು ಅವಕಾಶ ಇಲ್ಲ ಎಂದು ಪ್ರತಿಪಾದಿಸುವುದು.

ಆಗಲೂ ರಾಜ್ಯಪಾಲರ ಮಾತಿಗೆ ಒಪ್ಪದಿದ್ದಲ್ಲಿ ತುರ್ತು ಸಚಿವ ಸಂಪುಟ ಸಭೆ ಕರೆಯುವ ಸಾಧ್ಯತೆ ಇದೆ.

ಕೆಲ ಕಾಲ ವಿಶೇಷ ಅಧಿವೇಶನ ಮುಂದೂಡಿ ತುರ್ತು ಸಚಿವ ಸಂಪುಟ ಕರೆಯಲು ಅವಕಾಶವಿದೆ.

ಸಚಿವ ಸಂಪುಟ ಸಭೆಯಲ್ಲಿ ರಾಜ್ಯಪಾಲರ ವಿರುದ್ಧ ನಿರ್ಣಯ ಕೈಗೊಂಡು ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳಿ ಎಂದು ಒತ್ತಾಯಿಸಿ ಕೇಂದ್ರಕ್ಕೆ ನಿರ್ಣಯ ಪಾಸ್ ಮಾಡುವ ಸಾಧ್ಯತೆ ಇದೆ.

### ಬಾರದಿದ್ದರೆ ಮುಂದೇನು?

**ಬೆಂಗಳೂರು:** ಸಂವಿಧಾನದ ಪ್ರಕಾರ ಸರ್ಕಾರದ ಮುಖ್ಯಸ್ಥರಾದ ರಾಜ್ಯಪಾಲರು ಒಂದು ವೇಳೆ ಜಂಟಿ ಅಧಿವೇಶನಕ್ಕೆ ಬರದಿದ್ದರೆ ಸಾಂವಿಧಾನಿಕ ಬಿಕ್ಕಟ್ಟು ಎದುರಾಗುವ ಸಾಧ್ಯತೆಯಿದೆ ಎಂದು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ವರ್ಷದ ಮೊದಲ ಅಧಿವೇಶನವನ್ನು ರಾಜ್ಯಪಾಲರ ಭಾಷಣದೊಂದಿಗೆ ಆರಂಭಿಸಬೇಕು ಎಂಬ ನಿಯಮವಿದೆ. ಆದ್ದರಿಂದ ಅವರು ಬರದಿದ್ದರೆ ದೊಡ್ಡ ಬಿಕ್ಕಟ್ಟು ಎದುರಾಗುವ ಸಾಧ್ಯತೆಯಿದೆ. ಜನವರಿ 22ರಂದು ಬೆಳಿಗ್ಗೆ 11 ಗಂಟೆಗೆ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಬೇಕಿದೆ.

## ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ: ಚಿರತೆ ದಾಳಿಯಿಂದ ಯುವಕ ಸಾವು

**ಚಾಮರಾಜನಗರ:** ಪ್ರಸಿದ್ಧ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ತೆರಳುತ್ತಿದ್ದ ಸಂದರ್ಭದಲ್ಲಿ ಭಕ್ತನೊಬ್ಬನ ಮೇಲೆ ಬುಧವಾರ ಬೆಳಗ್ಗೆ ಚಿರತೆ ದಾಳಿ ದಾಳಿ ಮಾಡಿದೆ. ಚಿರತೆ ದಾಳಿಗೆ ವ್ಯಕ್ತಿ ಸಾವನ್ನಪ್ಪಿದ್ದಾರೆ. ಮಂಡ್ಯ ಜಿಲ್ಲೆಯ ಪ್ರವೀಣ್ (30) ಮೃತಪಟ್ಟವರು.



ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ತಮ್ಮ ಗ್ರಾಮದವರ ಪ್ರವೀಣ್ ಪಾದಯಾತ್ರೆ ನಡೆಸುತ್ತಿದ್ದರು. ತಾಳಬೆಟ್ಟದಿಂದ ಮಲೆ ಮಹದೇಶ್ವರನ ಬೆಟ್ಟದವರೆಗೆ ಕಾಲ್ನಡಿಗೆಯಲ್ಲಿ ತೆರಳುವಾಗ ಮಾರ್ಗ ಮಧ್ಯದಲ್ಲಿ ಚಿರತೆ ದಾಳಿ ನಡೆಸಿದೆ. ಕುತ್ತಿಗೆ ಮತ್ತು ದೇಹದ ಇತರ ಭಾಗಗಳಿಗೆ ಗಂಭೀರ ಗಾಯಗಳಾಗಿದ್ದರಿಂದ ತೀವ್ರ ರಕ್ತಸ್ರಾವವಾಗಿ ಪ್ರವೀಣ್ ಮೃತಪಟ್ಟಿದ್ದಾರೆ.

ಚಿರತೆ ದಾಳಿ ನಡೆಸಿದ ಸಂದರ್ಭ ಪ್ರವೀಣ್ ಜೊತೆ ಗಿದ್ದ ಇತರರು ಸ್ಥಳದಿಂದ ಓಡಿಹೋಗಿದ್ದಾರೆ. ಇದರಿಂದ



ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಚಿರತೆ ದಾಳಿ ಹಿನ್ನೆಲೆಯಲ್ಲಿ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ನಾಲ್ಕು ದಿನ ಪಾದಯಾತ್ರೆಗೆ ಸ್ಥಗಿತಗೊಳಿಸುವಂತೆ ಅರಣ್ಯಾದಿಕಾರಿ ಸೂಚಿಸಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.


## 'ಸದನ ಕಲಹ'ಕ್ಕೆ ದೋಸ್ತಿ ಸಿದ್ಧತೆ

### ಇಂದು ಜಂಟಿ ಶಾಸಕಾಂಗ ಪಕ್ಷದ ಸಭೆ । ಕೇಂದ್ರ ಸಚಿವ ಶಿವರಾಜ್ ಸಿಂಗ್ ಭಾಷಣ

**ಬೆಂಗಳೂರು:** ವಿಧಾನಸಭೆ ಜಂಟಿ ಅಧಿವೇಶನ ಜ.22ರಂದು ಗುರುವಾರ ಶುರುವಾಗಲಿದೆ. ನರೇಗಾ ವರ್ಸಸ್ ಜಿ ರಾಮ್ ಜಿ ಕುರಿತು ವಿಶೇಷ ಚರ್ಚೆಗೆ ಸಿದ್ಧತೆ ನಡೆದಿದೆ. ಈ ಹಿನ್ನೆಲೆಯಲ್ಲಿ ದೋಸ್ತಿ ಪಕ್ಷಗಳು ಭರ್ಜರಿ ತಯಾರಿಗೆ ಮುಂದಾಗಿವೆ. ಗುರುವಾರ ಮೈತ್ರಿಪಕ್ಷಗಳ ಜಂಟಿ ಶಾಸಕಾಂಗ ಪಕ್ಷದ ಸಭೆ ಆಯೋಜಿಸಲಾಗಿದೆ

ಬೆಂಗಳೂರಿನ ಖಾಸಗಿ ಹೊಟೇಲಿನಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಪಕ್ಷಗಳ ಜಂಟಿ ಶಾಸಕಾಂಗ ಪಕ್ಷದ ಸಭೆ ಆಯೋಜಿಸಲಾಗಿದೆ. ಕೇಂದ್ರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ದೋಸ್ತಿ ಶಾಸಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಾಳೆ ಸಂಜೆ 5 ರಿಂದ 6 ಗಂಟೆವರೆಗೆ ಚೌಹಾಣ್ ಉಪನ್ಯಾಸ ಇರಲಿದೆ.

ವಿಶೇಷ ಸದನದಲ್ಲಿ ಯಾವ ರೀತಿ ಚರ್ಚೆ ನಡೆಸಬೇಕು. ಏನೆಲ್ಲ ಚರ್ಚಿಸಬೇಕು ಅಂತ ಶಿವರಾಜ್ ಸಿಂಗ್ ಚೌಹಾಣ್ ದೋಸ್ತಿ ಶಾಸಕರಿಗೆ ವಿವರಣೆ ನೀಡಲಿದ್ದಾರೆ. ಅದಕ್ಕೂ ಮುನ್ನ ಚೌಹಾಣ್ ಅವರು ವಿಬಿ ಜಿ ರಾಮ್ ಜಿ ಕಾಯ್ದೆಯ ಬಗ್ಗೆ ಸುದ್ದಿಗೋಷ್ಠಿ ನಡೆಸಲಿದ್ದಾರೆ. ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಲಿದ್ದಾರೆ.



ದೇಶದಲ್ಲೇ ಮೊದಲ ಬಾರಿಗೆ ವಿಧಾನಸಭೆಯಲ್ಲಿ ವಿಬಿಜಿರಾಮ್‌ಜಿ ಕುರಿತು ಕರ್ನಾಟಕ ಸರ್ಕಾರ ವಿಶೇಷ ಚರ್ಚೆಗೆ ಮುಂದಾಗಿದೆ. ಹೀಗಾಗಿ ವಿಪಕ್ಷ ನಾಯಕರಿಗೆ ಈ ವಿಶೇಷ ಸದನ ಬಹಳ ಮುಖ್ಯವಾಗಿದೆ. ಸದನದಲ್ಲಿ ನಾಯಕರು ಈ ಕಾಯ್ದೆಯ ಸಂಪೂರ್ಣ ಚಿತ್ರಣ ನೀಡಬೇಕಾದ ಅಗತ್ಯವಿದೆ.

ಕಾಂಗ್ರೆಸ್ ಆರೋಪ, ಆಕ್ಷೇಪಗಳಿಗೆ ಸದನದಲ್ಲೇ ದೋಸ್ತಿಗಳು ತಕ್ಕ ಕೌಂಟರ್ ಕೊಡಲು ನಿರ್ಧರಿಸಿದ್ದಾರೆ. ವಿಶೇಷ ಸದನದಲ್ಲಿ ಸರ್ಕಾರದ ವೈಫಲ್ಯ ಪುಟ 2ಕ್ಕೆ



## ಇಂದಿನಿಂದ ಮುಡುಕುತೊರೆ ಜಾತ್ರೆ

ಮೈಸೂರು: ಜಿಲ್ಲೆಯ ಮುಡುಕುತೊರೆಯಲ್ಲಿ ಭ್ರಮರಾಂಬ-ಮಲ್ಲಿಕಾರ್ಜುನಸ್ವಾಮಿ ಜಾತ್ರಾ ಮಹೋತ್ಸವ ಜ.22ರಿಂದ 31ರವರೆಗೆ ನಡೆಯಲಿದೆ. ಜ.28ರಂದು ಬ್ರಹ್ಮರಥೋತ್ಸವ, 31ರಂದು ತೆಪ್ಪೋತ್ಸವ ಹಾಗೂ ಫೆ.4ರಂದು ಗಿರಿಪ್ರದಕ್ಷಿಣೆ ಜರುಗಲಿದೆ.

ಜಾತ್ರೆಯ ಪೋಸ್ಟರ್ ಬಿಡುಗಡೆ ಮಾಡಿ ಡಾ.ಎಚ್.ಸಿ.ಮಹದೇವಪ್ಪ ಬುಧವಾರ ಬಿಡುಗಡೆ ಮಾಡಿ ಮಾತನಾಡಿದರು. ಇತಿಹಾಸ ಪ್ರಸಿದ್ಧ ಮುಡುಕುತೊರೆ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಜಾತ್ರೆಯಲ್ಲಿ ಭಕ್ತರ ಪ್ರಮಾಣ ಜಾಸ್ತಿ ಇರುತ್ತದೆ. ವಿಜೃಂಭಣೆಯಿಂದ ಜರುಗುವ ಉತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವೂ ನಡೆಯಲಿದೆ ಎಂದು ಸಚಿವರು ತಿಳಿಸಿದರು.

ಶಾಸಕ ಜಿ.ಟಿ.ದೇವೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿ.ಪಂ. ಸಿಇಒ ಎಸ್.ಯುಕೇಶ್‌ಕುಮಾರ್ ಇತರರು ಉಪಸ್ಥಿತರಿದ್ದರು

## ಧರ್ಮಸ್ಥಳ: 7 ಬುರುಡೆ ಎಫ್‌ಎಸ್‌ಎಲ್‌ಗೆ ರವಾನೆ

**ಮಂಗಳೂರು:** ಧರ್ಮಸ್ಥಳ ಬುರುಡೆ ರಹಸ್ಯ ಪ್ರಕರಣದಲ್ಲಿ ಬಂಗ್ಲೆಗುಡ್ಡೆಯಲ್ಲಿ ಸಿಕ್ಕ 7 ಅಸ್ಥಿಪಂಜರಗಳನ್ನ ವಿಶೇಷ ತನಿಖಾ ತಂಡ ಎಫ್‌ಎಸ್‌ಎಲ್‌ಗೆ ರವಾನೆ ಮಾಡಿದೆ.

ಬುರುಡೆ ಪ್ರಕರಣದ ತನಿಖೆ ಚುರುಕುಗೊಳಿಸಿದ್ದ ಎಸ್‌ಐಟಿ ತಂಡ, ಬಂಗ್ಲೆಗುಡ್ಡೆ ಅರಣ್ಯದಲ್ಲಿ ಉತ್ಖನನ ಕೈಗೊಂಡಿತ್ತು. ಸೆ.17ರಂದು 5 ಅಸ್ಥಿಪಂಜರ, ಸೆ.18ರಂದು 2 ಅಸ್ಥಿಪಂಜರ ಪತ್ತೆಯಾಗಿತ್ತು. ಈ ಅಸ್ತಿಗಳನ್ನ ಬೆಂಗಳೂರು ಎಫ್‌ಎಸ್‌ಎಲ್ ಕೇಂದ್ರಕ್ಕೆ ರವಾನೆ ಮಾಡಲಾಗಿದೆ. ಬೆಳ್ತಂಗಡಿ ಎಸ್‌ಐಟಿ ಕಚೇರಿಯಿಂದ ಹೆಚ್ಚಿನ ತನಿಖೆಗಾಗಿ ಬೆಂಗಳೂರಿನ ಮಡಿವಾಳದಲ್ಲಿರುವ ಎಫ್‌ಎಸ್‌ಎಲ್ ಕೇಂದ್ರಕ್ಕೆ ಅಸ್ಥಿಪಂಜರಗಳ ರವಾನೆ ಮಾಡಲಾಗಿದೆ.

ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸಿದ್ದ ಎಸ್‌ಐಟಿ ಕಳೆದ ನ.20ರಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ತನಿಖಾ ಪ್ರಾಥಮಿಕ ವರದಿ ಸಲ್ಲಿಸಿತ್ತು.

### ಭಾರತಕ್ಕೆ ಬರದಿದ್ದರೇ ಟೂರ್ನಿಯಿಂದ ಹೊರಕ್ಕೆ

## ಬಾಂಗ್ಲಾಗೆ ಐಸಿಸಿಯಿಂದ 24 ಗಂಟೆ ಅಂತಿಮ ಗಡುವು!

**ದೆಹಲಿ:** 2026ರ ಟಿ20 ವಿಶ್ವಕಪ್ ಪ್ರಾರಂಭಕ್ಕೂ ಮುನ್ನವೇ ಭುಗಿಲೆದ್ದಿರುವ ವಿವಾದವನ್ನು ಪರಿಹರಿಸಲು ಇಂದು ನಡೆದ ಐಸಿಸಿ ಮಂಡಳಿ ಸಭೆಯಲ್ಲಿ ಬಾಂಗ್ಲಾದೇಶಕ್ಕೆ ಅಂತಿಮ ಗಡುವು ನೀಡಲಾಗಿದೆ. ಬಹುಮತದ ಮತದ ಆಧಾರದ ಮೇಲೆ ಭಾರತದಲ್ಲಿ ಆಡುವುದು ಅಥವಾ ಟೂರ್ನಿಯಿಂದ ಹೊರಹೋಗುವುದು ಎರಡರಲ್ಲಿ ಒಂದನ್ನು ಆಯ್ಕೆ ಮಾಡಲು ಅವರಿಗೆ ಸೂಚಿಸಲಾಗಿದೆ. ಬಾಂಗ್ಲಾದೇಶ 24 ಗಂಟೆಗಳ ಒಳಗೆ ಈ ಬಗ್ಗೆ ನಿರ್ಧರಿಸಬೇಕು. ಭದ್ರತಾ ಕಾಳಜಿಯನ್ನು ಉಲ್ಲೇಖಿಸಿ, ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (BCB) ತಮ್ಮ ಪುಟ 2ಕ್ಕೆ

## ಜ.24ರಿಂದ ಸತತ 4 ದಿನ ಬ್ಯಾಂಕ್ ಬಂದ್

**ನವದೆಹಲಿ:** ಬ್ಯಾಂಕ್‌ಗಳಿಗೆ ವಾರದಲ್ಲಿ 5 ದಿನ ಮಾತ್ರ ಕೆಲಸ ನಿಗದಿಪಡಿಸಬೇಕೆಂದು ಆಗ್ರಹಿಸಿ ಸಿಬ್ಬಂದಿ ಜ.27ರಂದು ಮುಷ್ಕರ ನಡೆಸಲಿರುವ ಹಿನ್ನೆಲೆಯಲ್ಲಿ ಜ.24ರಿಂದ 27ರವರೆಗೆ ನಾಲ್ಕು ದಿನಗಳ ಕಾಲ ಬ್ಯಾಂಕ್ ವಹಿವಾಟು ಬಂದ್ ಆಗಿರಲಿವೆ.

ವಾರಕ್ಕೆ 2 ದಿನ ರಜೆ ಹಾಗೂ 5 ದಿನ ಕೆಲಸ ನಿಗದಿಪಡಿಸಬೇಕೆಂದು ಆಗ್ರಹಿಸಿ ಬ್ಯಾಂಕ್ ಸಿಬ್ಬಂದಿ ಜ.27ರಂದು ರಾಷ್ಟ್ರಮಟ್ಟದಲ್ಲಿ ಮುಷ್ಕರ ನಡೆಸಲು ಮುಂದಾಗಿದ್ದಾರೆ. ಈ ಮುಷ್ಕರದಿಂದ ಒಟ್ಟು




ನಾಲ್ಕು ದಿನಗಳ ಕಾಲ ಬ್ಯಾಂಕ್ ಬಂದ್ ಆಗಲಿದೆ. ಜ.24ರಂದು ನಾಲ್ಕನೇ ಶನಿವಾರ, ಜ.25 ಭಾನುವಾರ, ಜ.26 ಗಣರಾಜ್ಯೋತ್ಸವ ಹಾಗೂ ಜ.27ರಂದು ಬ್ಯಾಂಕ್ ಮುಷ್ಕರ ಇರುತ್ತದೆ. ಹೀಗಾಗಿ ನಾಲ್ಕು ದಿನ ಹಣ ವಹಿವಾಟು, ಚೆಕ್ ಕ್ಲಿಯರೆನ್ಸ್, ಡಿಮ್ಯಾಂಡ್ ಡ್ರಾಫ್ಟ್, ಪಾಸ್‌ಬುಕ್ ಎಂಟ್ರಿ ಸೇರಿದಂತೆ ಪ್ರಮುಖ ವ್ಯವಹಾರಗಳು ನಡೆಯುವುದಿಲ್ಲ. ಈ ನಾಲ್ಕು ದಿನದಲ್ಲಿ ಮೊಬೈಲ್ ಬ್ಯಾಂಕಿಂಗ್, ಇಂಟರ್‌ನೆಟ್ ಬ್ಯಾಂಕಿಂಗ್, ಯುಪಿಐ ಹಾಗೂ ಎಟಿಎಂ ಸೇವೆಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ. ಡಿಜಿಟಲ್ ಮೂಲಕ ಹಣ ವರ್ಗಾವಣೆ ಹಾಗೂ ಪಾವತಿಗಳಿಗೆ ಯಾವುದೇ ಸಮಸ್ಯೆ ಇರಲ್ಲ.

# ಪರಂಪರೆ, ಪರಿಸರಕ್ಕೆ ಧಕ್ಕೆ ಆಗಲ್ಲ

## ಚಾಮುಂಡಿ ಬೆಟ್ಟದ ಅಭಿವೃದ್ಧಿಗೆ ಯೋಜನೆ: ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ

**ಮೈಸೂರು:** ಚಾಮುಂಡಿ ಬೆಟ್ಟದ ಪರಂಪರೆಗೆ ಯಾವುದೇ ಧಕ್ಕೆ ಆಗದಂತೆ ಪ್ರಸಾದ್ ಯೋಜನೆಯಡಿ ಬೆಟ್ಟದ ಅಭಿವೃದ್ಧಿ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ಪ್ರಸಾದ್ ಯೋಜನೆ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವ ಭಕ್ತಾದಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಭಕ್ತರಿಗೆ ಯಾವುದೇ ತೊಂದರೆ ಆಗದಂತೆ ದರ್ಶನಕ್ಕೆ ಸೂಕ್ತ ವ್ಯವಸ್ಥೆ ಮಾಡಲು ಅಭಿವೃದ್ಧಿ ಮಾಡಲಾಗುತ್ತಿದೆ. ಈ ಸಂದರ್ಭ ದಲ್ಲಿ ಚಾಮುಂಡಿ ಬೆಟ್ಟದ ಪರಿಸ ರಕ್ಕೆ ಧಕ್ಕೆ ಆಗದಂತೆ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಚಾಮುಂಡಿ ಬೆಟ್ಟದ ನಿವಾಸಿಗ ಳಿಗೆ ಯಾವುದೇ ತೊಂದರೆ ಮಾಡು ವುದಿಲ್ಲ. ಆದ್ದರಿಂದಲೇ ಚಾಮುಂಡಿ ಬೆಟ್ಟದ ನಿವಾಸಿಗಳ ಅಹವಾಲು ಸ್ವೀಕರಿಸಲಾಗುತ್ತಿದೆ. ಪುಟ 2ಕ್ಕೆ




### ಚಾಮುಂಡಿ ಬೆಟ್ಟದ ಪರಿಸರಕ್ಕೆ ಧಕ್ಕೆ

**ಮೈಸೂರು:** ವಿಶ್ವವಿಖ್ಯಾತ ಚಾಮುಂಡಿ ಬೆಟ್ಟ ದಲ್ಲಿ ಪ್ರಸಾದ್ ಯೋಜನೆಯಡಿ ಕಾಮಗಾರಿ ನಡೆಸುವುದನ್ನು ವಿರೋಧಿಸಿ ಬುಧವಾರ ಪರಿಸರ ಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಮುಖಂಡ ಡಾ.ಸುಶ್ರೂತ್ ಗೌಡ ಮಾತನಾಡಿ, ಪ್ರಸಾದ್ ಯೋಜನೆ 2014ರಲ್ಲಿ ಜಾರಿ ಗೊಂಡಿದೆ. ಪುನರುಜ್ಜೀವನ ಹಾಗೂ ಅಭಿವೃದ್ಧಿ ಕೆಲಸಕ್ಕೆ ಅನುದಾನ ನೀಡುವುದು ಕೇಂದ್ರ ಸರ್ಕಾರದ ಯೋಜನೆ ಉದ್ದೇಶ. ಪುಟ 2ಕ್ಕೆ

## ವಿವಾದದ ಕೇಂದ್ರವಾದ ಪ್ರಸಾದ್ ಯೋಜನೆ?

### ಅಭಿವೃದ್ಧಿಗೆ ಸ್ಥಳೀಯರ ವಿರೋಧ, ಆದರೂ ನಿಲ್ಲದ ಕಾಮಗಾರಿ

**ಮೈಸೂರು:** ಚಾಮುಂಡಿ ಬೆಟ್ಟದಲ್ಲಿ ಪ್ರಸಾದ್ ಯೋಜನೆಯಡಿ ಕೈಗೊಂಡಿರುವ ಅಭಿವೃದ್ಧಿ ಈಗ ವಿವಾದದ ಕೇಂದ್ರ ಬಿಂದುವಾಗಿದೆ. ಸ್ಥಳೀಯರ ವಿರೋಧದ ನಡುವೆಯೂ ಜಿಲ್ಲಾಡಳಿತ ಕಾಮಗಾರಿ ಮುಂದುವರಿಸಿದೆ.

ಕೇಂದ್ರ ಸರ್ಕಾರ ದೇಶದ 48 ಪಾರಂಪರಿಕ ದೇವಾಲಯಗಳ ಅಭಿವೃದ್ಧಿಗೆ ಅನುದಾನ ನೀಡಿದೆ. ಇದರಲ್ಲಿ ಮೈಸೂರಿನ ಚಾಮುಂಡೇಶ್ವರಿ ದೇವಾಲಯವೂ ಒಂದು. ಈ ಮಹತ್ವದ ಪ್ರಸಾದ್ ಯೋಜನೆಯಡಿಯಲ್ಲಿ 2023ರ ಪುಟ 2ಕ್ಕೆ







### ಪ್ರಾಧಿಕಾರಕ್ಕೆ ಸಂಬಂಧವಿಲ್ಲ

ಪ್ರಸಾದ್ ಯೋಜನೆ ಕಾಮಗಾರಿ ಪೂರ್ಣವಾಗಿ ಕೇಂದ್ರ ಸರ್ಕಾರ ಮತ್ತು ಪ್ರವಾಸೋದ್ಯಮ ಇಲಾಖೆ ಮೂಲಕ ನೇರವಾಗಿ ಜಾರಿಗೊಳಿಸಲಾಗುತ್ತಿದೆ. ಇದಕ್ಕೂ ಪ್ರಾಧಿಕಾರಕ್ಕೂ ಯಾವುದೇ ಸಂಬಂಧವಿಲ್ಲ. ಇದರ ಪೂರ್ಣ ಮಾಹಿತಿ ಪ್ರವಾಸೋದ್ಯಮ ಇಲಾಖೆಯದ್ದೇ ಆಗಿದೆ. ಕಾನೂನು ಪ್ರಕಾರವೇ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಶ್ರೀ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ತಿಳಿಸಿದರು.

**ಮೊದಲ ಪುಟದಿಂದ**

## ಪರಿಸರಕ್ಕೆ ಧಕ್ಕೆ

ಇದನ್ನು ಕಾರ್ಯ ಗತ ಮಾಡುವುದು ಇಲ್ಲಿಯ ಸ್ಥಳೀಯ ಆಡಳಿತ. ಆದರೆ, ಚಾಮುಂಡಿ ಬೆಟ್ಟದ ಲ್ಲಿರುವ ಅಂಗಡಿ ಮಾಲೀಕರು, ಸಂಸದರು ಸೇರಿ ಸ್ಥಳೀಯರು ಸೇರಿದಂತೆ ಯಾರ ಗಮನಕ್ಕೂ ತಾರದೇ ಏಕ ಪಕ್ಷೀಯವಾಗಿ ರಾತ್ರೋರಾತ್ರಿ ಕಾಮಗಾರಿ ಆರಂಭವಾಗಿದೆ ಎಂದು ಆರೋ ಪಿಸಿದರು. ಆಗಮ ಶಾಸ್ತ್ರದ ಪ್ರಕಾರ ಗರ್ಭಗುಡಿ ಸಮೀ ಪದಲ್ಲಿ ಅವೈಜ್ಞಾನಿಕವಾಗಿ ರಾತ್ರೋರಾತ್ರಿ ಕಾಮ ಗಾರಿ ಮಾಡುತ್ತಿದ್ದಾರೆ. ಕಾಮಗಾರಿ ಆರಂಭಕ್ಕೂ ಮುನ್ನ ಯಾರ ಅಭಿಪ್ರಾಯವನ್ನು ಪಡೆದಿಲ್ಲ. ಪರಿಸರ ಸುಸ್ಥಿರತೆ ಕಾಪಾಡಿಕೊಂಡು ಕಾಮಗಾರಿ ಮಾಡಬೇಕಿತ್ತು. ಕಾಮಗಾರಿ ಅವೈಜ್ಞಾನಿಕವಾಗಿ ನಡೆಯುತ್ತಿದೆ ಎಂದು ಟೀಕಿಸಿದರು.

ಕಾಮಗಾರಿ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಸಂಸದ ಯದುವೀರ್ ತಿಳಿಸಿದ್ದಾರೆ. ಸಂಸದರಿಗೆ ವಿಷಯ ತಿಳಿಸದೇ ರಾತ್ರೋರಾತ್ರಿ ಕಾಮಗಾರಿ ನಡೆಯುತ್ತಿರುವುದು ಯಾವ ಉದ್ದೇಶಕ್ಕೆ ಎಂಬುದು ಬಹಿರಂಗ ಆಗಬೇಕಿದೆ. ಯೋಜನೆಯ 40 ಕೋಟಿ ರೂ. ಪೈಕಿ 15 ಕೋಟಿ ಹಣವನ್ನು ಗುಂಡಿ ತೆಗೆಯುವುದಕ್ಕೆ ನೀಡಿದ್ದಾರೆಂದರೆ ಇದನ್ನು ಕೂಲಂಕಷವಾಗಿ ವಿಚಾರಣೆ ಮಾಡಬೇಕಿದೆ ಎಂದರು. ನ್ಯಾಯಾಲಯದ ಆದೇಶವಿದ್ದರೂ ಕಾಮ ಗಾರಿ ನಡೆಸುತ್ತಿರುವುದು ಅಕ್ಷಮ್ಯ ಅಪರಾಧವಾ ಗಿದೆ. ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಗಮನ ಹರಿಸಬೇಕಿದೆ. ಸಿಎಂ ಗಮನಕ್ಕೂ ತಾರದೇ ಜಿಲ್ಲಾ ಡಳಿತ ಏಕಪಕ್ಷೀಯವಾಗಿ ನಿರ್ಧಾರ ಮಾಡಬಾರದು. ಈ ಭಾಗದ ಶಾಸಕ, ಸಂಸದ, ಗ್ರಾಮಸ್ಥ, ಜನರ ಸಹಮತದಿಂದ ಕಾಮಗಾರಿ ಮಾಡಬೇಕಿದೆ. ಇಲ್ಲಿನ ಪರಿಸರ, ಸುಸ್ಥಿರತೆ, ಪಾರಂಪರಿಕ ಕಟ್ಟಡ ನೋಡಬೇಕಿದೆ. ಗರ್ಭಗುಡಿಗೆ ಧಕ್ಕೆಯಾಗಿ ಅನಾಹುತ ನಡೆದರೆ ಜಿಲ್ಲಾಡಳಿತವೇ ಹೊಣೆ ಆಗಲಿದೆ ಎಂದು ಎಚ್ಚರಿಸಿದರು.ಪರಿಸರ ಬಳಗದ ಸದಸ್ಯರಾದ ಪರಶುರಾಮ ಗೌಡ, ಗಂಟಯ್ಯ, ಲೀಲಾ ಶಿವಕುಮಾರ್, ಲೀಲ ವೆಂಕಟೇಶ್, ಶೈಲಜೇಶ್, ಸುಶೀಲ ಮಹಾದೇವಪ್ಪ, ಬಿಜೆಪಿ ಮುಖಂಡ ಮೈಕಾ ಪ್ರೇಮಕುಮಾರ್, ಭಾನುಪ್ರಸಾದ್, ವಿಜಯಕುಮಾರ್, ಬಾಮಿನಿ ಶೆಣೈ ಮುಂತಾದವರು ಭಾಗವಹಿಸಿದ್ದರು.

## ಪರಿಸರಕ್ಕೆ ಧಕ್ಕೆ ಆಗಲ್ಲ

ನಿವಾಸಿಗಳ ಸಲಹೆ ಗಳನ್ನು ಪಡೆದು ಅದರಂತೆ ಯೋಜನೆ ರೂಪಿಸಿ ಎಂದು ಅಧಿ ಕಾರಿಗಳಿಗೆ ಸೂಚನೆ ನೀಡಿದರು. ಶಾಸಕ ಜಿ.ಟಿ ದೇವೇಗೌಡ ಮಾತನಾಡಿ, ವಿವಿಐಪಿ ದರ್ಶನದ ಸಂಧರ್ಭದಲ್ಲಿ ಗಣ್ಯರ ಜೊತೆಗೆ ಹಿಂಬಾಲಕರು ನುಗ್ಗುವುದರಿಂದ ಗೊಂದಲ ಉಂಟಾಗುತ್ತದೆ. ಇದಕ್ಕೆ ಒಂದು ಪರಿಹಾರ ರೂಪಿಸಬೇಕು. ದೇವಸ್ಥಾನದ ಪ್ರವೇಶಕ್ಕೆ ಒಂದು ಕಡೆ, ಹೊರಗೆ ಬರಲು ಒಂದು ಕಡೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಈ ಹಿಂದೆ ಬೆಟ್ಟದಲ್ಲಿ ಅಂಗಡಿ ಮಳಿಗೆ ಇದ್ದ ವರಿಗೆ, ಮೂಲದಲ್ಲಿ ಇದ್ದ ಅರ್ಹರಿಗೆ ಮಾತ್ರ ಮಳಿಗೆ ಮಾಡಲು ಅವಕಾಶ ನೀಡಬೇಕು ಎಂದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಪ್ರಸಾದ್ ಯೋಜನೆಯಡಿ ಚಾಮುಂಡಿ ಬೆಟ್ಟ ಅಭಿವೃದ್ಧಿಗೆ 45.70 ಕೋಟಿ ಅನುದಾನ ಮಂಜೂರು ಆಗಿದೆ. ಸುಗಮ ದರ್ಶನಕ್ಕೆ ವ್ಯವಸ್ಥೆ ಮಾಡಲು ಸರತಿ ಸಾಲಿಗೆ ಕಲ್ಲಿನ ಮಂಟಪ ಮಾಡಲಾಗುತ್ತಿದೆ. ಮಹಾಬಲೇಶ್ವರ ದೇವಸ್ಥಾನದ ಪಕ್ಕದಲ್ಲಿ ಸರದಿ ಸಾಲಿನಲ್ಲಿ ಬಂದು ದೇವಸ್ಥಾನದ ಮುಂಭಾಗದಲ್ಲಿ ಬಂದು ಸೇರುತ್ತದೆ ಎಂದು ಮಾಹಿತಿ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ಚಾಮುಂಡಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ಉಪಸ್ಥಿತರಿದ್ದರು.

## ಭಾಷಣ ಓದಲೇಬೇಕು:

ಪ್ರಕಾರ ನಡೆಯುತ್ತಾರೆಂದು ನನಗೆ ನಂಬಿಕೆ ಇದೆ. ಸರ್ಕಾರ ಕೊಟ್ಟ ಭಾಷಣವನ್ನು ರಾಜ್ಯಪಾಲರು ಓದಬೇಕು ಅಂತಾ ಸಭಾಪತಿ ಹೊರಟ್ಟಿ ಹೇಳಿರುವುದನ್ನು ನಾನು ಅನುಮೋದಿಸುತ್ತೇನೆ ಎಂದು ಸ್ಪೀಕರ್ ಖಾದರ್ ಹೇಳಿದ್ದಾರೆ.

## ದೋಸ್ತಿ ಸಿದ್ಧತೆ

ಗಳ ವಿರುದ್ಧ ಚರ್ಚೆ ಮತ್ತು ಹೋರಾಟಗಳ ಬಗ್ಗೆ ಚರ್ಚಿಸಿ ತಂತ್ರಗಾರಿಕೆ ರೂಪಿಸಲಾಗುತ್ತದೆ.

## ತಿದ್ದುಪಡಿಗೆ ಸೂಚನೆ

ಹೊರಟ್ಟಿ ಆಗಮಿಸಿ ಮನವೊಲಿಸಲು ಮುಂದಾಗಿದ್ದಾರೆ.

## ಚಿನ್ನಸ್ವಾಮಿಯಲ್ಲಿ ಐಪಿಎಲ್

ಮಡಿಕೇರಿ ತಾಲೂಕಿನ ಗಾಳಿಬೀಡು ಗ್ರಾಪಂ ವ್ಯಾಪ್ತಿಯ ವಣಚಲಿನಲ್ಲಿ ಅಕ್ರಮವಾಗಿ ರೆಸಾರ್ಟ್ ನಿರ್ಮಾಣ ಮಾಡಿರುವ ಆರೋಪ ಕೇಳಿಬಂದಿತ್ತು.

# ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಯಿರಿ: ಮರಿಯಾಲಶ್ರೀ



ಚಾಮರಾಜನಗರ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಂಸ್ಕೃತಿ, ಸಂಸ್ಕಾರ, ನೈತಿಕ ಶಿಕ್ಷಣ ಕಲಿಯುವ ಮೂಲಕ ಉತ್ತಮ ಶಿಕ್ಷಣವನ್ನು ಪಡೆದುಕೊಳ್ಳಬೇಕು ಎಂದು ಮರಿಯಾಲ ಮುರುಘರಾಜೇಂದ್ರಸ್ವಾಮಿ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮಿ ತಿಳಿಸಿದರು.

ನಗರ ಸಮೀಪದ ಶ್ರೀ ಮುರುಘರಾಜೇಂದ್ರ ಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ 2025-26 ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕಲಿಕೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಈ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡರೆ ಸಮಾಜದಲ್ಲಿ ಉತ್ತಮ ಸ್ಥಾನವನ್ನು ಪಡೆಯುವ ಜೊತೆಗೆ ಜೀವನದಲ್ಲಿ ಎದುರಾಗುವ ಅಡೆತಡೆಗಳನ್ನು ಮೀರಿ ಬೆಳೆಯಲು ಸಾಧ್ಯವಾಗುತ್ತದೆ. ಎಂದರು. ಶ್ರೀ ಮುರುಘರಾಜೇಂದ್ರಸ್ವಾಮಿ ಭಾವಚಿತ್ರಕ್ಕೆ ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಶ್ರೀ ಜಿ. ಕುಮಾರಸ್ವಾ ಮೀಜಿ ಮಾತನಾಡಿ, ಶ್ರೀಮಠದ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ನೀವು ಉತ್ತಮ ಫಲಿತಾಂಶ ಪಡೆಯುವುದರ ಜೊತೆಗೆ ಪ್ರತಿಭಾವಂತರಾಗಿ ಹೊರ ಬರುವ ಕಾಲ ಪಕ್ವವಾಗಿದೆ. ಪೋಷಕರು ಆಶಯವನ್ನು ಈಡೇರಿಸುವ ಮೂಲಕ ಉನ್ನತ ಸ್ಥಾನಗಳಿಗೆ ಹೋಗಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಪಿ. ಮಹದೇವ 'ಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಳೆದ 2023-24 ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಶೇಕಡಾ 100 ಫಲಿತಾಂಶ ಬಂದಿದೆ. 2024-25 ನೇ ಸಾಲಿನಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕೆ.ಪಿ ಪ್ರಭಾಮಣಿ 600 ಕ್ಕೆ 590 ಅಂಕ ಪಡೆದು ಇಡೀ ಜಿಲ್ಲೆಯಲ್ಲೇ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ ಯಾಗಿದ್ದರು ಎಂದು ತಿಳಿಸಿದರು. ಕಾಲೇಜು ಶಿಕ್ಷಣ ವಿಭಾಗ ಉಪ ನಿರ್ದೇಶಕ ಎಚ್ ಎನ್ ಪುಟ್ಟಗೌರಮ್ಮ ಸಾಂಸ್ಕೃತಿಕ & ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಉಪನ್ಯಾಸಕ ಆಶೋಕ್, ಸಂಸ್ಕೃತ ಪಾಠಶಾಲಾ ಮುಖ್ಯ ಶಿಕ್ಷಕ ಕೆ.ಜಿ ನಾಗೇಂದ್ರ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ತನುಶ್ರೀ, ಸ್ವಾಗತಿಸಿದರೆ, ಮಾನಸ ನಿರೂಪಿಸಿ, ಮಂಗಳ ವಂದನಾರ್ಪಣೆ ಮಾಡಿದರು.

# ಮೈಸೂರಿನಲ್ಲಿ ಬಿಜೆಪಿ ಸಂಭ್ರಮ




ಮೈಸೂರು: ಭಾರತೀಯ ಜನತಾ ಪಕ್ಷದ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅವರ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮೈಸೂರು ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಬಿಜೆಪಿ ನಗರ ಹಾಗೂ ಜಿಲ್ಲಾ ಬಿಜೆಪಿ ಕಾರ್ಯಕರ್ತರು ವಿವಿಧ ಜಯಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು. ಈ ವೇಳೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ನೇಮಕದಿಂದಾಗಿ ಬಿಜೆಪಿಯಲ್ಲಿ ಹೊಸ ಶಕ್ತಿ ಬಂದಂತೆ ಆಗಿದೆ.ಮುಂದಿನ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಶಕ್ತಿಯುತವಾಗಿ ಬೆಳೆಸುವ ನಿಟ್ಟನಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಮತ್ತಷ್ಟು ಗಟ್ಟಿಗೊಳಿಸುವಲ್ಲಿ ಈ ಬೆಳವಣಿಗೆ ಆಶಾದಾಯಕವಾಗಿದೆ ಎಂದರು.

ಮಾಜಿ ಸಂಸದ ಪ್ರತಾಪಸಿಂಹ ಮಾತನಾಡಿ, ಅತ್ಯಂತ ಯುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಎಂಬ ಹೆಗ್ಗಳಿಕೆ ಪಾತ್ರರಾಗಿದ್ದಾರೆ. ಅತ್ಯಂತಯುವಕರಿಗೆ ಪಕ್ಷದ ಜವಾಬ್ದಾರಿ ಕೊಡಬೇಕೆಂಬ ನರೇಂದ್ರಮೋದಿಯವರ ಸಂಕೇತ ಇದಾಗಿದೆ. ಇವರಿಗೆ ಚಾಮುಂಡೇಶ್ವರಿ ಹೆಚ್ಚಿನ ಶಕ್ತಿ ನೀಡಿ ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಲಿ ಎಂದರು. ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ ಮಾಜಿ ಅಧ್ಯಕ್ಷ ಫಣೀಶ್, ಮಾಜಿ ಮೇಯರ್ ಶಿವಕುಮಾರ್, ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ರಾಜ್ಯ ಬಿಜೆಪಿ ಮಾಧ್ಯಮ ವಕ್ತಾರ ಮಹೇಶ್, ಮಾಜಿ ಉಪಮೇಯರ್ ಶೈಲೆಂದ್ರ, ನಗರಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ಬಿಜೆಪಿ ಮುಖಂಡರಾದ ಪಡುವಾರಹಳ್ಳಿ ರಾಮಕೃಷ್ಣ, ದಿನೇಶ್‌ಗೌಡ,ಪುನೀತ್, ಅರುಣ್ ಕುಮಾರ್, ರಾಕೇಶ್ ಗೌಡ ಇನ್ನಿತರರು ಉಪಸ್ಥಿತರಿದ್ದರು.


# ಗ್ರಾಮೀಣ ಪ್ರದೇಶಗಳಲ್ಲಿ ಕುಡಿವ ನೀರಿನ ಸಮಸ್ಯೆಯಾಗದಿರಲಿ

## ಜಿಪಂ ಸಿಇಓ ಮೋನಾ ರೋತ್ ಸೂಚನೆ | ಪ್ರಗತಿ ಪರಿಶೀಲನಾ ಸಭೆ

ಚಾಮರಾಜನಗರ, ಬೇಸಿಗೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಕೆ.ಡಿ.ಪಿ ಸಭಾಂಗಣದಲ್ಲಿಂದು ಜಿಲ್ಲಾ ಪಂಚಾಯತ್ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಕಂಡುಬರುವ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಸಮಸ್ಯಾತ್ಮಕ ಗ್ರಾಮಗಳಿಗೆ ಸಂಬಂಧಪಟ್ಟ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಖುದ್ದು ಭೇಟಿ ನೀಡಿ ಶಾಶ್ವತ ಪರಿಹಾರಕ್ಕೆ ಮುಂದಾಗಬೇಕು. ಜಲ ಜೀವನ್ ಮಿಷನ್ ಯೋಜನೆಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ



ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಸಮಸ್ಯೆ ಹೊಂದಿರುವ ಗ್ರಾಮಗಳನ್ನು ಗುರುತಿಸಿ ನೀರಿನ ಸಮರ್ಪಕ ಪೂರೈಕೆಗೆ ಕ್ರಮವಹಿಸಬೇಕು ಎಂದರು.

ನರೇಗಾ ಕ್ರಿಯಾ ಯೋಜನೆಯಲ್ಲಿ ಅಂತರ್ಜಲ ವೃದ್ಧಿಸುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಬೇಕು. ಮುಖ್ಯವಾಗಿ ಚೆಕ್ ಡ್ಯಾಂಗಳ ನಿರ್ಮಾಣ, ಬೋರ್‌ವೆಲ್ ರೀಜಾರ್ಜ್ ಫಿಟ್, ಕೆರೆ ಅಭಿವೃದ್ಧಿ ಹಾಗೂ ಇತರೆ ಅಂತರ್ಜಲ ಮಟ್ಟ ವೃದ್ಧಿಸುವಂತಹ ಕಾಮಗಾರಿಗಳನ್ನು ಕೈಗೊಳ್ಳಬೇಕು. ಇಂತಹ ಕಾಮಗಾರಿಗಳನ್ನು ಅನುಷಾಷಠನಗೊಳಿಸುವುದರಿಂದ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಬರದಂತೆ ನೋಡಿಕೊಳ್ಳಬಹುದು. ನರೇಗಾ ಯೋಜನೆಯಡಿ ಬಾಕಿ ಇರುವ ಸಾಮಾಗ್ರಿ ಮೊತ್ತವನ್ನು ಪಾವತಿಸುವಂತೆ ಮತ್ತು ಸಕ್ರಿಯ ಕೂಲಿಕಾರ್ಮಿಕರ ಇ-ಕೆ.ವೈ.ಸಿ ಹಾಗೂ ಬೂದು ನೀರು ನಿರ್ವಹಣಾ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸೂಚನೆ ನೀಡಿದರು. ಇದೇ ವೇಳೆ ನರೇಗಾ ಯೋಜನೆಯಡಿ ನಿಗದಿತ ಗುರಿಗನುಗುಣವಾಗಿ ಶೇ. 100 ರಷ್ಟು ಪ್ರಗತಿ ಹಾಗೂ ತೆರಿಗೆ ವಸೂಲಾತಿಯಲ್ಲಿ ಹೆಚ್ಚು ಪ್ರಗತಿ ಸಾಧಿಸಿದ ಗ್ರಾಮ ಪಂಚಾಯಿತಿಗಳು ಮತ್ತು ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ತಾಂತ್ರಿಕ ಸಹಾಯಕರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ, ಮುಖ್ಯ ಯೋಜನಾಧಿಕಾರಿ ಜಿ. ಹೊನ್ನರಾಜು, ಮುಖ್ಯ ಲೆಕ್ಕಾಧಿಕಾರಿ ಬಸವರಾಜು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ಸಂತೋಷ್, ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸು, ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ಲೆಕ್ಕಾಧಿಕಾರಿಗಳು, ಸಹಾಯ ನಿರ್ದೇಶಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# 25ರಿಂದ ಓಪನ್ ಹೌಸ್ ಕಾರ್ಯಕ್ರಮ



ಮೈಸೂರು: ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿನ ಸಿಪೆಟ್‌ನಲ್ಲಿ ಜ.23ರಿಂದ 25ರವರೆಗೆ ನಿತ್ಯ ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ಓಪನ್ ಹೌಸ್ ಕಾರ್ಯಕ್ರಮ ಆಯೋಜಿಸುವ ಮೂಲಕ ಪ್ಲಾಸ್ಟಿಕ್ ತಂತ್ರಜ್ಞಾನ, ಅದರ ಬಳಕೆ ಕುರಿತಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುವುದೆಂದು ಸಹಾಯಕ ತಾಂತ್ರಿಕ ಅಧಿಕಾರಿ ಲಕ್ಷ್ಮಣ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪ್ಲಾಸ್ಟಿಕ್ ಕೈಗಾರಿಕೆಯಲ್ಲಿ ಬಳಸುವ ಆಧುನಿಕ ತಂತ್ರಜ್ಞಾನ, ಸುಧಾರಿತ ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ, ಪ್ರಯೋಗಾಲಯದ, ಟೂಲ್ ರೂಂ, ಪ್ಲಾಸ್ಟಿಕ್ ಉತ್ಪನ್ನಗಳ ತಯಾರಿಕಾ ಘಟಕಗಳನ್ನು ವೀಕ್ಷಿಸಬಹುದಾಗಿದೆ. ಪ್ಲಾಸ್ಟಿಕ್ ನಿಷೇಧದ ಮಾತು ಎಲ್ಲೆಡೆ ಕೇಳಿ ಬರುತ್ತಿದ್ದರೂ ಹಲವಾರು ಕ್ಷೇತ್ರಗಳಲ್ಲಿ ಅವುಗಳ ಬಳಕೆ ಅನಿವಾರ್ಯವಾಗಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ವಿಪುಲ ಉದ್ಯೋಗಾವಕಾಶಗಳಿವೆ. ತಮ್ಮ ಸಂಸ್ಥೆ ಸಹಾ ಹಲವಾರು ಕೋರ್ಸ್ ನಡೆಸುತ್ತಿದ್ದು, ವಿದ್ಯಾರ್ಥಿ ವೇತನ ಮೊದಲಾದ ಸೌಲಭ್ಯಗಳವೆ. ಈ ಕುರಿತು ಮಾಹಿತಿ ನೀಡಲಾಗುವುದೆಂದರು. ಮತ್ತೋರ್ವ ಸಹಾಯಕ ತಾಂತ್ರಿಕ ಅಧಿಕಾರಿ ಭುವನೇಶ್ವರಿ ಇದ್ದರು.

# ಸಿದ್ದರಾಮಯ್ಯನವರೇ 5 ವರ್ಷ ಸಿಎಂ : ಎಂಎಲ್ಸಿ ರಾಜೇಂದ್ರ

ಮೈಸೂರು:ನನ್ನ ಪ್ರಕಾರ ಸಿದ್ದರಾಮಯ್ಯ ಐದು ವರ್ಷ ಸಿಎಂ ಆಗಿರುತ್ತಾರೆ ಎಂದು ವಿಧಾನಪರಿಷತ್ ಸದಸ್ಯ ರಾಜೇಂದ್ರ ರಾಜಣ್ಣ ತಿಳಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಎಂಎಲ್ ಸಿ ರಾಜೇಂದ್ರ ರಾಜಣ್ಣ, ಸಿದ್ದರಾಮಯ್ಯ 5 ವರ್ಷ ಸಿಎಂ ಆಗಿರಬೇಕೆಂಬುದು ನಮ್ಮ ಆಸೆಯಾಗಿದೆ. ಈಗಾಗಲೇ ಸಿಎಂ ಸಿದ್ದರಾಮಯ್ಯ ಬಜೆಟ್ ತಯಾರಿ ಆರಂಭಿಸಿದ್ದಾರೆ. ಹೈಕಮಾಂಡ್ ಮಾತಿಗೆ ನಾನು ಬದ್ಧ ಅಂತಾ ಕೂಡ ಸಿಎಂ ಹೇಳಿದ್ದಾರೆ ನನ್ನ ಪ್ರಕಾರ ಸಿದ್ದರಾಮಯ್ಯ 5 ವರ್ಷ ಸಿಎಂ ಆಗಿರುತ್ತಾರೆ ಎಂದರು. ಡಿಕೆ ಶಿವಕುಮಾರ್ ಸಿಎಂ ಆಗಲು ಯಾರದ್ದು ಕೂಡ ವಿರೋಧ ಇಲ್ಲ. ಹೈಕಮಾಂಡ್ ನಾಯಕರು ತೀರ್ಮಾನ ಮಾಡಬೇಕು ತಾನೇ? ನನ್ನ ತಂದೆ ರಾಜಣ್ಣ ಡಿಕೆ ಶಿವಕುಮಾರ್ ನಡುವೆ ಜಗಳವೇನು ಇಲ್ಲ. ಅವರಿಬ್ಬರು ಹಳೇ ಸ್ನೇಹಿತರು. ರಾಜಕೀಯವಾಗಿ ನಿಲುವು ಬೇರೆ ಅಷ್ಟೆ. ರಾಜಣ್ಣ ಡಿಕೆ ಶಿವಕುಮಾರ್ ಇಬ್ಬರು ಚೆನ್ನಾಗಿದ್ದಾರೆ ಎಂದು ಸ್ಪಷ್ಟಪಡಿಸಿದರು.



**ಮೊದಲ ಪುಟದಿಂದ**

## 24 ಗಂಟೆ ಗಡುವು!

ಪಂದ್ಯವನ್ನು ಭಾರತದಿಂದ ಶ್ರೀಲಂಕಾಕ್ಕೆ ಸ್ಥಳಾಂತರಿಸುವಂತೆ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಖಅಅ)ಯನ್ನು ಕೋರಿತ್ತು. ಬುಧವಾರ ನಡೆದ ಸಭೆಯಲ್ಲಿ ಐಸಿಸಿ ಅವರ ಎಲ್ಲಾ ಬೇಡಿಕೆಗಳನ್ನು ತಿರಸ್ಕರಿಸಿದ್ದು 24 ಗಂಟೆಯೊಳಗೆ ನಿರ್ಧಾರ ತೆಗೆದುಕೊಳ್ಳುವಂತೆ ಅಂತಿಮ ಗಡುವು ನೀಡಿದೆ. ಐಸಿಸಿ ಮಂಡಳಿಯ ಸಭೆಯಲ್ಲಿ ಎಲ್ಲಾ ಪೂರ್ಣ ಸದಸ್ಯ ರಾಷ್ಟ್ರಗಳ ನಿರ್ದೇಶಕರು ಭಾಗವಹಿಸಿದ್ದರು. ಐಸಿಸಿ ಅಧ್ಯಕ್ಷ ಜಯ್ ಶಾ ಅವರ ಜೊತೆಗೆ, ಬಿಸಿಬಿ ಅಧ್ಯಕ್ಷ ಅಮಿನುಲ್ ಇಸ್ಲಾಂ, ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ, ಎಸ್‌ಎಲ್‌ಸಿ ಅಧ್ಯಕ್ಷ ಶಮ್ಮಿ ಸಿಲ್ವಾ, ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ, ಕ್ರಿಕೆಟ್ ಆಸ್ಟ್ರೇಲಿಯಾ ಅಧ್ಯಕ್ಷ ಮೈಕ್ ಬೈರ್ಡ್, ಜಿಂಬಾಬ್ವೆ ಕ್ರಿಕೆಟ್ ಅಧ್ಯಕ್ಷ ತವೆಂಗಾ ಮುಕುಹ್ಲಾನಿ, ಕ್ರಿಕೆಟ್ ವೆಸ್ಟ್ ಇಂಡೀಸ್ ಅಧ್ಯಕ್ಷ ಕಿಶೋರ್ ಶಾಲೋ, ಕ್ರಿಕೆಟ್ ಐರ್ಲೆಂಡ್ ಅಧ್ಯಕ್ಷ ಬ್ರಿಯಾನ್ ಮೆಕ್‌ನೈಸ್, ಕ್ರಿಕೆಟ್ ನ್ಯೂಜಿಲೆಂಡ್ ಪ್ರತಿನಿಧಿ ರೋಜರ್ ಟ್ವಾಸ್, ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಅಧ್ಯಕ್ಷ ರಿಚರ್ಡ್ ಥಾಂಪ್ಸನ್, 0-ಭಾಗವಹಿಸಿದ್ದರು.

## ವಿವಾದದ ಪ್ರಸಾದ್

ಜೂನ್‌ನಲ್ಲಿ ತಿರುಪತಿ ಮಾದರಿಯಲ್ಲಿ ಭಕ್ತರಿಗೆ ಮೂಲಸೌಕರ್ಯ ಕಲ್ಪಿಸುವ ಉದ್ದೇಶದಿಂದ ಯೋಜನೆ ಘೋಷಣೆ ಮಾಡಿತು.

ಯೋಜನೆಗೆ ಕೇಂದ್ರದಿಂದ 30 ಕೋಟಿ, ರಾಜ್ಯದಿಂದ 16 ಕೋಟಿ ರೂ. ಅನುದಾನ ನಿಗದಿಯಗಿದೆ. ಈ ಪೈಕಿ ಕೇಂದ್ರ ಸರ್ಕಾರದಿಂದ 32 ಕೋಟಿ ರೂ. ಬಿಡುಗಡೆಯಾಗಿದೆ. ಬೆಟ್ಟದಲ್ಲಿ ತಾತ್ಕಾಲಿಕ ಮಂಟಪ, ಶಾಶ್ವತ ಕ್ಯೂ ಮಂಟಪ, ಟಿಕೆಟ್ ಕೌಂಟರ್, ಮಹಿಷಾಸುರ ಪ್ರತಿಮೆ ಬಳಿ ಮಲ್ಟಿಪರ್ಪಸ್ ಸೆಂಟರ್, ಹೈಟೆಕ್ ಶೌಚಾಲಯ, ಚಪ್ಪಲಿ ಸ್ಟ್ಯಾಂಡ್‌ಗಳು, ವೀಕ್ಷಣಾ ಸ್ಥಳಗಳಲ್ಲಿ ಮಂಟಪಗಳ ನಿರ್ಮಾಣ ಕಾಮಗಾರಿ ಒಳಗೊಂಡಿದೆ. ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಮತ್ತು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆ ಅಡಿಯಲ್ಲಿ 9 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಆದರೆ, ಮೂಲ ದೇವಾಲಯದ ಪಕ್ಕದಲ್ಲೇ ಕಾಮಗಾರಿ ಆರಂಭಿಸಿರುವುದಕ್ಕೆ ಪರಿಸರವಾದಿಗಳು, ನಿವಾಸಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

# 25ರಂದು ಲಯನ್ಸ್ ಸಮ್ಮೇಳನ



ಮೈಸೂರು: ಅಂತರ ರಾಷ್ಟ್ರೀಯ ಲಯನ್ಸ್ ಜಿಲ್ಲೆ 317ಜಿ ನ ಪ್ರಾಂತೀಯ ಸಮ್ಮೇಳನ ಜ.25ರ ಬೆಳಗ್ಗೆ 8ಕ್ಕೆ ವಿಶ್ವೇಶ್ವರನಗರದ ಅಕ್ಕ ಮಹಾದೇವಿ ರಸ್ತೆಯ ಬಿಎಐ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಾಂತೀಯ ಅಧ್ಯಕ್ಷ ಬಿ.ಜೆ.ಮನು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ವೇಳೆ ಸೇವಾ ಕಾರ್ಯವಾಗಿ ಸುಮಾರು 3 ಲಕ್ಷ ಮೌಲ್ಯದ ಹೊಲಿಗೆ ಯಂತ್ರ, ಲ್ಯಾಪ್ ಟಾಪ್, ಟ್ರ್ಯಾಕ್ ಸೂಟ್ ಮೊದಲಾದವನ್ನು ಅರ್ಹರಿಗೆ ವಿತರಿಸಲಾಗುವುದೆಂದರು. ಅತಿಥೇಯ ಸಮಿತಿ ಅಧ್ಯಕ್ಷ ಬಿ.ಎಂ.ಸುಧಾಕರ್ ಮಾತನಾಡಿ, ಇದೇ ವೇಳೆ ಸಮಾಜದಲ್ಲಿ ಸಾಧನೆ ಮಾಡಿರುವವರನ್ನು ಗುರುತಿಸಿ ಇತರರಿಗೆ ಸ್ಫೂರ್ತಿ ನೀಡುವ ಅಂಗವಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕ ನರಸಿಂಹ ಮೂರ್ತಿರನ್ನು ಸನ್ಮಾನಿಸಲಾಗುವುದೆಂದರು. ಡಾ.ಕೃಷ್ಣೇಗೌಡ, ರಮೇಶ್‌ಕುಮಾರ್, ಸಿದ್ದೇಗೌಡ, ಮಾದೇಶ್ ಇತರರು ಹಾಜರಿದ್ದರು.

# ಸಿದ್ದಗಂಗಾ ಶ್ರೀ 7ನೇ ವರ್ಷದ ಪುಣ್ಯಸ್ಮರಣೆ

## ತಾಲ್ಲೂಕು ವೀರಶೈವ ಲಿಂಗಾಯಿತ ಮಹಾಸಭಾ ವತಿಯಿಂದ ಆಯೋಜನೆ

ಕೆ.ಆರ್.ಪೇಟೆ: ತಾಲ್ಲೂಕು ವೀರಶೈವ ಲಿಂಗಾಯಿತ ಮಹಾಸಭಾ ವತಿಯಿಂದ ತ್ರಿವಿಧ ದಾಸೋಹಿ ಸಿದ್ದಗಂಗಾ ಮಠದ ಡಾ.ಶಿವಕುಮಾರ ಮಹಾಸ್ವಾಮೀಜಿ ಅವರ 7ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮ ನಡೆಯಿತು.

ಶಾಸಕರಾದ ಹೆಚ್.ಟಿ.ಮಂಜು ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಿದ್ದಗಂಗಾ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ನಂತರ ಅನ್ನ ದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕರು ಮಾತನಾಡಿ ಸಿದ್ದಗಂಗಾ ಮಠದ ಪರಮಪೂಜ್ಯ ಜಗದ್ಗುರು ಪದ್ಮಭೂಷಣ, ಕರ್ನಾಟಕ ರತ್ನ ಡಾ.ಶಿವಕುಮಾರಸ್ವಾಮೀಜಿಯವರು ಅನ್ನ, ಅಕ್ಷರ, ಆರೋಗ್ಯ ಸೇವೆಗಳನ್ನು ನೀಡುವ ಮೂಲಕ ಲಕ್ಷಾಂತರ ಮಂದಿಯ ಜೀವನಕ್ಕೆ ದಾರಿದೀಪವಾಗಿದ್ದಾರೆ. ತಮ್ಮ ಸಿದ್ದಗಂಗಾ ಮಠದಲ್ಲಿ ಓದುವ ವಿದ್ಯಾರ್ಥಿಗಳಿಗೆ ಮಾನವೀಯ ಮೌಲ್ಯಗಳು ಹಾಗೂ ಸದ್ಗುಣಗಳನ್ನು ಕಲಿಸುವ ಮೂಲಕ ಉತ್ತಮ ಸಂಸ್ಕಾರ ಕಲಿಸಿಕೊಟ್ಟಿದ್ದಾರೆ ಇಂತಹ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದ ಸಿದ್ದಗಂಗಾ ಶ್ರೀಗಳಿಗೆ ಭಾರತ ಸರ್ಕಾರವು ಭಾರತ ರತ್ನ ಪ್ರಶಸ್ತಿ ನೀಡಿದರೆ ಪ್ರಶಸ್ತಿಯ ಮೌಲ್ಯವೇ



ಹೆಚ್ಚಾಗುತ್ತದೆ ಎಂದು ಅಭಿಪ್ರಾಯಪಟ್ಟ ಶಾಸಕ ಹೆಚ್.ಟಿ. ಮಂಜು ಅವರು 111ವರ್ಷಗಳ ಸಾರ್ಥಕ ಬದುಕು ನಡೆಸಿದ ಸಿದ್ದಗಂಗಾ ಶ್ರೀಗಳ ತತ್ವಾ ಆದರ್ಶ ಗುಣಗಳನ್ನು ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಿಸಬಹುದಾಗಿದೆ. ಕೆ.ಆರ್.ಪೇಟೆ ಪಟ್ಟಣದ ಪ್ರಮುಖ ವೃತ್ತದಲ್ಲಿ ಡಾ.ಶಿವಕುಮಾರಸ್ವಾಮೀಜಿಯವರ ಪುತ್ಥಳಿಯನ್ನು ಸ್ಥಾಪನೆ ಮಾಡಲು ಪುರಸಭೆಯ ಆಡಳಿತಾಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ವಹಿಸುವುದಾಗಿ ಭರವಸೆ ನೀಡಿದರು. ತಾಲ್ಲೂಕು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾದ ಸುಜೇಂದ್ರಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾಪನಹಳ್ಳಿ ಗವೀಮಠ ಶ್ರೀಗಳಾದ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ತಾಲ್ಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಸುಜೇಂದ್ರಕುಮಾರ್, ಕಾಪನಹಳ್ಳಿ ಗವೀಮಠ ಶ್ರೀಗಳಾದ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ, ಮುಖಂಡರಾದ ಬ್ಯಾಂಕ್ ಪರಮೇಶ್, ತೋಟಪ್ಪಶೆಟ್ಟಿ, ಬಸವಲಿಂಗಪ್ಪ,ವಕೀಲ ಪುರ ಮಂಜುನಾಥ್, ಬಸವನಹಳ್ಳಿ ಪ್ರತಾಪ್, ಮೋದೂರು ಮಂಜುನಾಥ್, ಎಂ.ಎಸ್. ಶಿವಮೂರ್ತಿ, ಪ್ರಕಾಶ್, ಭಾರತೀಪುರ ಪುಟ್ಟಣ್ಣ, ತಾಲ್ಲೂಕು ಆರ್.ಟಿ.ಓ.ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗದ ಅಧ್ಯಕ್ಷ ಗಂಜಿಗೆರೆ ಮಹೇಶ್, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಉಪಾಧ್ಯಕ್ಷ ಎಲ್.ಐ.ಸಿ.ಶಿವಪ್ಪ, ನಾಡಬೋಗನಹಳ್ಳಿ ಎಂ.ಎಸ್.ಈರಪ್ಪ(ದಿನೇಶ್), ಕೆ.ಎಸ್. ಗಂಗಾಧರ್, ಸೋಮನಾಥಪುರ ಚಂದ್ರಶೇಖರ್, ತಾಲ್ಲೂಕು ಮಹಾಸಭಾ ಪ್ರಧಾನ ಕಾರ್ಯದರ್ಶಿ ಸಿ.ಎನ್. ಅಪ್ಪಾಜಿ, ಉಪಾಧ್ಯಕ್ಷ ಚೋಕನಹಳ್ಳಿ ಪ್ರಕಾಶ್, ಜಗದಾಂಬ, ಖಜಾಂಚಿ ವಸಂತಪ್ಪ, ನಿರ್ದೇಶಕರಾದ ಡಿ.ಸಿ.ಕುಮಾರ್ , ರಾಜಶೇಖರ್, ವೈ.ಸಿ.ಕುಮಾರ್, ಮತ್ತಿತರರು ಇದ್ದರು.

# ಜ.24, 25 ಹಾಲು ಕರೆಯುವ ಸ್ಪರ್ಧೆ



ಮೈಸೂರು: ನಗರದ ದೇವರಾಜ ಮೊಹಲ್ಲಾ ಕಾಟಪ್ಪ ಗರಡಿ ರಸ್ತೆಯಲ್ಲಿನ ಮೈಸೂರು ನಗರ ಗೋಪಾಲಕರ ಸಂಘದ ವತಿಯಿಂದ ಜ. 24 ಮತ್ತು 25 ರಂದು ನಗರದ ಜೆ.ಕೆ. ಮೈದಾನದಲ್ಲಿ ಅಧಿಕ ಹಾಲು ಕರೆಯುವ ಸ್ಪರ್ಧೆ ಹಾಗೂ ಬಹುಮಾನ ವಿತರಣಾ ಸಮಾರಂಭ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಹಾಗೂ ಪಾಲಿಕೆ ಮಾಜಿ ಸದಸ್ಯರಾದ ಡಿ.ನಾಗಭೂಷಣ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜ.24 ಹಾಗೂ 25ರ ಬೆಳಗ್ಗೆ 6.30 ಹಾಗೂ ಸಂಜೆ 5.30ಕ್ಕೆ ಸ್ಪರ್ಧೆ ನಡೆಯಲಿದೆ. ಮೊದಲನೇ ಬಹುಮಾನವಾಗಿ 1.50 ಲಕ್ಷ, 2ನೇ ಬಹುಮಾನವಾಗಿ 1ಲಕ್ಷ, 3ನೇ ಬಹುಮಾನವಾಗಿ 75 ಸಾವಿರ, 4ನೇ ಬಹುಮಾನವಾಗಿ 50 ಸಾವಿರ ಹಾಗೂ 5ನೇ ಬಹುಮಾನವಾಗಿ 25 ಸಾವಿರ ರೂ.ಗಳಲ್ಲದೆ ಎಲ್ಲ ವಿಜೇತರಿಗೆ ಟ್ರೋಫಿ ಸಹಾ ನೀಡಲಾಗುವುದು. ಸ್ಪರ್ಧೆಯಲ್ಲಿ ಮೈಸೂರು ಜಿಲ್ಲೆ ಮಾತ್ರವಲ್ಲದೆ, ಬೆಂಗಳೂರು, ಕೋಲಾರ, ದೇವನಹಳ್ಳಿ, ಆನೇಕಲ್ ಹಾಗೂ ಹಾಸನ ಮೊದಲಾದ ಕಡೆಗಳಿಂದಲೂ ಗೋಪಾಲಕರು ತಮ್ಮ ಹಸುಗಳನ್ನು ಕರೆ ತರುತ್ತಿದ್ದಾರೆಂದರು. ಜ.25 ರಂದು ಮಧ್ಯಾಹ್ನ 12ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಕೃಷ್ಣನ ಮೂರ್ತಿಯನ್ನೊಳಗೊಂಡ ಭವ್ಯ ಮೆರವಣಿಗೆ ಹೊರಟು ನಾರಾಯಣಶಾಸ್ತ್ರಿ ರಸ್ತೆಯ ಜೆ.ಕೆ. ಮೈದಾನದ ತಲುಪಲಿದೆ. ಸಂಜೆ 6.30ಕ್ಕೆ ಅಲ್ಲಿ ಕಾರ್ಯಕ್ರಮ ನಡೆಯಲಿದ್ದು, ವಿಜೇತ ಹಸುಗಳ ಮಾಲೀಕರಿಗೆ ಬಹುಮಾನ ವಿತರಿಸಲಾಗುವುದು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸು ವರು. ಬಸವರಾಜು, ಎಸ್.ಕೆ.ದಿನೇಶ್, ಚೇತನ ರಾಜ್, ರಾಕೇಶ್ ಪಾಪಣ್ಣ, ಡಾ.ಜ್ಯೋತಿ ಉಮೇಶ್ ಇನ್ನಿತರರು ವೇದಿಕೆಯಲ್ಲಿರುವರು. ಮಧ್ಯಾಹ್ನದ ಮೆರವಣಿಗೆಯನ್ನು ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರೆಂದರು. ಗೋಪಿ, ಬಸವರಾಜ್, ಶೇಖರ್, ಮಹದೇವ್, ಶಿವಣ್ಣ, ಮಂಜುನಾಥ್ ಹಾಜರಿದ್ದರು.

## ವಿದ್ಯುತ್ ಶಾರ್ಟ್ ಸರ್ಕ್ಯೂಟ್: ಮನೆ ಸಂಪೂರ್ಣ ಭಸ್ಮ

ಚಾಮರಾಜನಗರ, ಕೊಳ್ಳೇಗಾಲ ತಾಲ್ಲೂಕಿನ ಮುಳ್ಳೂರು ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದಾಗಿ ಗ್ರಾ.ಪಂ ಮಾಜಿ ಉಪಾಧ್ಯಕ್ಷ ಮನೆ ಸಂಪೂರ್ಣ ಸುಟ್ಟುಹೋಗಿರುವ ಘಟನೆ ಬುಧವಾರ ಸಂಭವಿಸಿದೆ.

ಮುಳ್ಳೂರು ಗ್ರಾ.ಪಂ ಮಾಜಿ ಉಪಾಧ್ಯಕ್ಷ ಹಾಗೂ ಹಾಲಿ ಸದಸ್ಯ ಮಹೇಶ್ ಎನ್ನುವರ ಮನೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದಾಗಿ ಸುಮಾರು 40 ಗ್ರಾಂ ಚಿನ್ನಾಭರಣ(ಓಲೆ, ಉಂಗುರ, ಸರ) 2 ಲಕ್ಷ ನಗದು, ಟಿ.ವಿ, ಫ್ಯಾನ್, ಮನೆ ಹಾಗೂ ಇತರೆ ದಾಖಲಾತಿ ಸೇರಿದಂತೆ ಎಲೆಕ್ಟ್ರಿಕ್ ಸಾಮಾಗ್ರಿಗಳು ಸುಟ್ಟು ಕರುಕಲಾಗಿದೆ.

ಮನೆಯಲ್ಲಿ ಇದ್ದಕ್ಕಿದಂತೆ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಹತ್ತಿ ಉರಿಯಲು ಆರಂಭಿಸಿತ್ತು. ಇದನ್ನು ಗಮನಿಸಿದ್ದ ಸಾರ್ವಜನಿಕರು ಗ್ಯಾಸ್ ಹೊತ್ತಿದೆ ಎಂದು ದೂರದಿಂದ ಬೆಂಕಿ ನಂದಿಸಲು ಪ್ರಯತ್ನ ಮಾಡಿ ನಂತರ ಅಗ್ನಿಶಾಮಕ ದಳದವರನ್ನು ಕರೆಯಿಸಿ ಬೆಂಕಿ ನಂದಿಸುವಷ್ಟರಲ್ಲಿ ಮನೆ ಸಾಮಾನೂ, 2 ಲಕ್ಷ ನಗದು ಹಾಗೂ ಚಿನ್ನಾಭರಣ, ಇತರೆ ಸಾಮಾಗ್ರಿಗಳು, ದಾಖಲಾತಿಗಳು ಸುಟ್ಟು ಹೋಗಿದೆ.

# ಪದವಿಯಷ್ಟೇ ಅಲ್ಲ ಕೌಶಲ್ಯ ಕಲಿಸಿ

## ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಕರೆ




ಮೈಸೂರು: ವಿದ್ಯಾರ್ಥಿಗಳಿಗೆ ಕೇವಲ ಪದವಿ ನೀಡಿದರಷ್ಟೇ ಸಾಲದು ಶಿಕ್ಷಣದೊಂದಿಗೆ ಕೌಶಲ್ಯವನ್ನು ಕಲಿಸುವ ಕೆಲಸ ಆಗಬೇಕಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ತಿಳಿಸಿದರು.

ಮಾನಸಗಂಗೋತ್ರಿಯ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರಿಗೆ ಏರ್ಪಡಿಸಿದ್ದ ರೂಸಾ 2.0 ಪ್ರಾಯೋಜಿತ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ 'ಪರಿಣಾಮಕಾರಿ ಬೋಧನೆಗೆ ಅಗತ್ಯವಾದ ಕೌಶಲ್ಯಗಳು' ಕುರಿತ 2ದಿನಗಳ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹೊಸದೊಂದು ಕ್ರಾಂತಿ ಹುಟ್ಟಲು ಶಿಕ್ಷಣ ವ್ಯವಸ್ಥೆಯಿಂದ ಮಾತ್ರ ಸಾಧ್ಯವಿದೆ. ವಿದ್ಯಾರ್ಥಿಗಳಿಗೆ ಕೌಶಲ್ಯ ಒದಗಿಸಬೇಕಿದೆ. ಅದಕ್ಕಾಗಿ ಶಿಕ್ಷಕರು ಮೊದಲು ಕೌಶಲ್ಯಯುಳ್ಳರಾಗಬೇಕಿದೆ ಎಂದು ಹೇಳಿದರು.

ಶಿಕ್ಷಕರಿಗೆ ಹೊಸತೊಂದನ್ನು ಹುಟ್ಟುಹಾಕುವ ಶಕ್ತಿ ಅವರಲ್ಲಿದೆ. ಅಲ್ಲದೇ ಶಿಕ್ಷಕರಲ್ಲಿ ಕೌಶಲ್ಯದ ಅಗತ್ಯವಿದ್ದು, ಇವತ್ತು ಸಾಮಾಜಿಕ ಮಾಧ್ಯಮಗಳು ಕೃತಕಬುದ್ಧಿ ತಂತ್ರಜ್ಞಾನ ಅದರಲ್ಲಿ ಅಗತ್ಯ ಮಾಹಿತಿಗಳು ಹೆಚ್ಚು ದೊರೆಯುತ್ತವೆ. ಅದನ್ನು ಬಳಸಿಕೊಂಡು ಹೆಚ್ಚು ಕೌಶಲ್ಯಯುಕ್ತ ಕಲಿಕೆ ಒತ್ತು ನೀಡಬೇಕು. ಇದಾದರೆ ಮಾತ್ರ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಸಾಧ್ಯ. ಒಂದು ಭಾಷೆ, ಸಂಸ್ಕೃತಿ ಉಳಿಯಬೇಕಾದರೆ, ಅದು ಸರ್ಕಾರದಿಂದ ಸಾಧ್ಯವಿಲ್ಲ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಮಾತಿನಂತೆ ವಿದ್ಯಾರ್ಥಿಗಳ ಭವಿಷ್ಯ ತರಗತಿ ಕೋಣೆಯಲ್ಲಿದ್ದು, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಕ್ತಿ ಶಿಕ್ಷಕರಿಗಿದೆ. ಹಾಗಾಗಿ ಶಿಕ್ಷಕರಿಗೆ ನಿರಂತರ ಕಲಿಕೆಯಿರಬೇಕು. ಅದರಿಂದ ಮಾತ್ರ ಉತ್ತಮ ಶಿಕ್ಷಕರಾಗಲೂ ಸಾಧ್ಯ ಎಂದರು.

ಉಪನ್ಯಾಸಕ ಬದುಕು ಅದೊಂದು ವಿಶೇಷ ವ್ಯಕ್ತಿತ್ವ. ಸಮಾಜದ ಭವಿಷ್ಯವನ್ನು ಉಜ್ವಲವಾಗಿ ರೂಪಿಸಬಲ್ಲ ಅಗಾಧ ಶಕ್ತಿ ಅವರಲ್ಲಿರುತ್ತದೆ. ಮಕ್ಕಳು ಪೋಷಕರ ಮಾತಿಗಿಂತ ಶಿಕ್ಷಕರ ಮಾತನ್ನು ಹೆಚ್ಚು ಅನುಸರಿಸುತ್ತಾರೆ. ವಿದ್ಯಾರ್ಥಿಗಳ ಮೇಲೆ ಅಪಾರ ಪ್ರಭಾವ ಬೀರಬಲ್ಲವಂತಹವರು. ಇವತ್ತಿನ ಒತ್ತಡ ಬದುಕಿನಲ್ಲೂ ಉಪನ್ಯಾ ಸಕರಿಗೆ ಹೊಸತನ್ನು ಕಲಿಯಲು ಸಿಗುವ ಅವಕಾಶವಿದೆ. ಅದನ್ನು ಸಮರ್ಪಕವಾಗಿ ಉಪಯುಕ್ತಪಡಿಸಿಕೊಳ್ಳಬೇಕೆಂದರು. ಸಂಪನ್ಮೂಲ ವ್ಯಕ್ತಿ ಪ್ರೊ.ವಿಶ್ವನಾಥ್, ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ. ಎಚ್.ಪಿ.ಜ್ಯೋತಿ, ಶಿಬಿರದ ಸಂಯೋಜಕ ಡಾ.ಎಲ್.ನಂಜುಂಡಸ್ವಾಮಿ ಇದ್ದರು.

# ಕಾಲೇಜಿನಲ್ಲಿ ಸಾಂಸ್ಕೃತಿಕ ದಿನಾಚರಣೆ




ಮೈಸೂರು: ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ 11ನೇ ಸಾಂಸ್ಕೃತಿಕ ದಿನವನ್ನು ಆಚರಿಸಲಾಯಿತು.

ಪತ್ರಕರ್ತ ನಾರಾಯಣ ಹೆಬ್ಬಾಳ್ ಮುಖ್ಯಅತಿಥಿಗಳಾಗಿ ಭಾಗವಹಿಸಿ ಅನೇಕ ಸಂಸ್ಥೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ, ಅತ್ಯುತ್ತಮ ಗ್ರಂಥಾಲಯ ಪೋಷಕ, ಶ್ರಮದಾನದ ಅತ್ಯುತ್ತಮ ಎನ್ಎಸ್ಎಸ್ ಸ್ವಯಂಸೇವಕ, ಶೇ.100ಋಷ್ಟು ಹಾಜರಾತಿ ಹೊಂದಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿದರು. ಬಳಿಕ ಮಾತನಾಡಿ ಮಾಧ್ಯಮ ವಲಯದ ಸುದ್ದಿ ಸಂಗ್ರಹ ಸಂಧರ್ಭದ ಸವಾಲುಗಳನ್ನು ತಿಳಿಸಿದರು. ವಿದ್ಯಾರ್ಥಿಗಳಿಗೆ ಇರುವ ಅವಕಾಶಗಳನ್ನು ಸದುಪಯೋಗ ಪಡೆದುಕೊಳ್ಳುವಂತೆ ಹೇಳಿದರು. ಕಾಲೇಜಿನ ಪ್ರಾಂಶುಪಾಲರಾದ ಎನ್. ಅರ್ಚನಾ ಸ್ವಾಮಿ ಇನ್ನಿತರರು ಇದ್ದರು.

## ಕುಲ್ಲಕ್ಷ ಕಾರಣಕ್ಕೆ ಚಾಕು ಇರಿತ

ಗುಂಡ್ಲುಪೇಟೆ; ಯುವಕನೋರ್ವನಿಗೆ ಕುಲ್ಲಕ್ಷ ಕಾರಣಕ್ಕೆ ಗುಂಪೊಂದು ಚಾಕು ಇರಿದಿರುವ ಘಟನೆ ಪಟ್ಟಣದಲ್ಲಿ ನೆನ್ನೆ ರಾತ್ರಿ ನಡೆದಿದೆ.

ಪಟ್ಟಣದ ಮಹದೇವಪ್ರಸಾದ ನಗರದ ನಿವಾಸಿ ಸಾಬಿರ್ ಪಾಷ (22)ಹಲ್ಲೆಗೆ ಒಳಗಾದ ಯುವಕ ಚಾಕು ಇರಿತ ಸಂಬಂಧ ಧನು ಮತ್ತು ಈಶ್ವರ್ ಎಂಬುವವರನ್ನು ಬಂಧಿಸಲಾಗಿದ್ದೆ ಉಳಿದವರು ಪರಾರಿಯಾಗಿದ್ದಾರೆ. ಈ ಘಟನೆ ಗೆ ಸಂಬಂಧಿಸಿದ ವಿವರ. ಪಟ್ಟಣದ ಖುಷಿ ರೆಸಾರ್ಟ್ ಬಳಿ ಟೀ ಕುಡಿಯುತ್ತಿದ್ದ ವೇಳೆ ಕುಲ್ಲಕ್ಷ ವಿಚಾರಕ್ಕೆ ಮಾತಿಗೆ ಮಾತು ಬೆಳೆದು ಅರು ಜನರ ಗುಂಪು ಸಾಬಿರ್ ಪಾಷನ ಮುಖ ಹಾಗೂ ಬೆನ್ನಿಗೆ ಚಾಕು ಇರಿದು ಪರಾರಿಯಾ ಗಿದ್ದಾರೆ ಗಾಯಾಗೂಂಡ ಸಾಬಿರ್ ಪಾಷ ನಿಗೆ ಪಟ್ಟಣದ ತಾಲೂಕು ಸಾರ್ವಜನಿಕ ಅಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೂಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಅಸ್ಪತ್ರೆಗೆ ದಾಖಲು ಮಾಡಲಾಗಿದೆ ಘಟನಾ ಸ್ಥಳಕ್ಕೆ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಮುತ್ತುರಾಜ್. ಡಿವೈಎಸ್ಪಿ ಸ್ನೇಹರಾಜ್. ಪೋಲೀಸ್. ಪೊಲೀಸ್ ಇನ್ಸ್ಪೆಕ್ಟರ್ ಜಯಕುಮಾರ್. ನೀಡಿ ಸಿ ಸಿ ಕ್ಯಾಮೆರಾ ಪರಿಶೀಲನೆ ನಡೆಸ ಮಾಹಿತಿ ಕಲೆಹಾಕಿದ್ದಾರೆ ಈ ಸಂಬಂಧ ಪಟ್ಟಣದ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

# ಎಚ್.ಡಿ.ಕೋಟೆ: ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ








**ಶಿವಕುಮಾರ ತುಂಬಸೋಗೆ**


ಎಚ್.ಡಿ.ಕೋಟೆ: ತುಂಬಸೋಗೆ, ತೊರವಳ್ಳಿ, ಹುಲಿಕುರ, ಇಟ್ನ, ನಿಲುವಾಗಿಲು, ಚೌಡಹಳ್ಳಿ ಗ್ರಾಮಗಳ ಸುತ್ತಮುತ್ತ ಕೆಲ ವರ್ಷಗಳಿಂದ ಕಾಣಿಸಿಕೊಂಡಿದ್ದ ವ್ಯಾಘ್ರ ಸೆರೆ ಹಿಡಿಯಲು ಅರಣ್ಯ ಇಲಾಖೆ ಕೂಂಬಿಂಗ್ ಕಾರ್ಯಾಚರಣೆ ಪ್ರಾರಂಭಿಸಿದೆ.

ಸುತ್ತಮುತ್ತಲ ಗ್ರಾಮಗಳಲ್ಲಿ ಜಾನುವಾರುಗಳನ್ನು ಬಲಿ ಪಡೆಯುವುದರೊಂದಿಗೆ, ಕೆಲವನ್ನು ಗಾಯಗೊಳಿಸಿತ್ತು. ಇದರಿಂದ ಜಮೀನುಗಳತ್ತ ತೆರಳಲು ಜನರು ಭಯಗೊಂಡಿದ್ದರು. ಈ ಎಲ್ಲ ವಿಷಯಗಳನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಗಮನಕ್ಕೂ ಪತ್ರಿಕೆ ತರಲಾಗಿತ್ತು. ಪತ್ರಿಕೆ ವರದಿ ಆಧರಿಸಿ ಸೆರೆಗೆ ಕ್ರಮವಹಿಸುವಂತೆ ಸಚಿವರು ಆದೇಶಿಸಿದ್ದರು. ಹುಲಿ ಉಪಟಳ ಹೆಚ್ಚಾಗುತ್ತಿದ್ದಂತೆ ಹುಲಿ ಸೆರೆಗೆ ಆಗ್ರಹಿಸಿ ಕೆಲ ಸಂಘಟನೆಗಳೊಂ


ಹುಲಿ ಸೆರೆ ಹಿಡಿಯುವಂತೆ ಅರಣ್ಯ ಸಚಿವರ ಆದೇಶ
ವ್ಯಾಘ್ರನ ಉಪಟಳಕ್ಕೆ ಜನತೆ ಹೈರಾಣು
ಮೂರು ವರ್ಷಗಳಿಂದ ಹಲವು ದುರ್ಘಟನೆಗಳಿಗೆ ಸಾಕ್ಷಿಯಾಗಿರುವ ತುಂಬಸೋಗೆ
ಸೆರೆ ಹಿಡಿಯಲು ಕ್ರಮ ಕೈಗೊಳ್ಳದ ಇಲಾಖೆ ವಿರುದ್ಧ ರೈತರ ಆಕ್ರೋಶ
ಕೂಂಬಿಂಗ್ ನಡೆಸುವಂತೆ ಹಲವು ಗ್ರಾಮಸ್ಥರ ಆಗ್ರಹ
ವರ್ತಮಾನ ವರದಿ ಪರಿಣಾಮ

ದಿಗೆ ತಾಲೂಕು ವಲಯ ಅರಣ್ಯಾಧಿಕಾರಿ ಕಚೇರಿಗೆ ಗ್ರಾಮಸ್ಥರು ಲಿಖಿತ ದೂರು ನೀಡಿದ್ದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ರಾ ಸೇರಿದಂತೆ ಹಿರಿಯ ಅಧಿಕಾರಿಗಳು, ರೈತ ಸಂಘಟನೆ ಮುಖಂಡರು ತುಂಬಸೋಗೆ ಗ್ರಾಮಕ್ಕೆ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿ, ಕೆಲ ಸಲಹೆ, ಸೂಚನೆಗಳನ್ನು ನೀಡುವುದರ ಜೊತೆಗೆ ಆಧುನಿಕ ತಂತ್ರಜ್ಞಾನದ ಡ್ರೋನ್ ಕ್ಯಾಮೆರಾ ಮೂಲಕ ಕಾಡು ಪ್ರಾಣಿಗಳ ಚಲನ-ವಲನ ಗುರುತಿಸಲಾಗಿತ್ತು. ಸಿಬ್ಬಂದಿ ನಾರಾಯಣ್ ನೇತೃತ್ವದಲ್ಲಿ ಧನುಷ್, ದೀಪಕ್, ಪರಮೇಶ್ ಸೇರಿ ದಂತೆ ಹೆಚ್ಚಿನ ಸಿಬ್ಬಂದಿ ಗಸ್ತು ತಿರುಗಿ, ಜಮೀನುಗಳಲ್ಲಿ ಮೂಡಿರುವ ಹೆಜ್ಜೆ ಗುರುತು ಗಮನಿಸಿ ಹುಲಿ ಇರುವಿಕೆಯನ್ನು ಖಚಿತಪಡಿಸಿ, ಸಾರ್ವಜನಿಕರು ಒಬ್ಬೊಂಟಿಯಾಗಿ ತಿರುಗಾಡಬಾರದು, ಮುಂಜಾನೆ ಹಾಗೂ ಸಂಜೆ ಸಮಯದಲ್ಲಿ ಜಾಗೃತೆ ವಹಿಸುವಂತೆ ಸೂಚಿಸಿದ್ದರು. ಒಂದೆಡೆ ನಿಲ್ಲದ ವ್ಯಾಘ್ರ ನಾಗರ ಹೊಳೆ ಅಭಯಾರಣ್ಯ ವ್ಯಾಪ್ತಿಯ ಶಿರ ಮಹಳ್ಳಿ ಗ್ರಾಮದ ಮೂಲಕ ನೂರಲ ಕುಪ್ಪೆ, ಅಂತರಸಂತೆ, ಮೊತ್ತ ಗ್ರಾಮಗಳ ಮಾರ್ಗವಾಗಿ ಸಂಚಾರ ಮಾಡುತ್ತಿ ದ್ದರಿಂದ ಸೆರೆ ಹಿಡಿಯುವುದು ಅರಣ್ಯ ಇಲಾಖೆಗೆ ತಲೆನೋವಾಗಿ ಪರಿಣಮಿ ಸಿತ್ತು. ಇದೀಗ, ಹಿರಿಯ ಅರಣ್ಯಾ ಧಿಕಾರಿಗಳ ಮಾರ್ಗದರ್ಶನದೊಂದಿಗೆ ವಲಯ ಅರಣ್ಯಾಧಿಕಾರಿ ರವಿಕುಮಾರ್ ನೇತೃತ್ವದಲ್ಲಿ ಈ ಗ್ರಾಮಗಳ ಸುತ್ತಮುತ್ತ ಸಾಕಾನೆಗಳಾದ ಶ್ರೀಕಂಠ, ಅಶೋಕ, ಅರಣ್ಯ ಸಿಬ್ಬಂದಿಗಳಾದ ಮಹೇಶ, ಸುರೇಂದ್ರ ಹಾಗೂ ಇತರರು ಕೂಂಬಿಂಗ್ ಕಾರ್ಯಾ ಚರಣೆಯಲ್ಲಿ ತೊಡಗಿದ್ದಾರೆ. ಕೂಂಬಿಂಗ್ ಕಾರ್ಯಾ ಚರಣೆ ವೇಳೆ ಗ್ರಾಮಸ್ಥರು ಅನಗತ್ಯವಾಗಿ ಬರಬಾರದು. ಕಾರ್ಯಾಚರಣೆ ಮುಂದುವರೆಯಲಿದ್ದು, ಸಾರ್ವಜನಿಕರು ಅರಣ್ಯ ಇಲಾಖೆಗೆ ಸಹಕಾರ ನೀಡಬೇಕು ಎಂದು ವಲಯ ಅರಣ್ಯಾಧಿಕಾರಿ ರವಿಕುಮಾರ್ ತಿಳಿಸಿದ್ದಾರೆ.



## ಕೃಷ್ಣ ವಂದನ

**ಸ್ನೇಹಾ ಆನಂದ್**



### ಹೇ ಕೃಷ್ಣಾ!

ಇಕ್ಕೋ ನೋಡು ಮುದ್ದು ಮೋಹನ
ಬೆಣ್ಣೆ ಕೊಡುವೆನು!
ಕಡೆದ ಬೆಣ್ಣೆ ರುಚಿಯ ನೋಡು
ದೋಸೆಗೆ ಹಾಕುವೆನು!

ಗೆಳೆಯರ ಸಂಗ ಕೂಡಿಕೊಂಡು
ಚಿನ್ನಿ ಕೋಲು ಆಡುತಿರು!
ಗಲ್ಲಿ ,ಗಲ್ಲಿ ಸುತ್ತಾಡಿ
ಕಾಲು ಸೋತವೆಂದು ಮರುಗದಿರು !

ಗೋಗಳ ಹಿಂಡನು ಬಿಟ್ಟು
ನೀ ಅಗಲಿದಿರು ರಂಗನೇ
ಗೋಪಿಕೆಯರ ಮಧ್ಯೆದಲಿ
ನೀ ಸುಳಿಯದಿರು ಸರಸಿಜಾಕ್ಷನೆ !

ಮೂಡಣ ರವಿ ಕೆಂಪಾಗಿ
ಶಶಿಯು ಮೂಡುವ ಹೊತ್ತಿಗೆ
ಬಂದು ಬಿಡು ಹೇಮ ಗಿರೀಶ
ಗೋಕುಲದ ನಕಾಶೆಗೆ!

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಉತ್ತಮ ಸಮಾಜ, ಸದೃಢ ದೇಶ ಕಟ್ಟಲು ಪ್ರತಿಯೊಬ್ಬರು ತಂಬಾಕು ತ್ಯಜಿಸಿ

## ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜ್ ಕರೆ

ಚಾಮರಾಜನರ, ಜನವರ ಸಮಾಜ, ಸದೃಢ ದೇಶ ಕಟ್ಟಲು ಪ್ರತಿಯೊಬ್ಬರು ತಂಬಾಕು ತ್ಯಜಿಸಬೇಕು. ತಂಬಾಕು ಸೇವನೆ ದುಷ್ಪರಿಣಾಮಗಳ ಕುರಿತು ನಿರಂತರ ಜಾಗೃತಿ ಅಗತ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜ್ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಸಭಾಂಗಣದಲ್ಲಿಂದು ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್‌ಫೋರ್ಸ್ ಮೆಂಟ್ ವಿಭಾಗದ ವತಿಯಿಂದ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಇಲಾಖೆ ಅಧಿಕಾರಿ, ಸಿಬ್ಬಂದಿಗೆ ತಂಬಾಕು ಉತ್ಪನ್ನಗಳ ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಹಾಗೂ ಕೋಟ್ಪಾ-2003ರ ಕಾಯ್ದೆ ಕುರಿತು ಆಯೋಜಿಸಲಾಗಿದ್ದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಕೋಟ್ಪಾ ಕಾಯ್ದೆ ಉಲ್ಲಂಘನೆಗಳ ಮೇಲ್ವಿಚಾರಣೆ ಬಗ್ಗೆ ಪೊಲೀಸ್ ಇಲಾಖೆಯಿಂದ ಹೆಚ್ಚಿನ ನಿಗಾ ವಹಿಸಲಾಗುತ್ತಿದ್ದು, ಈ ಬಗ್ಗೆ ಪ್ರತಿ ದಿನ ಮಾಹಿತಿ ಪಡೆಯಲಾಗುತ್ತಿದೆ. ಉತ್ತಮ ಸಮಾಜ ನಿರ್ಮಾಣ ಮಾಡಲು ಹಾಗೂ ಸದೃಢ ದೇಶ ಕಟ್ಟಲು ತಂಬಾಕು ತ್ಯಜಿಸುವುದು ಅನಿವಾರ್ಯವಾಗಿದೆ. ಅಲ್ಲದೇ ತಂಬಾಕು ದುಷ್ಪರಿಣಾಮಗಳ ಬಗ್ಗೆ ನಿರಂತರ ಜಾಗೃತಿ ಅಗತ್ಯವಾಗಿದೆ. ಮೊದಲು ನಾವು ತಂಬಾಕು ತ್ಯಜಿಸಲು ಸಿದ್ಧ ಹಾಗೂ ಬದ್ಧರಿರಬೇಕು. ಬಳಿಕ ಈ ಬಗ್ಗೆ ಇತರರಿಗೂ ತಿಳುವಳಿಕೆ ಮೂಡಿಸುವ ಕೆಲಸ ಆಗಬೇಕು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಮಾತನಾಡಿ ಮಾದಕ ವಸ್ತುಗಳಲ್ಲಿ ತಂಬಾಕು ಮನರಂಜನಾ ಉತ್ಪನ್ನವಾಗಿದ್ದು, ತಂಬಾಕು ಸೇವನೆಯು ವ್ಯಕ್ತಿಯ ಮೆದುಳನ್ನು ಪ್ರಚೋದಿಸುವುದರಿಂದ ಜನರು ಹೆಚ್ಚು ಹೆಚ್ಚು ಸೇವನೆಗೆ ಒಳಗಾಗುತ್ತಾರೆ. ಇದನ್ನು ನಾನಾ ಬಗೆಗಳಲ್ಲಿ ಉಪಯೋಗಿಸುತ್ತಾರೆ. ತಂಬಾಕು ಉತ್ಪನ್ನಗಳಾದ ಬೀಡಿ, ಸಿಗರೇಟು, ಸಿಗಾರ್, ಹುಕ್ಕಾ, ವಿಮಲ್ ಪಾನ್ ಮಸಾಲ, ಆರ್.ಎಂ.ಡಿ ಹಾಗೂ ನಶ್ಯ ಸೇವನೆ ವ್ಯಕ್ತಿಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದರು.

ಬೀಡಿ, ಸಿಗರೇಟನ್ನು ಸುಟ್ಟಾಗ ಸುಮಾರು 4800 ರಾಸಾಯನಿಕಗಳು ಹೊರಬರುತ್ತದೆ. ಅದರಲ್ಲಿ ಹೆಚ್ಚಿನ ರಾಸಾಯನಿಕಗಳು ಕ್ಯಾನ್ಸರ್ ಖಾಯಿಲೆಗಳನ್ನು ತರುವ ಅಂಶಗಳನ್ನು ಒಳಗೊಂಡಿರುತ್ತದೆ. ನಮ್ಮ ದೇಹದಲ್ಲಿ ತಲೆ ಕೂದಲು ಹಾಗೂ ಕೈ ಕಾಲಿನ ಉಗುರುಗಳು ಬಿಟ್ಟರೆ ಇನ್ನೆಲ್ಲಾ ಅಂಗಗಳನ್ನು ತಲುಪುತ್ತಿದೆ. ಇದರಿಂದಾಗಿ ಪ್ರತಿ ವರ್ಷವು 10 ಲಕ್ಷಕ್ಕೂ ಹೆಚ್ಚು ಜನ ನಿಧನರಾಗುತ್ತಿದ್ದಾರೆ. ಪ್ರಮುಖವಾಗಿ ಹೆಚ್ಚಿನವರು ಪರೋಕ್ಷ ಧೂಮಪಾನಕ್ಕೆ ಒಳಗಾಗುತ್ತಿದ್ದಾರೆ. ತಂಬಾಕು ಸೇವನೆಯನ್ನು ಸಾಮುದಾಯಿಕವಾಗಿ ತಡೆಯಲು ಪ್ರತಿ ಮನೆಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಮೂಲಕ ತಂಬಾಕನ್ನು ಸ್ವಯಂ ನಿ??ಧಿಸುವುದು ಅಗತ್ಯವಾಗಿದೆ. ತಂಬಾಕು ಮುಕ್ತ ಬೀದಿ, ಗ್ರಾಮ, ಹೋಬಳಿ, ತಾಲ್ಲೂಕು, ಜಿಲ್ಲೆಯನ್ನಾಗಿಸಲು ಎಲ್ಲರ ಸಹಕಾರ ಅಗತ್ಯ ಎಂದು ಡಾ. ಚಿದಂಬರ ತಿಳಿಸಿದರು. ತರಬೇತಿ ಕಾರ್ಯಕ್ರಮಕ್ಕೆ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಭೋಧನ ಕಾಲೇಜಿನ ಸಮುದಾಯ ಆರೋಗ್ಯ ವಿಭಾಗದ ಡಾ. ದರ್ಶನ್ ಹಾಗೂ ಡಾ. ವಾಸೀಮ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಜಿಲ್ಲಾ ಎನ್‌ಫೋರ್ಸ್ ಮೆಂಟ್ ಅಧಿಕಾರಿ ಡಾ. ಅಂಕಪ್ಪ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಜಿಲ್ಲಾ ಸಲಹೆಗಾರರಾದ ಪ್ರಶಾಂತ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅವಿರೋಧ ಆಯ್ಕೆ: ನಗರದಲ್ಲಿ ಸಂಭ್ರಮಾಚರಣೆ



ಚಾಮರಾಜನಗರ: ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ನಗರದಲ್ಲಿ ಬಿಜೆಪಿ ಕಾರ್ಯಕರ್ತರು, ಮುಖಂಡರು ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಹೊನ್ನೂರು ಮಹಾದೇವಸ್ವಾಮಿ ಅವರ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು, ಮುಖಂಡರು ನೂತನ ಅಧ್ಯಕ್ಷ ನಿತಿನ್ ನಬಿನ್ ಪ್ರಧಾನಿ ಮೋದಿ, ರಾಜ್ಯಾಧ್ಯಕ್ಷ ವಿಜಯೇಂದ್ರ ಪರ ಜೈಕಾರ ಕೂಗಿ ಸಂಭ್ರಮಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ ಮಾತನಾಡಿ, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಬಿಜೆಪಿ ವತಿಯಿಂದ ಸಿಹಿ ವಿತರಿಸಿ ಸಂಭ್ರಮಾಚರಣೆ ಮಾಡಲಾಗಿದೆ. ಯುವಕರಾದ ನಿತಿನ್ ನಬಿನ್ ಅವರನ್ನು ರಾಷ್ಟ್ರೀಯ ಅಧ್ಯಕ್ಷರಾಗಿ ಮಾಡುವ ಮೂಲಕ ಯುವಕರಿಗೆ ಸ್ಫೂರ್ತಿ ನೀಡಿದೆ. ಪಕ್ಷದಲ್ಲಿ ನಿಷ್ಠೆಯಿಂದ ಕೆಲಸ ಮಾಡಿದರೆ ಅಧಿಕಾರಿ, ಸ್ಥಾನಮಾನ ಸಿಗುತ್ತದೆ. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿರುವ ನಿತಿನ್ ನಬಿನ್ ಅವರಿಗೆ ಜಿಲ್ಲಾ ಬಿಜೆಪಿ ವತಿಯಿಂದ ಅಭಿನಂದನೆ ಸಲ್ಲಿಸಲಾಗುತ್ತದೆ ಎಂದರು. ಚುಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್ ಚಂದ್ರು, ನಗರದ ಮಂಡಲ ಪ್ರಧಾನ ಕಾರ್ಯದರ್ಶಿ ಕೂಸಣ್ಣ, ನಗರ ಸಭಾ ಮಾಜಿ ಸದಸ್ಯ ಶಿವಣ್ಣ, ರವಿ, ಕಾರ್ಯಾಲಯ ಕಾರ್ಯದರ್ಶಿ ರಂಗಸ್ವಾಮಿ, ದೊರೆಸ್ವಾಮಿ, ಮಾರ್ಕೇಟ್ ಕುಮಾರ್ ಇತರರು ಹಾಜರಿದ್ದರು.

## ಶ್ರದ್ಧಾಕೇಂದ್ರಗಳ ಸ್ವಚ್ಛತಾ ಕಾರ್ಯಕ್ರಮ

ಚಾಮರಾಜನಗರ, ತಾಲೂಕಿನ ಚಂದಕವಾಡಿ ವಲಯದ ವ್ಯಾಪ್ತಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ವತಿಯಿಂದ ಧಾರ್ಮಿಕ ಶ್ರದ್ಧಾ ಕೇಂದ್ರಗಳ ಸ್ವಚ್ಛತಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

ದೊಡ್ಡ ಮೋಳೆ ಗ್ರಾಮದಲ್ಲಿ ಲಿಂಗಮ್ಮ ತಾಯಿ ದೇವಾಲಯದ ಸ್ವಚ್ಛತ ಕಾರ್ಯಕ್ರಮವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘದ ಸದಸ್ಯರು ಸ್ವಚ್ಛತ ಕಾರ್ಯಕ್ರಮವನ್ನು ಮಾಡಲಾಯಿತು ಧಾರ್ಮಿಕ ಶ್ರದ್ಧಾ ಕೇಂದ್ರಗಳ ಸ್ವಚ್ಛತೆಯನ್ನು ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಊರಿನ ಗ್ರಾಮಸ್ಥರು ಹಾಗೂ ಸ್ವ ಸಹಾಯ ಸಂಘದ ಸದಸ್ಯರ ಸೇರಿಕೊಂಡು ಸ್ವಚ್ಛಗೊಳಿಸಿದರು. ಈ ಸ್ವಚ್ಛತಾ ಕಾರ್ಯಕ್ರಮದಿಂದ ಶ್ರದ್ಧಾ ಕೇಂದ್ರಗಳ ಪರಿಸರ ಸ್ವಚ್ಛವಾಗಿದ್ದು, ಸಾರ್ವಜನಿಕರಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿತು.

ಈ ಸಂದರ್ಭದಲ್ಲಿ ಶಿವಮ್ಮ ಮಂಗಳಮ್ಮ ಸುಬ್ಬಮ್ಮ ನಾಗಮ್ಮ ಚಂದ್ರಮ್ಮ ಕೆಂಪ್ಪರಾಜಮ್ಮ ಪುಟ್ಟ ನಿಗಮ್ಮ ಲಕ್ಷೀ ಭಾಗ್ಯ ಹಾಗೂ ವಲಯ ಮೇಲ್ವಿಚಾರಕ ಶಶಿಕುಮಾರ್, ಸೇವಾ ಪ್ರತಿನಿಧಿ ರಾಜೇಶ್ವರಿ , ಇತರೆ ಸದಸ್ಯರು ಹಾಜರಾಗಿದ್ದರು.



# ಮಹಿಳೆರ ಸಾಹಿತ್ಯಗಳ ಮುನ್ನಲೆಗೆ ಬರಲಿ

## ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ.ಡಿ.ಆರ್.ಸುನಂದಮ್ಮ ಹೇಳಿಕೆ

ಮೈಸೂರು: ಮಹಿಳಾ ಸಾಹಿತ್ಯವನ್ನ ಅಡುಗೆ ಮನೆಗೆ ಮೀಸಲಿಟ್ಟ ಚರಿತ್ರೆ ಇದೆ. ಈಗಲಾದರೂ 70 ಮತ್ತು 80ರ ಕಾಲದಲ್ಲಿ ಪ್ರಕಟಿಸಿದ ಹೆಣ್ಣು ಮಕ್ಕಳ ಕೃತಿಗಳನ್ನು ಓದುವಂತೆ ಮೀಸಲು ಮಾಡಿ ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ.ಡಿ.ಆರ್.ಸುನಂದಮ್ಮ ಹೇಳಿದರು.

ಇಲ್ಲಿನ ವಿಜಯನಗರದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಕನ್ನಡ ಲೇಖಕಿಯರ ಟ್ರಸ್ಟ್, ಮೈಸೂರು ಶಾಖೆಯ ಕರ್ನಾಟಕ ಲೇಖಕಿಯರ ಸಂಘ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಲೇಖಕಿ ಹಾಗೂ ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಡಾ.ಆರ್.ಸುನಂದಮ್ಮರಿಗೆ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದರು. ಮಹಿಳೆಯರು ರಚಿಸಿದ ಅನೇಕ ಕೃತಿಗಳು ಮರೆಯಾಗಿದೆ. ಇದರಿಂದ



ಮಹಿಳಾ ಸಾಹಿತಿಗಳಿಗೆ ನೋವಾಗಿದೆ. ಓದದಂತಯೇ ಮಾಡಲಾಗಿತ್ತು. ಅವರ ಕೃತಿಗಳನ್ನು, ಸಾಹಿತ್ಯವನ್ನು ಅಡುಗೆ ಮನೆ ಸಾಹಿತ್ಯ ಎನ್ನಲಾಗಿತ್ತು ಎಂದು ತಿಳಿಸಿದರು.

ನಂತರದ ದಿನಗಳಲ್ಲಿ ಸ್ತ್ರೀ ವಾದ ಪ್ರವರ್ತಮಾನಕ್ಕೆ ಬಂದ ಮೇಲೆ ಹೇಗೆ ಹೆಣ್ಣುಮಕ್ಕಳಲ್ಲಿ ಸಮಾಜಮುಖಿ ಜ್ಞಾನವನ್ನು ಸಿಮೀತಗೊಳಿಸಲಾಗಿತ್ತು ಎಂಬುದನ್ನು ಅಧ್ಯಯನ ಮಾಡಲಾಯಿತು. ಭಾರತದಲ್ಲಿ ಮಾತ್ರವಲ್ಲ ಬೇರೆ ದೇಶಗಳಲ್ಲೂ ಮಹಿಳಾ ಸಾಹಿತ್ಯವನ್ನು ಮೀಸಲು ಮಾಡಲಾಗಿತ್ತು. ಒಂದು ಕಾಲದಲ್ಲಿ ದ.ರಾ.ಬೇಂದ್ರೆಯವರ ಅಂಬಿಕಾತಯದತ್ತ ಎಂದು ಬರೆದಿದಕ್ಕೆ ಆಕ್ಷೇಪಗಳು ವ್ಯಕ್ತವಾಗಿದ್ದವು. ಆದರೆ, ಇವತ್ತು ಸಾಹಿತ್ಯ ಕ್ಷೇತ್ರದಲ್ಲಿ ಹೆಣ್ಣು ಮಕ್ಕಳು ದೊಡ್ಡ ಮಟ್ಟಕ್ಕೆ ಬೆಳೆದಿದ್ದಾರೆ. ಸಾಹಿತ್ಯ ಸಮಾರಂಭಗಳಲ್ಲಿಯೂ ಹೆಣ್ಣು ಮಕ್ಕಳು ಬರೆದ ಕೃತಿಗಳನ್ನು ಉಲ್ಲೇಖ ಮಾಡುತ್ತಿರಲಿಲ್ಲ ಎಂದು ತಿಳಿಸಿದರು.

ಲೇಖಕಿ ಡಾ.ಎಂ.ಎಸ್.ವೇದಾ ಅಭಿನಂದನಾ ನುಡಿಗಳನ್ನಾಡಿದರು. ಬಳಿಕ ಲೇಖಕಿ ಹೆಚ್.ಎಸ್.ಮಮತರಾಣಿ ಅಧ್ಯಕ್ಷತೆ ಹಾಗೂ ಲೇಖಕಿ ಬಿ.ಕೆ.ಮೀನಾಕ್ಷಿ, ನಿರ್ವಹಣೆಯೊಂದಿಗೆ ಕವಿಗೋಷ್ಠಿ ನಡೆಯಿತು. ಲೇಖಕಿಯರಾದ ಕೆರೋಡಿ ಲೋಲಾಕ್ಷಿ, ಸುಮ ರಮೇಶ್, ಬಿ.ಸುಜಾತಾ, ಸುಚಿತ್ರಾ ಹೆಗಡೆ, ಕೆ.ಲಕ್ಷ್ಮಿ, ಕೆ.ಟಿ.ಸುಜಾತಾ ರವೀಶ್, ಎಸ್.ಎಲ್. ವರಲಕ್ಷ್ಮಿ ಮಂಜುನಾಥ್ ಕವನ ವಾಚಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಲೇಖಕಿಯರ ಟ್ರಸ್ಟ್ ಉಪಾಧ್ಯಕ್ಷೆ ಮಂಜುಳಾ ಮಾನಸ, ಕಾರ್ಯದರ್ಶಿಗಳಾದ ಹೇಮಾ ನಂದೀಶ್, ಮೀನಾ ಮೈಸೂರು, ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾಧ್ಯಕ್ಷೆ ಉಷಾ ನರಸಿಂಹನ್, ಲಕ್ಷ್ಮಿ ಮತ್ತಿತರರಿದ್ದರು.

# ಪಡುಗೂರು ಮಠದ ಶ್ರೀ ಶಿವಲಿಂಗೇಂದ್ರಸ್ವಾಮೀಜಿ ಮೆಚ್ಚುಗೆ ವ್ಯಕ್ತ

ಗುಂಡ್ಲುಪೇಟೆ: ಸೀಮಿತ ಕಾಲಮಿತಿಯಲ್ಲಿ ಹೊಂಗಹಳ್ಳಿ ಗ್ರಾಮಸ್ಥರು ಮಾರಮ್ಮನ ದೇವಾಲಯ ನಿರ್ಮಿಸುವ ಜತೆಗೆ ಬಂಧು, ಬಾಂಧವರನ್ನು ಬರಮಾಡಿ ಮನೆ ಹಬ್ಬದಂತೆ ಧಾರ್ಮಿಕ ಕಾರ್ಯಕ್ರಮ ನಡೆಸಿರುವುದು ಉತ್ತಮ ವಿಚಾರ ಎಂದು ಪಡುಗೂರು ಮಠದ ಶ್ರೀ ಶಿವಲಿಂಗೇಂದ್ರಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕಿನ ಹೊಂಗಹಳ್ಳಿ ಗ್ರಾಮದಲ್ಲಿ ನಡೆದ ಗ್ರಾಮ ದೇವತೆ ಮಾರಮ್ಮನ ದೇವರ ಪ್ರತಿಷ್ಠಾಪನೆ, ಕಳಸಾರೋಹಣ ಹಾಗೂ ಅಂಕ ಪ್ರತಿಷ್ಠಾಪನೆ ಕಾರ್ಯಕ್ರಮದ ಅಂಗವಾಗಿ ನಡೆದ ಧಾರ್ಮಿಕ ಸಭೆಯ ನೇತೃತ್ವ ವಹಿಸಿ ಮಾತನಾಡಿ 9 ತಿಂಗಳಲ್ಲಿ ತಮ್ಮಲ್ಲೇ 50 ಲಕ್ಷ ಹಣ ಹೊಂದಿಸಿಕೊಂಡು ಮಾರಮ್ಮ ದೇವಾಲಯ ನಿರ್ಮಿಸಿರುವುದು ಧಾರ್ಮಿಕ ನಂಬಿಕೆಗಿರುವ ಶಕ್ತಿ ಎಂದರು.



ಪ್ರಕೃತಿ ಕ್ರಿಯೆಗಳಲ್ಲಿ ಆಗುವ ಬದಲಾವಣೆಗಳಿಂದ ಶುರುವಾಗಿ ಅವ್ಯಕ್ತ ಶಕ್ತಿಯ ಮೇಲಿನ ನಂಬಿಕೆಯೇ ದೇವರು, ಗ್ರಾಮಕ್ಕೆ ದುರಾಚಾರಗಳು ಬಾರದಂತೆ ನೋಡಿಕೊಳ್ಳುವುದು ದೇವರ ಶಕ್ತಿ,ಅದೇ ರೀತಿ ತನ್ನ ತಾನಾರಿಯುವುದರಲ್ಲಿ ದೇವರನ್ನು ಕಾಣು ಎಂದು ಹೇಳಲಾಗುತ್ತದೆ. ನಂಬಿಕೆ ಆಚರಣೆಗಳು ಏನೇ ಆದರೂ ಧಾರ್ಮಿಕ ಕಾರ್ಯಗಳು ಎಲ್ಲರನ್ನೂ ಒಂದು ಮಾಡುತ್ತವೆ ಯುವಕರ ಶ್ರಮ, ಕಾಳಜಿ, ಶಿಸ್ತು ಮೆಚ್ಚುವಂತದ್ದು, ಭವಿಷ್ಯದಲ್ಲೂ ಶುದ್ಧ ಮನಸ್ಸಿನಿಂದ ಇರುವಂತೆ, ಗ್ರಾಮ ಸಮೃದ್ಧವಾಗಿ ಇರಲಿ ಎಂದು ಹಾರೈಸಿದರು.

ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ ಹೊಂಗಹಳ್ಳಿ ಗ್ರಾಮದಲ್ಲಿ ನಡೆದ ಧಾರ್ಮಿಕ ಕಾರ್ಯಕ್ಕೆ ಜನಸಾಗರವೇ ಹರಿದು ಬಂದಿದೆ. ಕಿ.ಮಿ ಗಟ್ಟಲೇ ಸಂಚಾರ ದಟ್ಟಣೆ ಅನುಭವಿಸಿ ಗ್ರಾಮ ಸೇರಬೇಕಾಯಿತು, ಗ್ರಾಮಸ್ಥರು ಒಗ್ಗಟ್ಟಿನಿಂದ ದೊಡ್ಡ ಪ್ರಮಾಣದ ಧಾರ್ಮಿಕ ಕಾರ್ಯ ನಡೆಸಿರುವುದು ಉತ್ತಮ ವಿಚಾರ. ಗ್ರಾಮದಲ್ಲೀ ಇನ್ನೂ ಹೆಚ್ಚಿನ ಕಾರ್ಯಕ್ರಮಗಳು ನಡೆಯಲಿ. ರೈತರ ಆದಾಯ ಹೆಚ್ಚಾಗಿ, ಎಲ್ಲರೂ ಸುಖ, ಸಮೃದ್ಧಿಯಿಂದ ಇರಲಿ ಎಂದು ಹಾರೈಸಿದರು.

ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿದರು ಸಾಹಿತಿ ಕೊಡಗಾಪುರ ಗುರುಪ್ರಸಾದ್ ಮುಖ್ಯಭಾಷಣ ಮಾಡಿದರು. ಕಸಾಪ ಮಾಜಿ ಅಧ್ಯಕ್ಷ ಪಿ.ಸಿ.ರಾಜಶೇಖರ ಗ್ರಾಮದ ಇತಿಹಾಸದ ಬಗ್ಗೆ ತಿಳಿಸಿದರು.

ಈ ಸಂದರ್ಭದಲ್ಲಿ ಮೂಡುಗೂರು ಇಮ್ಮಡಿ ಉದ್ದಾನ ಸ್ವಾಮೀಜಿ, ಸೋಮಹಳ್ಳಿ ಸಿದ್ದಮಲ್ಲಪ್ಪ ಸ್ವಾಮೀಜಿ, ಬೊಮ್ಮನಹಳ್ಳಿ ಇಮ್ಮಡಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಹಂಗಳ ಹಳ್ಳದ ಮಠಾಧ್ಯಕ್ಷ ಜಡೇಸ್ವಾಮೀಜಿ, ಗೋಪಾಲಪುರ ಗಂಗಾಧರೇಶ್ವರ ಸ್ವಾಮೀಜಿ, ಹರವೆ ಸರ್ಪಭೂಷಣ ಸ್ವಾಮೀಜಿ, ಚಿಕ್ಕತುಪ್ಪೂರು ಚನ್ನವೀರಸ್ವಾಮೀಜಿ, ಹಂಗಳ ಪಟ್ಟದ ಮಠಾಧ್ಯಕ್ಷ ಷಡಕ್ಷರಿ ಸ್ವಾಮೀಜಿ, ಕಬ್ಬಹಳ್ಳಿ ಗುರುಸಿದ್ದ ಸ್ವಾಮೀಜಿ, ಕಾಶೀಆರಾಧ್ಯ, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಜಿ.ಪಂ ಮಾಜಿ ಉಪಾಧ್ಯಕ್ಷ ಕೆ.ಎಸ್.ಮಹೇಶ್, ಗ್ರಾಮದ ಮುಖಂಡರು ಮತ್ತು ಯುವಕರು ಹಾಜರಿದ್ದರು.



**ಕರ್ನಾಟಕ ಅಂಬೇಡ್ಕರ್ ಸೇನೆ ಸಂಘಟನೆಯ ವತಿಯಿಂದ ಅಕ್ಷರಮಾತೆ ಸಾವಿತ್ರಿಬಾಯಿ ಪುಲೆ ಅವರ 195ನೇ ಜನ್ಮದಿನದ ಅಂಗವಾಗಿ ನೂತನ 2026 ವರ್ಷದ ಕ್ಯಾಲೆಂಡರನ್ನು ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ. ಹರೀಶ್ ಗೌಡ ಬಿಡುಗಡೆ ಮಾಡಿದರು. ಈ ವೇಳೆ ಜೆಡಿಎಸ್ ಮುಖಂಡ ಹರವೆ ಶ್ರೀಧರ್, ರಂಜಿತ ಚಿಕ್ಕಮಾದು, ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಮೂಕನಹಳ್ಳಿ ಅಭಿಲಾಷ ಎಂ.ಸಿ., ತಾಪಂ ಮಾಜಿ ಸದಸ್ಯ ಬನ್ನಿಕುಪ್ಪೆ ಕೆಂಗಯ್ಯ, ಸೋಮನಹಳ್ಳಿ ಶಿವಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಬನ್ನಿಕುಪ್ಪೆ ಲೋಕೇಶ್ ಬಿ.ಹೆಚ್., ಕಲಾವಿದರಾದ ಹನುಮಯ್ಯ, ಮುಖಂಡರಾದ ಕುಬೇರ ಸೋಮನಹಳ್ಳಿ ಇತರರು ಇದ್ದರು.**

## ಪಿ.ಎಲ್.ಡಿ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಅರಳಕುಪ್ಪೆ ಎ.ಸಿ.ಮೋಹನ್ ಅವಿರೋಧ ಆಯ್ಕೆ



**ಕೆ.ಆರ್.ಪೇಟೆ:** ತಾಲ್ಲೂಕು ಪಿ.ಎಲ್.ಡಿ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಅರಳಕುಪ್ಪೆ ಎ.ಸಿ.ಮೋಹನ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ಈ ಹಿಂದಿನ ಅಧ್ಯಕ್ಷರಾಗಿದ್ದ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಪಟ್ಟಣದ ಬ್ಯಾಂಕಿನ ಸಭಾಂಗಣದಲ್ಲಿ ನಿಗಧಿಯಾಗಿದ್ದ ಚುನಾವಣೆಯಲ್ಲಿ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನ ಬಯಸಿ ಎ.ಸಿ.ಮೋಹನ್ ಅವರನ್ನು ಹೊರತುಪಡಿಸಿ ಬೇರೆ ಯಾವುದೇ ನಿರ್ದೇಶಕರು ನಾಮಪತ್ರ ಸಲ್ಲಿಸದೇ ಇರುವ ಕಾರಣ ಎ.ಸಿ.ಮೋಹನ್ ಅವಿರೋಧವಾಗಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ಪಿ.ಎಲ್.ಡಿ ಉಪಾಧ್ಯಕ್ಷ ಮಾರ್ಗೋನಹಳ್ಳಿ ರಮೇಶ್, ಬ್ಯಾಂಕ್ ಮಾಜಿ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ, ನಿರ್ದೇಶಕರಾದ ಅಣ್ಣೇಚಾಕನಹಳ್ಳಿ ನಾಗರಾಜೇಗೌಡ, ಅಕ್ಕಿಹೆಬ್ಬಾಳು ರಾಜಾನಾಯಕ್, ಬಣ್ಣೇನಹಳ್ಳಿ ಧನಂಜಯ, ಶೀಳನೆರೆ ರಾಮೇಗೌಡ, ಭಾರತೀಪುರ ಸುರೇಶ್, ಮಾಳಗೂರು ಜಗದೀಶ್, ಕೆ.ಟಿ.ಚಕ್ರಪಾಣಿ, ಅರೇಬೊಪ್ಪನಹಳ್ಳಿ ಸುನಿಲ್, ಲಕ್ಷ್ಮೀಪುರ ಚಂದ್ರೇಗೌಡ,ಬಂಡಿಹೊಳೆ ನಾಗೇಶ್, ಮಂಜುಳಾ ಕೃಷ್ಣೇಗೌಡ,ಕವಿತ ಚಂದ್ರೇಗೌಡ, ಮುಖಂಡರಾದ ಎ.ಸಿ.ಸೋಮೇಗೌಡ, ರಾಜೇಶ್, ಸಿ.ಜೆ.ಮಂಜೇಗೌಡ, ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.

ನೂತನ ಅಧ್ಯಕ್ಷ ಎ.ಸಿ.ಮೋಹನ್ ಅವರನ್ನು ಅಭಿನಂದಿಸಿ ಮಾತನಾಡಿದ ಬ್ಯಾಂಕ್ ಮಾಜಿ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ ಎಲ್ಲಾ ನಿರ್ದೇಶಕರು ಬ್ಯಾಂಕಿನ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಪಕ್ಷಾತೀತವಾಗಿ ಕೆಲಸ ಮಾಡುತ್ತಿದ್ದೇವೆ. ನೂತನ ಅಧ್ಯಕ್ಷರಾದ ಎ.ಸಿ. ಮೋಹನ್ ಅವರು ಯುವಕರಿದ್ದು ಬ್ಯಾಂಕಿನ ಅಭಿವೃದ್ಧಿಗೆ ಸರ್ಕಾರದಿಂದ ಸೂಕ್ತ ಅನುಧಾನ ತಂದು ಅಭಿವೃದ್ಧಿಗೆ ಸಹಕಾರ ನೀಡಬೇಕು. ಈ ಮೂಲಕ ರೈತರಿಗೆ ಹೆಚ್ಚಿನ ಸಾಲ ನೀಡಲು ಕ್ರಮ ವಹಿಸಬೇಕು ಎಲ್ಲರೂ ಅವರಿಗೆ ಸಹಕಾರ ನೀಡುತ್ತೇವೆ ಎಂದು ಸಲಹೆ ನೀಡಿದರು.

ನೂತನ ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಅರಳಕುಪ್ಪೆ ಎ.ಸಿ. ಮೋಹನ್ ಮಾತನಾಡಿ ನಾನು ಮೊದಲ ಬಾರಿಗೆ ಬ್ಯಾಂಕ್ ನಿರ್ದೇಶಕರಾಗಿ ಎಲ್ಲರ ಸಹಕಾರದಿಂದ ಅಧ್ಯಕ್ಷರನಾಗಿದ್ದೇನೆ. ನನಗೆ ಸಿಕ್ಕಿರುವ ಅಧಿಕಾರದ ಅವಧಿಯಲ್ಲಿ ಎಲ್ಲಾ ನಿರ್ದೇಶಕರು ಹಾಗೂ ಬ್ಯಾಂಕಿನ ನೌಕರರ ಸಹಕಾರದೊಂದಿಗೆ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ನನಗೆ ಸಿಕ್ಕಿರುವ ಅಧಿಕಾರದ ಅವಧಿಯಲ್ಲಿ ಪ್ರಾಮಾಣಿಕವಾಗಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

### ಗುಜರಾತಿನ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯಿಂದ ಕಾರ್ಯಕ್ರಮ

## ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಏಳು ದಿನಗಳ ವಿಶೇಷ ತರಬೇತಿ ಕಾರ್ಯಗಾರ




**ಗುಂಡ್ಲುಪೇಟೆ:** ಜಿಲ್ಲಾ ಹಾಲು ಒಕ್ಕೂಟದ ವತಿಯಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಏಳು ದಿನಗಳ ವಿಶೇಷ ತರಬೇತಿ ಕಾರ್ಯಗಾರವನ್ನು ಗುಜರಾತಿನ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮಕ್ಕೆ ಗುಂಡ್ಲುಪೇಟೆ ತಾಲೂಕಿನ ಸಂಘಗಳ ಮುಖ್ಯ ಕಾರ್ಯನಿರ್ವಾಹಕಗಳನ್ನು ನಿಯೋಜಿಸಿದ್ದು ಈ ದಿನ ತರಬೇತಿ ಕಾರ್ಯಕ್ರಮಕ್ಕೆ ತೆರಳುವ ಬಸ್ಸಿಗೆ ಚಾಮುಲ್ ನಿರ್ದೇಶಕರು ಹಾಗೂ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರು ಎಚ್,ಎಸ್ ನಂಜುಂಡ ಪ್ರಸಾದ್ ಹಾಗೂ ಎಂಸಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷರು ಹಾಗೂ ಚಾಮುಲ್ ನಿರ್ದೇಶಕರಾದ ಎಂಪಿ ಸುನಿಲ್ ರವರು ವ್ಯವಸ್ಥಾಪಕ ನಿರ್ದೇಶಕರಾದ ಕೆ ರಾಜ್ ಕುಮಾರ್ ಅವರು ಹಸಿರು ನಿಶಾಣೆ ತೋರಿಸುವ ಮೂಲಕ ಚಾಲನೆ ನೀಡಿದರು.

ನಂತರ ನಂಜುಂಡ ಪ್ರಸಾದ್ ರವರು ಮಾತನಾಡಿ ಇಂತಹ ತರಬೇತಿಗಳಿಂದ ಸಂಘಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಯದರ್ಶಿಗಳು ಉತ್ತಮ ರೀತಿಯಲ್ಲಿ ಹಾಗೂ ವಿವಿಧ ರೀತಿಯ ನವೀನ ತಂತ್ರಜ್ಞಾನಗಳನ್ನು ಬಳಸಿ ಹಾಲು ಶೇಖರಿಸಲು ಹಾಗೂ ಅಲ್ಲಿನ ಮಾದರಿಯ ಬಗ್ಗೆ ತಿಳಿದು ಸಂಘಗಳಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಎಂಪಿ ಸುನಿಲ್ ರವರು ಮಾತನಾಡುತ್ತಾ ಕಾರ್ಯದರ್ಶಿಗಳಿಗೆ ಆತ್ಮಸ್ಥೈರ್ಯ ನೀಡುವ ಉದ್ದೇಶದಿಂದ ತರಬೇತಿ ಕಾರ್ಯಗಾರಗಳು ಅವಶ್ಯವಿದ್ದು ಇಂತಹ ತರಬೇತಿಯನ್ನು ಸದುಪಯೋಗಪಡಿಸಿಕೊಳ್ಳಲಿ ಎಂದು ತಿಳಿಸಿದರು.

ಕೆ.ರಾಜಕುಮಾರ್ ಅವರು ಮಾತನಾಡುತ್ತಾ ತರಬೇತಿ ನಂತರ ಅಲ್ಲಿನ ವಿಚಾರಗಳನ್ನು ಸಂಘಗಳಲ್ಲಿ ಅಳವಡಿಸಿಕೊಂಡು ಸಂಘಹಾಗೂ ಒಕ್ಕೂಟವನ್ನು ಲಾಭದೊತ್ತಕೊಂಡೊಯಲು ತಿಳಿಸಿದರು, ಈ ಸಂದರ್ಭದಲ್ಲಿ ಎಲ್ಲರಿಗೂ ಪ್ರಯಾಣ ಸುಖಕರವಾಗಿರಲೆಂದು ಶುಭಾಶಯ ತಿಳಿಸಿದರು.

ಈ ಸಂದರ್ಭದಲ್ಲಿ ವ್ಯವಸ್ಥಾಪಕರಾದ ಶರತ್ ಕುಮಾರ್, ತಾಲೂಕು ಮೇಲ್ವಿಚಾರಕರಾದ ಪ್ರಕಾಶ್ ಎಚ್, ವಿಸ್ತರಣಾಧಿಕಾರಿಗಳಾದ ಮುದ್ದಪ್ಪ ,ರಂಜಿತಾ, ಉದಯ್, ಮಂಜೇಶ್ ಹಾಗೂ ಕಾರ್ಯದರ್ಶಿಗಳು ಹಾಜರಿದ್ದರು.

## ಗಬ್ಬೆದ್ದು ನಾರುತಿರುವ ಪಟ್ಟಣದ ಪ್ರವಾಸಿ ಮಂದಿರದ ಶೌಚಾಲಯ: ಅಧಿಕಾರಿಗಳ ವಿರುದ್ಧ ಸಾರ್ವಜನಿಕರ ಆಕ್ರೋಶ

**ಕೆ.ಆರ್.ಪೇಟೆ:** ಪಟ್ಟಣದ ಹೃದಯ ಭಾಗದಲ್ಲಿರುವ ಹಾಗೂ ನಿತ್ಯ ನೂರಾರು ಮಂದಿ ಬಂದು ಹೋಗುವ ಪ್ರವಾಸಿ ಮಂದಿರದ ಶೌಚಾಲಯಗಳು ನಿರ್ವಹಣೆಯಿಲ್ಲದೆ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿವೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು ದುರಸ್ತಿ ಕಾರ್ಯ ಕೈಗೊಳ್ಳಬೇಕೆಂದು ಸಾರ್ವಜನಿಕರು ತೀವ್ರವಾಗಿ ಆಗ್ರಹಿಸಿದ್ದಾರೆ.

**ಪ್ರವಾಸಿ ಮಂದಿರದ ಶೌಚಾಲಯ ದುರ್ನಾತದ ಬೀಡು:** ತಾಲೂಕಿನ ವಿವಿಧ ಹಳ್ಳಿಗಳಿಂದ ಕೆಲಸ ನಿಮಿತ್ತ ಪಟ್ಟಣಕ್ಕೆ ಬರುವ ಸಾರ್ವಜನಿಕರು, ಪ್ರವಾಸಿಗರು ಹಾಗೂ ಹಿರಿಯ ಅಧಿಕಾರಿಗಳು ಈ ಪ್ರವಾಸಿ ಮಂದಿರವನ್ನು ಅವಲಂಬಿಸಿದ್ದಾರೆ. ಆದರೆ ಇಲ್ಲಿನ ಶೌಚಾಲಯಗಳು ಕಳೆದ ಹಲವು ದಿನಗಳಿಂದ ಸ್ವಚ್ಛತೆ ಕಾಣದೆ ಮಲಿನಗೊಂಡಿವೆ. ಶೌಚಾಲಯದ ಸುತ್ತಮುತ್ತ ಹರಡಿರುವ ದುರ್ನಾತದಿಂದಾಗಿ



ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

**ಸಾಂಕ್ರಾಮಿಕ ರೋಗದ ಭೀತಿ:** ಪ್ರವಾಸಿ ಮಂದಿರದ ಶೌಚಾಲಯ ಗಲೀಜು ತುಂಬಿಕೊಂಡಿದ್ದು, ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಅಧಿಕಾರಿಗಳು ದಿನನಿತ್ಯ ಇದೇ ಮಾರ್ಗವಾಗಿ ಓಡಾಡಿದರೂ ಸಹ ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಸರ್ಕಾರಿ ಶಾಲೆ ಹೆಚ್ಚುವರಿ ಕೊಠಡಿ ಉದ್ಘಾಟಣೆ



**ಗುಂಡ್ಲುಪೇಟೆ:** ತಾಲ್ಲೂಕಿನ ವಿವಿಧ ಗ್ರಾಮದಲ್ಲಿ ಸರ್ಕಾರಿ ಶಾಲೆಗಳಿಗೆ ಅವಶ್ಯಕತೆ ಇದ್ದ ಹೆಚ್ಚುವರಿ ಕೊಠಡಿಯನ್ನು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ತಾಲ್ಲೂಕಿನ ದೊಡ್ಡಹುಂಡಿ ಗ್ರಾಮದ ಶಾಲೆಗೆ 13 ಲಕ್ಷ ವೆಚ್ಚದಲ್ಲಿ ಒಂದು ಹೆಚ್ಚುವರಿ ಕೊಠಡಿ, ಹೊಸೂರು ಸರ್ಕಾರಿ ಶಾಲೆಗೆ ಒಂದು ಹೆಚ್ಚುವರಿ ಕೊಠಡಿ, ಕಗ್ಗಳ ಗ್ರಾಮದಲ್ಲಿ ಒಂದು ಹೆಚ್ಚುವರಿ ಕೊಠಡಿಗಳನ್ನು ಒಟ್ಟು ಮೂರು ಶಾಲೆಗಳಿಂದ 39 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿದ್ದ ಶಾಲೆ ಕೊಠಡಿ ಉದ್ಘಾಟಿಸಿದರು.

ನಂತರ ಮಾತನಾಡಿ ಶಾಲೆಗಳ ಅಭಿವೃದ್ಧಿ ವಿದ್ಯಾರ್ಥಿಗಳಿಗೆ ಅವಶ್ಯಕವಾಗಿ ಕೊಠಡಿಗಳ ಕೊರತೆ ಇರುವ ಕಡೆ ಕೊಠಡಿ ನಿರಗಮಾಣ ಮಾಡಿ ಸರ್ಕಾರಿ ಶಾಲೆ ಮಕ್ಕಳ ಶಿಕ್ಷಣ ಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಹೆಚ್ಚುವರಿ ಕೊಠಡಿಗಳು ನಿರ್ಮಾಣವಾಗುತಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನಂಜುಂಡಪ್ರಸಾದ್, ಮಾಜಿ ಜಿ.ಪಂ ಉಪಾಧ್ಯಕ್ಷ ಕೆ ಎಸ್ ಮಹೇಶ್, ಮಾಜಿ ತಾ.ಪಂ ಅಧ್ಯಕ್ಷ ಎಚ್ ಎನ್ ಬಸವರಾಜು ಹಾಲಹಳ್ಳಿ, ಅಂಬರೀಶ್, ಕಿರಣ್ ವಕೀಲರು, ಹೊರೆಯಾಲ ಗ್ರಾ.ಪಂ ಅಧ್ಯಕ್ಷೆ ನೀಲಮ್ಮ, ಉಪಾಧ್ಯಕ್ಷ ಶಿವರಾಜು, ಕಗ್ಗಳ ಮಾದಪ್ಪ, ಬಸವರಾಜು ಮೊಳಯ್ಯನಹುಂಡಿ, ಅಣ್ಣಯ್ಯಸ್ವಾಮಿ, ಶಿವಣ್ಣ, ಮತ್ತಿತರರಿದ್ದರು.

# ಗ್ರಾಪಂ ಮಟ್ಟದಿಂದ ಕಾಂಗ್ರೆಸ್ ಪ್ರಚಾರ ಸಮಿತಿ ಬಲಿಷ್ಠ: ಎಸ್.ನಾರಾಯಣ್

### ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

**ಚಾಮರಾಜನಗರ:** ಕಾಂಗ್ರೆಸ್ ಪ್ರಚಾರ ಸಮಿತಿಗೆ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯ ಸಹಮತವಿದ್ದು, ಪಕ್ಷವನ್ನು ಗ್ರಾಮ ಪಂಚಾಯಿತಿ ಮಟ್ಟದಿಂದ ಸದೃಢಗೊಳಿಸಲು ಪ್ರಚಾರ ಸಮಿತಿಯ ಎಲ್ಲಾ ಪದಾಧಿಕಾರಿಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕೆಪಿಸಿಸಿ ಪ್ರಚಾರ ಸಮಿತಿಯ ಸಂಯೋಜಕ, ಚಾಮರಾಜನಗರ ಜಿಲ್ಲೆಯ ಪಕ್ಷದ ಉಸ್ತುವಾರಿ ಎಸ್. ನಾರಾಯಣ್ ತಿಳಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ನೂತನ ಪದಾಧಿಕಾರಿಗಳ ಪದ ಗ್ರಹಣ ಸಮಾರಂಭದಲ್ಲಿ ನೇಮಕಾತಿ ಪತ್ರ ವಿತರಿಸಿ ಮಾತನಾಡಿದರು. ಕಾಂಗ್ರೆಸ್ ಪ್ರಚಾರ ಸಮಿತಿ ಕೇವಲ ಚುನಾವಣೆಗೆ ಸಿಮೀತಲವಾಗಿಲ್ಲ. ಇದು ಕಾಂಗ್ರೆಸ್ ಪಕ್ಷದ ಸಾಧನೆಗಳು, ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಕುರಿತು ಪ್ರಚಾರ ಹಾಗೂ ಬಿಜೆಪಿ ಸರ್ಕಾರ ವೈಫಲ್ಯವನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ತಾವೆಲ್ಲರು ಇಂದಿನಿಂದಲೇ ಸಕ್ರಿಯವಾಗಬೇಕು ಎಂದರು.

ಇತರೇ ಸಮಿತಿಗಳು ಇದ್ದಂತೆ ನಮ್ಮ ಪ್ರಚಾರ ಸಮಿತಿ ಇರುವುದಿಲ್ಲ. ವರ್ಷದ ಎಲ್ಲಾ ದಿನಗಳಲ್ಲಿಯು ಸಹ ಸಕ್ರಿಯವಾಗಿ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಗ್ರಾಮ ಮಟ್ಟದಲ್ಲಿ ಪ್ರತಿ ಹಳ್ಳಿ ಹಳ್ಳಿಗಳಲ್ಲಿ ನಮ್ಮ ಪ್ರಚಾರ ಸಮಿತಿಯ ಸದಸ್ಯರು ತೆರಳಿ ಅವರಿಗೆ ಮನ ಮುಟ್ಟುವಂತೆ ಕಾರ್ಯಕ್ರಮಗಳ ಬಗ್ಗೆ ತಿಳಿಸಬೇಕು. ಅಲ್ಲದೇ ಪಕ್ಷದ ಬಗ್ಗೆ ಜನರಿಗಿರುವ ಅಭಿಪ್ರಾಯಗಳ ಬಗ್ಗೆ ಯು ತಿಳಿಸಬೇಕು. ಇದನ್ನು ಎಸಿಸಿ ಹಾಗೂ ಕೆಪಿಸಿಸಿ ಮಟ್ಟಕ್ಕೆ ತಲುಪಿಸುವ



ಜವಾಬ್ದಾರಿ ನಮ್ಮದಾಗಿದೆ. ಹೀಗಾಗಿ ಸ್ಥಳೀಯ ಶಾಸಕರು. ಸಂಸದರು, ಜಿಲ್ಲಾಧ್ಯಕ್ಷರು, ಬ್ಲಾಕ್ ಅಧ್ಯಕ್ಷರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮಗಳನ್ನು ರೂಪಿಸಬೇಕು. ಅವರ ಕಾರ್ಯಕ್ರಮಗಳಿಗೂ ಸಹ ತಾವೆಲ್ಲರು ತಪ್ಪದೇ ಭಾಗವಹಿಸಬೇಕು ಎಂದು ನಾರಾಯಣ್ ಕಿವಿಮಾತು ಹೇಳಿದರು.

**ಮನರೇಗೆ ವಿರುದ್ಧ ಜಾಗೃತಿಗೊಳಿಸಿ:** ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯನ್ನು ಕೈಬಿಟ್ಟು, ವಿಬಿಜಿ. ರಾಮ್ ಜೀ ಯೋಜನೆಯನ್ನು ಜಾರಿ ಮಾಡಿದ್ದಾರೆ. ಇದು ಗ್ರಾಮೀಣ ಜನರಿಗೆ ಮರಣಶಾಸನವಾಗಿದ್ದು, ಹಳ್ಳಿ ಜನರ ಕೂಲಿಯನ್ನು ಮತ್ತು ಆ ಭಾಗ ಅಭಿವೃದ್ಧಿಯನ್ನು ಕಿತ್ತುಕೊಂಡಿದೆ. ಇದು ಒಂದು ರೀತಿ ದೇಶಕ್ಕೆ ಬೆಂಕಿ ಹಚ್ಚುವ ಕೆಲಸ ಮಾಡಿದೆ.ದೇಶಕ್ಕೆ ಸ್ವಾತಂತ್ರ ತಂದು ಕೊಟ್ಟ ಮಹಾತ್ಮ ಗಾಂಧಿ ಹಾಗೂ ರಾಷ್ಟ್ರಪಿತನಿಗೆ ಅಪಮಾನ ಮಾಡಿದೆ. ಇದನ್ನು ಹೆಚ್ಚು ಜನರಲ್ಲಿ ಜಾಗೃತಿ ಗೊಳಿಸಿ, ಬಿಜೆಪಿ ವಿರುದ್ಧ ಸಂಘಟಿತ ಹೋರಾಟ ರೂಪಿಸೋಣ ಎಂದರು.

ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಉತ್ತಮ ಆಡಳಿತ ನೀಡುತ್ತಿದೆ. ಐದು ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ಕ್ಷೇತ್ರದ ಅಭಿವೃದ್ದಿಯಲ್ಲಿ ಸರ್ಕಾರ ನೀಡುತ್ತಿರುವ ಬರಪೂರ ಅನುದಾನಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನಪರ ಆಡಳಿತ ಪರವಾಗಿ ಪ್ರಚಾರ ಸಮಿತಿಯು ಹೆಚ್ಚು ಪ್ರಚುರಪಡಿಸುವ ಮೂಲಕ ಜಿಲ್ಲೆಯಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಪಕ್ಷದ ಸಂಘಟನೆ ಗೊಳ್ಳಬೇಕು. ಜಿ.ಪಂ.ತಾ.ಪಂ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಬೆಂಬಲಿಗರು ಅಧಿಕಾರ ಹಿಡಿಯುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಪಿ. ಮರಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪ್ರಚಾರ ಸಮಿತಿಯ ಅಧ್ಯಕ್ಷ ಹೊಸಹಳ್ಳಿ ಮಧುಸೂಧನ್ ಪ್ರಾಸ್ತಾವಿಕವಾಗಿ ಮಾಡಿದರು. ಬಳಿಕ ಗಣ್ಯರು ಜಿಲ್ಲಾ ಪ್ರಚಾರ ಸಮಿತಿಯ ಪದಾಧಿಕಾರಿಗಳಿಗೆ ಪಕ್ಷದ ಶಾಲ್ಯ ಹಾಕಿ, ನೇಮಕಾತಿ ಪತ್ರವನ್ನು ನೀಡಿ ಶುಭ ಕೋರಿದರು.

ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಆರ್. ನರೇಂದ್ರ, ಜಿ. ಎನ್.ನಂಜುಂಡಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್ ಪ್ರಧಾನ ಕಾರ್ಯದರ್ಶಿಗಳಾದ ಆರ್. ಮಹದೇವ್, ಚಿಕ್ಕಮಹದೇವ್, ಜಿಲ್ಲಾ ವಕ್ತಾರ ಕೆರೆಹಳ್ಳಿ ನವೀನ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೆಂಗಾಕಿ ನಾಗರತ್ನ, ಬ್ಲಾಕ್ ಅಧ್ಯಕ್ಷರಾದ ತೋಟೇಶ್, ಮಹಮದ್ ಅಸ್ಗರ್‌ಮುನ್ನಾ, ಹೊಂಗನೂರುಚಂದ್ರು ಹಾಗೂ ಇತರರು ಹಾಜರಿದ್ದರು.

# ಹಿರಿಯ ಪತ್ರಕರ್ತರಾದ ಕೆ.ಆರ್.ನೀಲಕಂಠರಿಗೆ ಕರ್ನಾಟಕ ಸರ್ಕಾರದ ಮಾಧ್ಯಮ ಅಕಾಡೆಮಿ ಪ್ರಶಸ್ತಿ

**ಕೆ.ಆರ್.ಪೇಟೆ:** ಪಟ್ಟಣದ ಬಸವನಗುಡಿ ಬೀದಿಯ ತೊಗಟವೀರ ಶ್ರೀ ರಾಮಮಂದಿರ ಸೇವಾ ಟ್ರಸ್ಟಿನ ಆವರಣದಲ್ಲಿ ಕರ್ನಾಟಕ ಸರ್ಕಾರದ ಮಾಧ್ಯಮ ಅಕಾಡೆಮಿಯ 2025ನೇ ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿರುವ ಕೆ.ಆರ್.ನೀಲಕಂಠ ಅವರಿಗೆ ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಮಹಾಮಂಡಲದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಕೆ.ಎಸ್.ಸಂತೋಷ್ ಕುಮಾರ್ ಅವರಿಗೆ ತಾಲ್ಲೂಕು ನೇಕಾರ ತೊಗಟವೀರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಶ್ರೀ ಚಾಮುಂಡೇಶ್ವರಿ ಕರಗ ಮಹೋತ್ಸವ ಸಮಿತಿಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಪಟ್ಟಣದ ಬಸವನಗುಡಿ ಬೀದಿಯ ತೊಗಟವೀರ ಶ್ರೀ ರಾಮಮಂದಿರ ಸೇವಾ ಟ್ರಸ್ಟಿನ ಆವರಣದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕರಗ ಮಹೋತ್ಸವ ಸಮಿತಿ ಹಾಗೂ ಶ್ರೀರಾಮಂದಿರ ಸೇವಾ ಟ್ರಸ್ಟಿನ ಅಧ್ಯಕ್ಷ ಹಂಸ ರಮೇಶ್ ಮಾತನಾಡಿ ತಾಲ್ಲೂಕಿನ ಹಿರಿಯ ಪತ್ರಕರ್ತರಾದ ಕೆ.ಆರ್.ನೀಲಕಂಠ ಅವರು ಸುಮಾರು 35ವರ್ಷಗಳ ತಾಲ್ಲೂಕಿನಲ್ಲಿ ವಿವಿಧ ಪತ್ರಿಕೆಗಳ ವರದಿಗಾರರಾಗಿ, ಹೇಮಾವತಿ ವಾರಪತ್ರಿಕೆಯ ಸಂಪಾದಕರಾಗಿ ಪತ್ರಿಕೋದ್ಯಮದಲ್ಲಿ ಸೇವೆ




ಸಲ್ಲಿಸುವ ಮೂಲಕ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಕೆ.ಆರ್.ನೀಲಕಂಠ ಅವರ 4ದಶಕಗಳಲ್ಲಿ ಪತ್ರಿಕೋದ್ಯಮದಲ್ಲಿ ಸಕ್ರಿಯರಾಗಿದ್ದು, ಇವರ ಈ ಸೇವೆಯನ್ನು ಗುರುತಿಸಿ ಕರ್ನಾಟಕದ ಸರ್ಕಾರವು ಪ್ರತಿಕೋದ್ಯಮದ ಅತ್ಯುತ್ತಮ ಪ್ರಶಸ್ತಿಯಾದ ಮಾಧ್ಯಮ ಅಕಾಡೆಮಿ ಪ್ರಶಸ್ತಿ ನೀಡಿರುವುದು ಇಡೀ ತಾಲ್ಲೂಕಿಗೆ ಹೆಮ್ಮೆಯ ವಿಷಯ ಎಂದು ಶುಭ ಹಾರೈಸಿದರು. ಅದೇ ರೀತಿ ಬಸ್ ಸಂತೋಷ್‌ಕುಮಾರ್ ಅವರು ಪುರಸಭಾ ಸದಸ್ಯರಾಗಿ ಸೇವೆ ಸಲ್ಲಿಸುತ್ತಾ, ವಿವಿಧ ಸಹಕಾರ ಸಂಘಗಳು ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಮಹಾಮಂಡಲದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಹೆಮ್ಮೆಯ ವಿಚಾರವಾಗಿದೆ. ರಾಜ್ಯ ಮಟ್ಟದ ಸಹಕಾರ ಸಂಘದಲ್ಲಿ ನಿರ್ದೇಶಕರಾಗುವುದು ಕಷ್ಟಸಾಧ್ಯವಾಗಿದೆ ಆದರೆ ಸಹಕಾರ ಕ್ಷೇತ್ರದಲ್ಲಿ ರಾಜ್ಯಮಟ್ಟದ ಮಹಾಮಂಡಲದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬಸ್ ಸಂತೋಷ್‌ಕುಮಾರ್ ಅವರ ಸಾಧನೆ ತಾಲ್ಲೂಕಿನ ಸಮಸ್ತ ಜನತೆಗೆ ಸಂದ ಗೌರವವಾಗಿದೆ ಎಂದು ಹಂಸ ರಮೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲ ಶಿಕ್ಷಣ ತಜ್ಞ ಕೆ.ಆರ್.ಪುಟ್ಟಸ್ವಾಮಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕ ಬಳ್ಳೇಕೆರೆ ಮಂಜುನಾಥ್, ಮಂಡ್ಯ ಹಾಗೂ ಮೈಸೂರು ಜಿಲ್ಲಾ ನೇಕಾರ ತೊಗಟವೀರ ಸಂಘದ ಅಧ್ಯಕ್ಷ ಇಂಜಿನಿಯರ್ ವೆಂಕಟೇಶ್, ಶ್ರೀರಂಗಪಟ್ಟಣ ತೊಟಗವೀರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಜೆ. ಕುಮಾರಸ್ವಾಮಿ, ಶಿಕ್ಷಕ ಶ್ರೀರಂಗಪಟ್ಟಣ ರವಿಕುಮಾರ್, ಸಿಂಧುಘಟ್ಟ ನಾಗೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ರಾಜಶೇಖರ್, ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯ ಉಪಾಧ್ಯಕ್ಷ ಅಂಚನಹಳ್ಳಿ ಸುಬ್ಬಣ್ಣ, ಪುರಸಭೆ ಸದಸ್ಯರಾದ ಇಂದ್ರಾಣಿ, ವಿಶ್ವನಾಥ್, ಪುರಸಭೆ ಮಾಜಿ ಅಧ್ಯಕ್ಷ ಕೆ.ಹೆಚ್.ರಾಮಕೃಷ್ಣ, ಕೆ.ಸಿ.ವಾಸು, ನೇಕಾರ ತೊಗಟವೀರ ಸಮಾಜದ ಹಿರಿಯ ಮುಖಂಡರಾದ ಕೆ.ಹೆಚ್.ಆರ್.ಚಂದ್ರಶೇಖರ್, ಉದ್ಯಮಿ ಅಂಬಾರಿ ರವಿ, ಗ್ಯಾಸ್ ರಾಜಶೇಖರ್, ಮೀಸೆ ರಮೇಶ್, ಚಂದ್ರಕಲಾ ರಮೇಶ್, ಉದ್ಯಮಿ ಹೊನ್ನಾವರ ಚಂದ್ರಶೇಖರ್, ಕೆ.ಎಂ.ರವಿನಂದನ, ಬಸವರಾಜು, ಹೊಸಹೊಳಲಿನ ಸುರೇಶ್ ಸೇರಿದಂತೆ ಹಲವು ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಸಂಕ್ಷಿಪ್ತ ಸುದ್ದಿ

### ಪಾದಯಾತ್ರೆಯ ವೇಳೆ ಚಿರತೆ ದಾಳಿ: ವ್ಯಕ್ತಿ ಸಾವು



**ಚಾಮರಾಜನಗರ:** ಹನೂರು ತಾಲ್ಲೂಕಿನ ಪ್ರಸಿದ್ಧ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆಯಲ್ಲಿ ತೆರಳುತ್ತಿದ್ದ ಭಕ್ತನೊಬ್ಬನ ಮೇಲೆ ನೆನ್ನೆ ಬೆಳಗ್ಗೆ ಚಿರತೆ ದಾಳಿ ನಡೆಸಿರುವ ಘಟನೆ ವರದಿಯಾಗಿದೆ.

ಮೃತನನ್ನು ಮಂಡ್ಯ ಜಿಲ್ಲೆಯ ನಿವಾಸಿಯಾದ ಸುಮಾರು 30 ವರ್ಷದ ಪ್ರವೀಣ್ ಎಂದು ಗುರುತಿಸಲಾಗಿದೆ. ಆತ ತನ್ನ ಗ್ರಾಮದವರೊಂದಿಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆಗಾಗಿ ಬಂದಿದ್ದನು.

ತಾಳುಬೆಟ್ಟದಿಂದ ಮಲೆ ಮಹದೇಶ್ವರ ಬೆಟ್ಟದ ಕಡೆಗೆ ಕಾಲ್ನಡಿಗೆಯಲ್ಲಿ ಸಾಗುತ್ತಿದ್ದ ವೇಳೆ ಅಚಾನಕ್ ಚಿರತೆಯೊಂದು ಪ್ರವೀಣ್ ಮೇಲೆ ದಾಳಿ ನಡೆಸಿದೆ. ದಾಳಿಯ ಸಂದರ್ಭದಲ್ಲಿ ಕುತ್ತಿಗೆ ಹಾಗೂ ದೇಹದ ಇತರ ಭಾಗಗಳಿಗೆ ಗಂಭೀರ ಗಾಯಗಳಾಗಿದ್ದು, ತೀವ್ರ ರಕ್ತಸ್ರಾವದಿಂದ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಚಿರತೆ ದಾಳಿ ನಡೆಸಿದ ಕೂಡಲೇ ಪ್ರವೀಣ್ ಜೊತೆಯಲ್ಲಿದ್ದ ಇತರ ಭಕ್ತರು ಸ್ಥಳದಿಂದ ಓಡಿ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿಸಲಾಗಿದೆ.

ಘಟನೆಯ ಸುದ್ದಿ ತಿಳಿದ ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ವಶಕ್ಕೆ ಪಡೆದು ಮುಂದಿನ ಕ್ರಮಕ್ಕಾಗಿ ಸಾಗಿಸಲಾಗಿದೆ. ಈ ಘಟನೆ ಪ್ರದೇಶದಲ್ಲಿ ಭಕ್ತರು ಹಾಗೂ ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಗಿದೆ.

### ಅರ್ಜಿ ಅಹ್ವಾನ

**ಮಂಡ್ಯ:** Ashirvad Pipes Private Limited, ಬೆಂಗಳೂರು ರವರು ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಗೆ ವೃತ್ತಿ ಆಧಾರಿತ ಕೌಶಲ್ಯ ತರಬೇತಿ ನೀಡುವ ಸಂಬಂಧ ಸದರಿ ತರಬೇತಿಯನ್ನು ಪಡೆಯುವ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಇತರೆ ಕ್ಷೇತ್ರಗಳಲ್ಲಿ ಸರ್ವತ್ತೋಮುಖ ಅಭಿವೃದ್ಧಿ ಹೊಂದಲು ಅನುಕೂಲವಾಗುತ್ತದೆ ಅದರಂತೆ. Ashirvad Pipes Private Limited, ಬೆಂಗಳೂರು ರವರಿಂದ ತರಬೇತಿಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ನೀಡಲು ಉದ್ದೇಶಿಸಲಾಗಿದ್ದು, ಅರ್ಹ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.


## 12ನೇ ಶತಮಾನದಲ್ಲಿ ಮೌಢ್ಯದ ವಿರುದ್ಧ ಹೋರಾಡಿದ ಶರಣ

# ಬಸವ ಯುಗದ ಶ್ರೇಷ್ಠ ಶಿವಶರಣ ಅಂಬಿಗರ ಚೌಡಯ್ಯ

**ಮಂಡ್ಯ:** ಸಮಾಜದಲ್ಲಿನ ಮೂಢನಂಬಿಕೆ, ಮೌಢ್ಯ ಮತ್ತು ಜಾತೀಯತೆಯನ್ನು ಹೋಗಲಾಡಿಸಿ ಮಾನವೀಯತೆಯ ಕಡೆಗೆ ಸಮಾಜ ಸಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದಮೂರ್ತಿ ಅವರು ಹೇಳಿದರು.

ಬುಧವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅಂಬಿಗರ ಚೌಡಯ್ಯ ಜಯಂತಿಯನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಅಂಬಿಗರ ಚೌಡಯ್ಯ ರವರು ಮೂಡನಂಬಿಕೆಗಳು, ಜಾತಿ ವ್ಯವಸ್ಥೆ ಮತ್ತು ಮೌಢ್ಯತೆಯ ವಿರುದ್ಧ ವಚನಗಳ ಮೂಲಕ ಸಮರ ಸಾರಿದವರು. 247 ವಚನಗಳನ್ನು ರಚಿಸುವ ಮೂಲಕ ಸಮಾಜಕ್ಕೆ ಕೊಡುಗೆಯನ್ನು ನೀಡಿದ್ದಾರೆ ಎಂದು ಹೇಳಿದರು.

12ನೇ ಶತಮಾನದಲ್ಲಿ ಅಂಬಿಗರ ಚೌಡಯ್ಯ ರವರು ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಬೇಕು ಎಂಬ ಉದ್ದೇಶದಿಂದ ಹಲವು ಸಂದೇಶ ಮತ್ತು ವಚನಗಳನ್ನು ನೀಡಿದ್ದಾರೆ. ಅಂಬಿಗರ ಚೌಡಯ್ಯ ಜಯಂತಿಯನ್ನು ಶಾಲೆ ಕಾಲೇಜು ಮಟ್ಟದಲ್ಲಿ ಮಾಡಬೇಕು. ಯುವ ಜನತೆ ಅಂಬಿಗರ ಚೌಡಯ್ಯ ರವರ ನಡೆ–ನುಡಿ ಜ್ಞಾನವನ್ನು ಪರಿಪೂರ್ಣವಾಗಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು




ಅಂಬಿಗರ ಚೌಡಯ್ಯ ಅವರು 12 ನೇ ಶತಮಾನದಲ್ಲಿ ಜೀವಿಸಿದ್ದ ಶಿವಶರಣ ಹಾಗೂ ವಚನಕಾರರು. ಉಳಿದೆಲ್ಲ ವಚನಕಾರರಿಗಿಂತ ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವ ಉಳ್ಳವರಾಗಿದ್ದರು. ವೃತ್ತಿಯಿಂದ ಅಂಬಿಗನಾದರು ಪ್ರವೃತ್ತಿಯಲ್ಲಿ ಅನುಭಾವಿ ವಚನಕಾರ ಆಗಿದ್ದರು ಎಂದು ಹೇಳಿದರು.

ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಎಸ್.ಬಿ.ಶಂಕರೇಗೌಡ ಅವರು ಮಾತನಾಡಿ ಕಾಯಕ ಮತ್ತು ವ್ಯಕ್ತಿನಾಮದಿಂದ ಅಂಬಿಗರ ಚೌಡಯ್ಯ ಎಂಬುದೇ ಅವರ ವಚನಗಳ ಅಂಕಿತವಾಗಿದೆ, ಅನೇಕ ವಚನಗಳನ್ನು ರಚಿಸುವ ಮೂಲಕ ಸಮಾಜದ ಅಂಕು ಡೊಂಕು ತಿದಿದ್ದಾರೆ ಎಂದು ಉಪನ್ಯಾಸ ನೀಡಿದರು ಮಂಡ್ಯ ತಾಲೂಕಿನ ಮರಡೀಪುರ ಗ್ರಾಮದ ಅಂಬಿಗರ ಚೌಡಯ್ಯ ರವರ ಸಮುದಾಯದ ವಿದ್ಯಾರ್ಥಿ ಅಂಜನಾ.ಪಿ ಸರ್ ಎಂ ವಿಶ್ವೇಶ್ವರಯ್ಯ ಪ್ರೌಢ ಶಾಲೆಯಲ್ಲಿ 10ನೇ ತರಗತಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುತಿದ್ದು ಬಾಲ್ ಬ್ರಾಂಡ್ಮಿಟನ್ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದು ಅಂಜನಾ ಗೆ ಗೌರವಿಸಿ ಸನ್ಮಾನಿಸಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಬಿ ವಿ ನಂದೀಶ್,ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕರು ಬಿ ಲಿಂಗಯ್ಯ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು ಈರಯ್ಯ ಮತ್ತು ಮುಖಂಡರುಗಳಾದ ಸಂದೇಶ್, ಜೆ.ರಾಜಶೇಖರಯ್ಯ ಬಿ.ಎಸ್.ಅನುಪಮಾ ಇನ್ನಿತರರಿದ್ದರು.

# ಜ. 24 ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

**ಕೆ .ಆರ್ .ನಗರ :** ಜನವರಿ 24 ರಂದು ಕೆ ಆರ್ ನಗರ ಮತ್ತು ಸಾಲಿಗ್ರಾಮ ತಾಲೂಕು ವಾಲ್ಮೀಕಿ ನಾಯಕರ ಸಂಘ ಮತ್ತು ನೌಕರರ ಸಂಘದಿಂದ ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜನೆ ಮಾಡಲಾಗಿದ್ದು ಲೋಕಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ ಎಂದು ನೌಕರರ ಸಂಘದ ಅಧ್ಯಕ್ಷ ಪ್ರಸಾದ್ ತಿಳಿಸಿದರು.

ತಾಲೂಕು ಸಂಘದ ಅಧ್ಯಕ್ಷರೊಂದಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರು. ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ. ಎರಡು ತಾಲೂಕಿನ ಸಾಧಕರಿಗೆ ಸನ್ಮಾನ ಮತ್ತು ಇನ್ನಿತರ ವಿವಿಧ ಕಾರ್ಯಕ್ರಮಗಳನ್ನು



ಆಯೋಜನೆ ಮಾಡಲಾಗಿದ್ದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅಭಿನಂದಿಸಲಿದ್ದು ಕಾರ್ಯಕ್ರಮವನ್ನು ಶಾಸಕ ರವಿಶಂಕರ್.ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಲಿದ್ದಾರೆ. ವಾಲ್ಮೀಕಿ ಭಾವಚಿತ್ರಕ್ಕೆ ಕೇಂದ್ರ ಸಚಿವ ಎಚ್ ಡಿ ಕುಮಾರ್ ಸ್ವಾಮಿ ಚಾಲನೆ ನೀಡಲಿದ್ದಾರೆ.

ಜನವರಿ 24 ರಂದು ಲೋಕೋಪಯೋಗಿ ಸಚಿವರಿಗೆ ವಿವಿಧ ಕಾರ್ಯಕ್ರಮಗಳು ಇರುವ ಕಾರಣ ಎಲಿಫೆಡ್ ಮುಖಾಂತರ ಮಂಡ್ಯ ಜಿಲ್ಲೆ ಕೆ ಆರ್ ಎಸ್ ನಲ್ಲಿ ದೇವಸ್ಥಾನದ ಕಾರ್ಯಕ್ರಮ ಮುಗಿಸಿ ಕೆ ಆರ್ ನಗರ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಆಗಮಿಸುವುದಾಗಿ ಸಚಿವರು ತಿಳಿಸಿದ್ದಾರೆ. ಹಾಗಾಗಿ ಕೆ ಆರ್ ನಗರ ಮತ್ತು ಸಾಲಿಗ್ರಾಮ ಎರಡು ತಾಲೂಕಿನ ನಾಯಕ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ಕಾರ್ಯಕ್ರಮ ಯಶಸ್ವಿ ಮಾಡಲು ಮುಂದಾಗಬೇಕು ಎಂದು ಸಾಲಿಗ್ರಾಮ ತಾಲೂಕು ವಾಲ್ಮೀಕಿ ನಾಯಕರ ಸಂಘದ ಅಧ್ಯಕ್ಷ ಮಹದೇವ್ ಸಿ ಸಿ ಕರೆ ನೀಡಿದರು.

ಸಂದರ್ಭದಲ್ಲಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ಎಸ್ ಆರ್ ರವಿಕುಮಾರ್, ಕೆ ಆರ್ ನಗರ ತಾಲೂಕು ವಾಲ್ಮೀಕಿ ಸಂಘದ ಉಪಾಧ್ಯಕ್ಷ ತಿಪ್ಪೂರ್ ಮಹಾದೇವ್, ಹಿರಿಯ ನಿರ್ದೇಶಕ ಕಲ್ಲಹಳ್ಳಿ ಶ್ರೀನಿವಾಸ್, ಭೇರ್ಯ ಮಹದೇವ್ ಸೇರಿದಂತೆ ಇನ್ನಿತರರು ಇದ್ದರು.

## ಜ.26ರಂದು 77ನೇ ಗಣರಾಜ್ಯೋತ್ಸವ

**ಮಂಡ್ಯ:** ಜಿಲ್ಲಾಡಳಿತದ ವತಿಯಿಂದ 77ನೇ ಗಣರಾಜ್ಯೋತ್ಸವ ದಿನವನ್ನು ಜನವರಿ 26ರಂದು ಬೆಳಿಗ್ಗೆ 9.00 ಗಂಟೆಗೆ ಸರ್ ಎಂ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ ಎಂ ನರೇಂದ್ರಸ್ವಾಮಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಅವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

# ನಕಲಿ ದಾಖಲೆ ಸೃಷ್ಟಿಸಿ ಸರಕಾರಿ ಜಮೀನು ಗುಳುಂ

**ಪ್ರಕರಣವನ್ನು ಲೋಕಾಯುಕ್ತ ಅಥವಾ ಸಿಬಿಐಗೆ ಹಸ್ತಾಂತರಿಸುವಂತೆ ಒತ್ತಾಯ**

**ಮಂಡ್ಯ:** ನಾಗಮಂಗಲ ತಾಲೂಕಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಸರಕಾರಿ ಜಮೀನು ಕಬಳಿಕೆ ಮಾಡಿ ಸಾವಿರಾರು ಕೋಟಿ ರೂ.ಗಳ ಆರ್ಥಿಕ ನಷ್ಟ ಉಂಟು ಮಾಡಿರುವ ಪ್ರಕರಣವನ್ನು ಲೋಕಾಯುಕ್ತ ಅಥವಾ ಸಿಬಿಐಗೆ ಹಸ್ತಾಂತರ ಮಾಡುವಂತೆ ಸಾಮಾಜಿಕ ಕಾರ್ಯಕರ್ತ ಕೆ.ಆರ್.ರವೀಂದ್ರ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಗಮಂಗಲ ತಾಲೂಕಿನ ಎಚ್.ಎನ್.ಕಾವಲು, ಚಿಕ್ಕಜಟಕ, ದೊಡ್ಡ ಜಟಕ, ಕರಡಹಳ್ಳಿ ಹಾಗೂ ಇನ್ನುಳಿದ ಗ್ರಾಮಗಳಲಿ ಸರಕಾರಿ ಭೂಮಿ ದರಖಾಸ್ತು ಮಂಜೂರಾತಿ, ದಾಖಲಾತಿಗಳಾದ ಸಾಗುವಳಿ ಚೀಟಿ, ವಿತರಣಾವಹಿ, ಅಧಿಕೃತ ಜ್ಞಾಪಕ, ಕಿಮ್ಮತ್ತು ಮತ್ತು ನೋಟಿಸ್ ಇತ್ಯಾದಿ ದಾಖಲಾತಿಗಳನ್ನು ನಕಲು ಮಾಡಿ, ತಿದ್ದಲಾಗಿದೆ ಎಂದು ಆರೋಪಿಸಿದರು.

ಈ ಸಂಬಂಧ ಜ.12ರಂದು ಉಪಲೋಕಾಯುಕ್ತರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ. ತನಿಖೆ ನಡೆಸಿ ಶೋಧ ಮಾಡಲು



ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ಸುರೇಶ್‌ಬಾಬು ಅವರ ನೇತೃತ್ವದಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಮಡಿಕೇರಿ ಲೋಕಾಯುಕ್ತ ಅಧಿಕಾರಿಗಳೊಂದಿಗೆ ತನಿಖೆ ನಡೆಸಿ 200 ಕೋಟಿ ರೂ.ನಷ್ಟು ಆರ್ಥಿಕ ನಷ್ಟ ಉಂಟು ಮಾಡಿರುವುದು ಕಂಡು ಬಂದಿದೆ. ನಾಗಮಂಗಲ ಟೌನ್ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಲೋಕಾಯುಕ್ತ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದು ಹೇಳಿದರು.

ಪ್ರಕರಣದಲ್ಲಿ ದೊಡ್ಡ ಮಟ್ಟದ ಅಧಿಕಾರುಗಳು, ಹಾಗೂ ಜಮೀನ್ದಾರರು ಭಾಗಿಯಾಗಿರುವ ಶಂಕೆಯಿದೆ. ಆದ್ದರಿಂದ ಪೊಲೀಸರಿಂದ ಸರಿಯಾದ ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಕೂಡಲೇ ಪ್ರಕರಣವನ್ನು ಲೋಕಾಯುಕ್ತ ಅಥವಾ ಸಿಬಿಐಗೆ ಹಸ್ತಾಂತರ ಮಾಡಬೇಕು ಎಂದು ಆಗ್ರಹಿಸಿದರು.

ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆ ಸಂಬಂಧ ಜಿಲ್ಲಾಡಳಿತ ಹಾಗೂ ರಾಜಕಾರಣಿಗಳ ಇಚ್ಛಾಸಕ್ತಿಯ ಕೊರತೆ ಕಾಣುತ್ತಿದೆ. ಜಿಲ್ಲೆಗೆ ಸೂಪರ್ ಸ್ಪೆಷಿಯಾಲಿಟಿ ಆಸ್ಪತ್ರೆ ಸಂಬಂಧವೂ ನಿರಾಸಕ್ತಿ ತೋರಲಾಗುತ್ತಿದೆ. ಈ ಸಂಬಂಧ ಜಿಲ್ಲೆಗೆ ಮಂಜೂರಾಗಿರುವ ಅನುದಾನ ಹಿಂದಕ್ಕೆ ಹೋಗುವ ಸಾಧ್ಯತೆಯಿದ್ದು, ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

# ರೈತರು ನೀರನ್ನ ಮಿತವಾಗಿ ಬಳಸಿ: ಉದಯ್ ಕಿವಿ ಮಾತು

**ಕೆ.ಎಂ.ದೊಡ್ಡಿ:** ರೈತರು ನೀರನ್ನ ಮಿತವಾಗಿ ಬಳಸಿ ಆಧುನಿಕ ಕೃಷಿ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡು ಕೃಷಿ ಚಟುವಟಿಕೆಯಲ್ಲಿ ತೋಡಿಗಿಸಿ ಕೊಳ್ಳಿ ಎಂದು ಶಾಸಕ ಕದಲೂರು ಉದಯ್ ಕಿವಿ ಮಾತು ಹೇಳಿದರು.

ಸಮೀಪದ ಕರಡಕೆರೆ ಗ್ರಾಮದಲ್ಲಿ ಮದ್ದೂರಿನ ಕೃಷಿ ಇಲಾಖೆ, ಭಾರತೀನಗರದ ರೈತ ಸಂಪರ್ಕ ಕೇಂದ್ರ ವತಿಯಿಂದ ಸಿ.ಎ ಕೆರೆ ಹೋಬಳಿಯ ವ್ಯಾಪ್ತಿಯ 150 ಮಂದಿ ಕೃಷಿಕರಿಗೆ ಇಲಾಖೆ ವತಿಯಿಂದ ಕೃಷಿಪರಿಕರಗಳನ್ನು ವಿತರಿಸಿ ಮಾತನಾಡಿದರು .

ಮಂಡ್ಯ ಜಿಲ್ಲೆಯ ರೈತರು ನೀರನ್ನು ಹೆಚ್ಚು ಹೆಚ್ಚು ಬಳಸುವುದ್ದರಿಂದ ಮಣ್ಣಿನಲ್ಲಿರುವ ಫಲವತ್ತತೆಯೂ ನಶಿಸುತ್ತಾ ಹೋಗುತ್ತದೆ ಆ ನಿಟ್ಟಿನಲ್ಲಿ ನೀರನ್ನ ಮಿತವಾಗಿ ಬಳಸಿ ಬೇಸಾಯ ಪದ್ದತಿಗೆ ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಕೃಷಿಯನ್ನು ಮುಂದವರಿಸ ಬೇಕು ಎಂದು ತಿಳಿಸಿದರು.

ಜಿಲ್ಲೆಯ ರೈತರು ಹೆಚ್ಚು ಹೆಚ್ಚು ಕಬ್ಬು ಭತ್ತ ಬೆಳೆಗಳ ಬೆಳೆಯುವುದರ ಜತೆಗೆ ತರಕಾರಿಗಳು, ಜೋಳದಂತಹ ಮಿಶ್ರ ಬೇಸಾಯದ ಪದ್ಧತಿಯನ್ನು ಅಳವಡಿಸಿಕೊಂಡು ಅಗತ್ಯ ಸಮಯದಲ್ಲಿ ಕೃಷಿ ಇಲಾಖೆಯ ಸಲಹೆ ಸೂಚನೆ ಪಡೆದು ದ್ವಿದಳ ಧಾನ್ಯಗಳು ಬೆಳೆಯಬೇಕು ಎಂದು ಸಲಹೆ ನೀಡಿದರು.

ಮಿಶ್ರ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡಿರಿವುದ್ದರಿಂದ ಮಣ್ಣಿನಲ್ಲಿ



ಫಲವತ್ತತೆಯೂ ಉಳಿದು ರಾಸಾಯನಿಕ ಗೊಬ್ಬರಗಳನ್ನು ಕಡಿಮೆಯಾಗಿ ಬಳಸಿ ಸಾವಯವ ಗೊಬ್ಬರಗಳನ್ನು ಹಾಗೂ ಕೃಷಿ ಇಲಾಖೆಯವರು ಸೂಚಿಸುವ ಪೋಷಕಾಂಶಯುಳ್ಳ ಕೃಷಿ ಉತ್ಪನ್ನಗಳನ್ನು ಹಾಗೂ ಧಾನ್ಯಗಳನ್ನು ಬಳಸಿ ಉತ್ತಮವಾದ ಬೆಳೆಗಳನ್ನು ಬೆಳೆದು ಉತ್ತಮವಾದ ಲಾಭವನ್ನುಗಳಿಸಬೇಕು ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಸರಕಾರ ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದ್ದು ಮಂಡ್ಯ ಜಿಲ್ಲೆಯ ರೈತರಿಗೆ ಅನುಕೂಲವಾಗು ನಿಟ್ಟಿನಲ್ಲಿ ಮಂಡ್ಯಕ್ಕೆ ಕೃಷಿ ಸಚಿವ ಚೆಲುವರಾಯಸ್ವಾಮಿ ಹೋರಾಟ ಮಾಡಿ ಕೃಷಿ ವಿಶ್ವವಿದ್ಯಾನಿಲಯವನ್ನು ಮಂಜೂರು ಮಾಡಿಸಿ ಸಾಕಷ್ಟು ಅನುದಾನವನ್ನು ತಂದು ರೈತರಿಗೆ ಅನುಕೂಲ ಮಾಡಿದ್ದಾರೆ ಎಂದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ನಮ್ಮ ಜಿಲ್ಲೆಯವರೇ ಆಗಿರುವುದ್ದರಿಂದ ನಮ್ಮ ಜಿಲ್ಲೆಗೆ ಕೃಷಿ ಇಲಾಖೆ ವತಿಯಿಂದ ಹೆಚ್ಚಿನ ಅನುದಾನ ನೀಡಿ ಜಿಲ್ಲೆಯ ರೈತರ ಹಿತ ಕಾಯ್ದು ರೈತರ ಕಲ್ಯಾಣಕ್ಕೆ ಶ್ರಮಿಸುತಿದ್ದು ಈ ನಿಟ್ಟಿನಲ್ಲಿ ಜಿಲ್ಲೆಯ ರೈತರು ಕೃಷಿ ಇಲಾಖೆಯ ವತಿಯಿಂದ ಸಬ್ಸಿಡಿ ರೂಪದಲ್ಲಿ ಸಿಗುವಂತಹ ಪರಿಕರಗಳನ್ನು ಪಡೆದು ಉತ್ತಮ ಕೃಷಿಯಲ್ಲಿ ತೊಡಗಬೇಕು ಎಂದರು.

ಬಳಿಕ ಮಂಡ್ಯ ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ್ ಮಾತನಾಡಿ, ರೈತರಿಗೆ ಕೃಷಿ ಇಲಾಖೆವತಿಯಿಂದ ದೊರೆಯುವ ಸವಲತ್ತುಗಳನ್ನು ಹಾಗೂ ಕೃಷಿ ಪದ್ಧತಿಯಲ್ಲಿ ಅಳವಡಿಸಿಕೊಳ್ಳಬೇಕಾದ ವಿಧಾನಗಳು ಬಗ್ಗೆ ಭತ್ತ ಕಬ್ಬಿನ ನಂತರ ಹಲಸಂದೆ ಬೆಳೆಗಳ ಬಗ್ಗೆ ಸವಿಸ್ತಾರವಾಗಿ ಮಾಹಿತಿಯನ್ನು ನೀಡಿದರು.

ನಂತರ ಶಾಸಕ ಕದಲೂರು ಉದಯ್ ರವರು ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ರೈತರ ಜಮೀನಿನಲ್ಲಿ ಹಲಸಂದೆ ಬೀಜವನ್ನು ಚೆಲ್ಲುವುದರ ಮೂಲಕ ರೈತರಿಗೆ ಪ್ರಾಯೋಗಿಕತೆಯನು ತೋರಿದರು.

ಈ ಸಂದರ್ಭದಲ್ಲಿ ಭಾರತಿನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಣ್ಣೂರು ರಾಜೀವ್, ಜಿ. ಪಂ ಸದಸ್ಯ ಕೆ. ಕುಮಾರರಾಜು, ತಾಲೂಕು ಸಹಾಯಕ ಕೃಷಿ ಅಧಿಕಾರಿ ಪ್ರತಿಭಾ, ಕೆ.ಶೆಟ್ಟಹಳ್ಳಿ ಗ್ರಾ. ಪಂ ಅಧ್ಯಕ್ಷೆ ಸುಧಾ, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳಾದ ಭವಾನಿ, ಕರುಣಾ, ತಿಮ್ಮೇಶ್, ಮೊಳೆನಿಂಗೇಗೌಡ, ಮರಿಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮೈಷುಗರ್‌ನಲ್ಲಿ ಅಕ್ರಮ ಆರೋಪ: ತನಿಖೆಗೆ ರಾಜ್ಯ ಸರ್ಕಾರ ಸಮಿತಿ ರಚನೆ

**ಮಂಡ್ಯ:** ರಾಜ್ಯದ ಸರ್ಕಾರಿ ಸ್ವಾಮ್ಯದ ಏಕೈಕ ಸಕ್ಕರೆ ಕಾರ್ಖಾನೆಯಾದ ಮೈಸೂರು ಷುಗರ್ ಕಂಪನಿ (ಮೈಷುಗರ್)ಯಲ್ಲಿ ಅವ್ಯವಹಾರ ಹಾಗೂ ಅಕ್ರಮ ನೇಮಕಾತಿ ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸಲು ರಾಜ್ಯ ಸರ್ಕಾರ ತನಿಖಾ ಸಮಿತಿಯನ್ನು ರಚಿಸಿದೆ.

ಮಹಾರಾಷ್ಟ್ರದ ನಿವೃತ್ತ ಸಕ್ಕರೆ ಆಯುಕ್ತ ಶೇಖರ್ ಗಾಯಕವಾಡ ಅವರ ಅಧ್ಯಕ್ಷತೆಯಲ್ಲಿ ಈ ಸಮಿತಿ ರಚನೆಯಾಗಿದ್ದು, ಪುಣೆಯ ಶುಗರ್ಸ್ ಎಂಜಿನಿಯರಿಂಗ್ ಮತ್ತು ರಿನೀವಬಲ್ ಎನರ್ಜಿ ವಿಭಾಗದ ಮುಖ್ಯಸ್ಥ ರಾಜೇಂದ್ರ ಚಾಂದಗುಡೆ, ರೈತಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಬೆಳಗಾವಿಯ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ನಿರ್ದೇಶಕ ಬಿ.ಎಸ್. ರಾಜಗೋಪಾಲ್, ತಾಂತ್ರಿಕ ಸಲಹೆಗಾರ ಸಿ.ಬಿ. ಪಾಟೀಲ್ ಹಾಗೂ ಮುಜಾವರ ಬಹದ್ದೂರ್ ಅಲಿ ಇಬ್ರಾಹಿಂ ಲಾತೂರು ಸಮಿತಿಯ ಸದಸ್ಯರಾಗಿದ್ದಾರೆ.

2021?22ನೇ ಸಾಲಿನಿಂದ ಇದುವರೆಗೆ ನಡೆದಿದೆ ಎನ್ನಲಾದ ಅವ್ಯವಹಾರಗಳಿಂದ ಕಂಪನಿಗೆ ಉಂಟಾಗಿರುವ ಆರ್ಥಿಕ ನಷ್ಟದ ಕುರಿತು ಸಂಪೂರ್ಣ ತನಿಖೆ ನಡೆಸಿ, 15 ದಿನಗಳೊಳಗೆ ವರದಿ ಸಲ್ಲಿಸುವಂತೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ) ಸೂಚಿಸಿದೆ.

**ಆರೋಪಗಳ ವಿವರ:** ಕಬ್ಬು ಕಟಾವು ಮುಂಗಡ ಪಾವತಿ, ಕಟಾವು ಹಾಗೂ ಸಾಗಣೆ, ಕಬ್ಬಿನ ತೂಕ ಮತ್ತು ಹಣ ಪಾವತಿಯಲ್ಲಿ ಅಕ್ರಮ ನಡೆದು ಕಾರ್ಖಾನೆಗೆ ಆರ್ಥಿಕ ನಷ್ಟ ಉಂಟಾಗಿದೆ ಎಂಬ ಆರೋಪಗಳು ಕೇಳಿಬಂದಿವೆ. ಗುತ್ತಿಗೆ ಹಾಗೂ



ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಅಕ್ರಮ ಹಾಗೂ ಮೀಸಲಾತಿ ನಿಯಮ ಉಲ್ಲಂಘನೆಯಾಗಿದೆ ಎಂಬ ದೂರುಗಳೂ ದಾಖಲಾಗಿವೆ. 2023?24ನೇ ಸಾಲಿನಲ್ಲಿ ಕಡಿಮೆ ಬೆಲೆಗೆ ಸಕ್ಕರೆ ಮಾರಾಟ ಮಾಡಲಾಗಿದೆ ಎಂಬ ಆರೋಪವೂ ಇದೆ.ಇದಲ್ಲದೆ, ಕೋಣನಹಳ್ಳಿ ಕೆರೆಯಿಂದ ನೀರು ಪೂರೈಸಲು ಪೈಪ್‌ಲೈನ್ ಅಳವಡಿಕೆಯಲ್ಲಿ ಅಕ್ರಮ ನಡೆದಿದ್ದು, ಕಂಪನಿಯ ಜಾಗವನ್ನು ಅಕ್ರಮವಾಗಿ ಗುತ್ತಿಗೆ ನೀಡುವ ಮೂಲಕ ನಷ್ಟ ಉಂಟು ಮಾಡಲಾಗಿದೆ ಎಂದು ದೂರಲಾಗಿದೆ. ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ ನಿವೃತ್ತ ನೌಕರರನ್ನು ಪುನರ್ ನೇಮಕ ಮಾಡಲಾಗಿದೆ ಎಂಬ ಆರೋಪಗಳೂ ಸಲ್ಲಿಕೆಯಾಗಿವೆ.ಈ ಕುರಿತು ಪ್ರತಿಕ್ರಿಯಿಸಿರುವ ರೈತ ಮುಖಂಡ ಕೆ. ಬೋರಯ್ಯ, ತನಿಖೆಗೆ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಆದರೆ ಸಮಿತಿಯಲ್ಲಿ ಕಾರ್ಖಾನೆ ವ್ಯಾಪ್ತಿಯ ಸ್ಥಳೀಯ ರೈತ ಪ್ರತಿನಿಧಿಯೊಬ್ಬರು ಇದ್ದಿದ್ದರೆ ತನಿಖೆ ಇನ್ನಷ್ಟು ಪಾರದರ್ಶಕವಾಗುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.ಇನ್ನೊಂದೆಡೆ, ಮೈಷುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಅವರು, 2008ರಿಂದ 2012ರವರೆಗೆ ನಾಗರಾಜಪ್ಪ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರದಿಂದ ಕಾರ್ಖಾನೆಗೆ ?127 ಕೋಟಿ ನಷ್ಟ ಉಂಟಾಗಿತ್ತು. ಈ ನಷ್ಟ ವಸೂಲಾತಿಗೆ ಉಪ ಲೋಕಾಯುಕ್ತರಾಗಿದ್ದ ಬಿ.ಎಸ್. ಪಾಟೀಲ್ ಆದೇಶ ಹೊರಡಿಸಿದ್ದರು. ಆ ಆದೇಶವನ್ನು ಹೈಕೋರ್ಟ್ ಇತ್ತೀಚೆಗೆ ಎತ್ತಿ ಹಿಡಿದಿದೆ. ಹೀಗಾಗಿ ಆಸ್ತಿ ಜಪ್ತಿಗೆ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

# ಪಾದಚಾರಿ ಮಾರ್ಗ ತೆರವುಗೊಳಿಸಿ ಕಾಮಗಾರಿ ನಡೆಸುವಂತೆ ಕನ್ನಡಪರ ಸಂಘಟನೆ ಮನವಿ

**ಮಂಡ್ಯ:** ನಗರದಲ್ಲಿ ಹಾದು ಹೋಗುವ ಬೆಂಗಳೂರು ಮೈಸೂರು ಹೆದ್ದಾರಿಯುದ್ದಕ್ಕು ಒತ್ತುವರಿಯಾಗಿರುವ ಪಾದಚಾರಿ ಮಾರ್ಗವನ್ನು ತೆರವುಗೊಳಿಸಿ ನಂತರ ಕಾಮಗಾರಿ ನಡೆಸುವಂತೆ ಕನ್ನಡಪರ ಸಂಘಟನೆಗಳ ನಿಯೋಗ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಅಪರ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದ ನಿಯೋಗ.ಮಂಡ್ಯ ನಗರದಲ್ಲಿ ಹಾದುಹೋಗಿರುವ ಬೆಂಗಳೂರು ಮೈಸೂರು ಹೆದ್ದಾರಿಯ ನಿರ್ಮಾಣ ಹಾಗೂ ಪಾದಚಾರಿ ಮಾರ್ಗದ ನವೀಕರಣ ಮಾಡಲಾಗುತ್ತಿದೆ.ಈ ಸಂಧರ್ಭದಲ್ಲಿ ನಿಯಮಾನುಸಾರ ಪಾದಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸದೆ ಅವೈಜ್ಞಾನಿಕ ಕಾಮಗಾರಿ ನಡೆಸಲಾಗುತ್ತಿದೆ.ಅದರಲ್ಲು ಮಂಡ್ಯ ನಗರದ ಪ್ರಮುಖ ಭಾಗವಾದ ನಂದಾ ವೃತ್ತದಿಂದ ಮಹವೀರ ವೃತ್ತದವರೆಗೆ ಪಾದಚಾರಿ ಮಾರ್ಗ ಇಕ್ಕಟ್ಟಾಗಿದ್ದು ಜನಸಂದಣಿಯಿಂದ ಕೂಡಿರುತ್ತದೆ. ಇಲ್ಲಿನ ಒತ್ತುವರಿ ತೆರವುಗೊಳಿಸಲು ಅಗತ್ಯ ಕ್ರಮವಹಿಸುವಂತೆ ನಗರಸಭೆ ಮತ್ತು ಹೆದ್ದಾರಿ ಪ್ರಾಧಿಕಾರಕ್ಕೆ ಅಗತ್ಯ ಒತ್ತಡ ಹೇರಿದ ನಂತರ ಪಾದಚಾರಿ ಮಾರ್ಗದ ಒತ್ತುವರಿ ಸ್ಥಳ ಗುರುತಿಸಿ ಬಲಾಢ್ಯರ ಲಾಭಿಗೆ ಮಣಿದು ತಟಸ್ಥರಾಗಿದ್ದಾರೆ. ಇದರಿಂದಾಗಿ ಈ ಭಾಗದಲ್ಲಿ ಸಂಚರಿಸುವ ಮಹಿಳಾ ಕಾಲೇಜು ಕಲ್ಲುಕಟ್ಟಡದ ಸಾವಿರಾರು ವಿದ್ಯಾರ್ಥಿನಿಯರು ಇಕ್ಕಟ್ಟಾದ ಪಾದಚಾರಿ ಮಾರ್ಗವನ್ನೆ ಬಳಸುವಂತಾಗಿದೆ.ಈ ಭಾಗದಲ್ಲಿ ಸಾಕಷ್ಟು ಬ್ಯಾಂಕ್ ಹೋಟೆಲ್ ಮದ್ಯದಂಗಡಿಗಳು ಇದ್ದು ಮೆಡಿಕಲ್ ಕಾಲೇಜು ರೈಲು ನಿಲ್ದಾಣ ಇದ್ದು ಸಾರ್ವಜನಿಕರ ಓಡಾಟ ಹೆಚ್ಚಾಗಿರುತ್ತದೆ.ಒತ್ತುವರಿ



ಮಾಡಿಕೊಂಡಿರುವವರ ಮೇಲೆ ಯಾವುದೆ ದಾಕ್ಷಿಣ್ಯವಿಲ್ಲದೆ ಕ್ರಮ ಜರುಗಿಸಿ ವಿಶಾಲ ಪಾದಚಾರಿ ಮಾರ್ಗ ರೂಪಿಸಬೇಕೆಂದು ಮನವಿ ನೀಡಿದರು.

ಮುಂದುವರಿದು ಮನವಿಯಲ್ಲಿ

ಬೆಂಗಳೂರು ಮೈಸೂರು ಹೆದ್ದಾರಿಯ ಸರ್ವಿಸ್ ರಸ್ತೆಗಳಲ್ಲಿ ಅನಗತ್ಯ ಅವೈಜ್ಞಾನಿಕ ಉಬ್ಬುಗಳನ್ನು ನಿರ್ಮಿಸಿ ಸಾರ್ವಜನಿಕರ ಸಂಚಾರಕ್ಕೆ ಅಡೆತಡೆ ಒಡ್ಡಲಾಗಿದೆ.ಗಣಂಗೂರು ಬಳಿ ಪ್ರಾಣಿಗಳ ರಸ್ತೆ ದಾಟುವಿಕೆಗಾಗಿ ನಿರ್ಮಿಸಿರುವ ಸೇತುವೆ ಅಪೂರ್ಣವಾಗಿದೆ. ಇದರ ಪರಿಣಾಮ ಜಿಂಕೆ ಸೇರಿದಂತೆ ಹಲವು ವನ್ಯಜೀವಿಗಳು ರಸ್ತೆ ಅಪಘಾತಕ್ಕೆ ಬಲಿಯಾಗಿವೆ. ಹೆದ್ದಾರಿಯುದ್ದಕ್ಕು ಅಗತ್ಯ ಶೌಚಾಲಯ. ಕುಡಿಯುವ ನೀರಿನ ವ್ಯವಸ್ಥೆ ಇಲ್ಲವಾಗಿದೆ.ಅನಗತ್ಯ ರಸ್ತೆ ಉಬ್ಬುಗಳಿಂದ ಪ್ರಯಾಣ ಸುಧೀರ್ಘವಾಗಿದೆ. ಹಲವೆಡೆ ತಡೆಗೋಡೆಗಳನ್ನು ನಿರ್ಮಿಸಿಲ್ಲ.ಈ ಎಲ್ಲ ಕೊರತೆಗಳನ್ನು ಬಗೆಹರಿಸದೆ ಟೋಲ್ ಸಂಗ್ರಹಿಸುವುದು ಕಾನೂನುಬದ್ಧ ಲೂಟಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಹೆದ್ದಾರಿಯ ಸಮಸ್ಯೆಗಳ ಇತ್ಯರ್ಥಕ್ಕೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಒಂದು ಸಭೆ ಏರ್ಪಡಿಸುವಂತೆ ನಿಯೋಗ ಒತ್ತಾಯಿಸಿತು. ಮನವಿಗೆ ಸ್ಪಂದಿಸಿದ ಅಪರ ಜಿಲ್ಲಾಧಿಕಾರಿ ಶಿವನಂದಾಮೂರ್ತಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ.ನಗರಸಭೆ.ಉಪವಿಭಾಗಾಧಿಕಾರಿ. ತಹಶೀಲ್ದಾರರ ಜಂಟೀ ಸಭೆ ಆಯೋಜಿಸಲು ಒಪ್ಪಿಗೆ ಸೂಚಿಸಿದರು.ಈ ಸಂಧರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಎಚ್‌ಡಿ ಜಯರಾಮು.ಅಟೋ ವೆಂಕಟೇಶ್. ಸೋಮಶೇಖರ.ಮುದ್ದೇಗೌಡ.ಸ್ವಂತಮನೆ ನಮ್ಮ ಹಕ್ಕು ಸಂಘಟನೆಯ ಸತೀಶ್ ಬಿ.ಕೆ.ರೈತಸಂಘದ ತಾಲೂಕು ಅಧ್ಯಕ್ಷ ಬೂದನೂರು ಪುಟ್ಟಸ್ವಾಮಿ. ಕರುನಾಡ ಸೇವಕರು ಸಂಘಟನೆಯ ರಾಜ್ಯ ವಕ್ತಾರ ಎಂ.ಬಿ.ನಾಗಣ್ಣಗೌಡ ಸೇರಿದಂತೆ ಹಲವರು ನಿಯೋಗದಲ್ಲಿದ್ದರು.

# ಹೀಗೊಂದು ಪಾಲು.... ಅರಿವಿನ ಬದುಕಿಗೆ ರಹದಾರಿ



। ವೀಣಾ ಹೇಮಂತ್‌ಗೌಡ ಪಾಟೀಲ್

ಅದೊಂದು ಕುಟುಂಬ ಆ ಕುಟುಂಬದ ಯಜಮಾನಿ ತಾಯಿ ಮರಣ ಹೊಂದಿದ್ದಾಳೆ. ಆಕೆಯ ಹಿರಿಯ ಮಗ ಅತ್ಯಂತ ಬೆಲೆ ಬಾಳುವ ಕಾರಿನಲ್ಲಿ ದುಬಾರಿ ಬೆಲೆಯ ಬಟ್ಟೆಗಳನ್ನು ಧರಿಸಿ ತಾಯಿಯ ಅಂತ್ಯಕ್ರಿಯೆಗೆ ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಬರುತ್ತಾನೆ. ಕುಟುಂಬದ ಎಲ್ಲ ಜವಾಬ್ದಾರಿಗಳು ತನ್ನ ಮೇಲಿವೆ ಎಂಬ ಗತ್ತಿನ ಭಾವ ಆತನ ನಡೆಯಲ್ಲಿ ಇತ್ತು. ತರಗತಿಯಲ್ಲಿ ಯಾವಾಗಲೂ ಒಳ್ಳೆಯ ಅಂಕಗಳನ್ನು ಗಳಿಸುತ್ತಾ ಉನ್ನತ ವಿದ್ಯಾಭ್ಯಾಸವನ್ನು ಮಾಡಿ ಒಳ್ಳೆಯ ವೇತನ ವಿರುವ ಉದ್ಯೋಗವನ್ನು ಹಿಡಿದ ಹಾಗೂ ತಂದೆ ತಾಯಿಗಳಿಗೆ ನಿಯಮಿತವಾಗಿ ಹಣವನ್ನು ಕಳುಹಿಸುತ್ತಿರುವ ತಾನು ಆ ಮನೆಗೆ ಅತ್ಯಂತ ಮುಖ್ಯವಾದ ವ್ಯಕ್ತಿ ಎಂಬ ಭಾವ ಆತನ ಪ್ರತಿ ಹೆಜ್ಜೆಯಲ್ಲೂ ಕಾಣುತ್ತಿತ್ತು.



ಸುಮಾರು 15 ವರ್ಷಗಳ ಕಾಲ ವಿದೇಶದಲ್ಲಿ ಇದ್ದು ತನ್ನದೇ ಆದ ಸ್ವಂತ ಉದ್ಯೋಗ, ಮನೆ ಹಾಗೂ ಸಾಕಷ್ಟು ಆಸ್ತಿ, ಬ್ಯಾಂಕ್ ಬ್ಯಾಲೆನ್ಸ್ ಹೊಂದಿದ್ದು ತಂದೆ ತಾಯಿಗಳನ್ನು ಜೋಪಾನ ಮಾಡಲು ತನ್ನ ತಮ್ಮನಿಗೆ ಪ್ರತಿ ತಿಂಗಳು ಸಾವಿರಾರು ರೂ ಹಣವನ್ನು ಆತ ಹಾಕುತ್ತಿದ್ದ. ತಾನು ಕಳುಹಿಸುವ ಹಣದಲ್ಲಿಯೇ ತನ್ನ ಸಹೋದರ ತಾಯಿಯನ್ನು ನೋಡಿಕೊಂಡು ಹಳ್ಳಿಯಲ್ಲಿರುವ ಹಳೆಯ ಮನೆಯಲ್ಲಿ ಇದ್ದಾನೆ ನನ್ನಿಂದಲೇ ಆತನ ಕುಟುಂಬದ ಖರ್ಚು ವೆಚ್ಚಗಳು ಸಾಗುತ್ತಿವೆ... ಆದ್ದರಿಂದ ಆತ ತನಗೆ ಋಣಿಯಾಗಿರಬೇಕು ಎಂಬ ಹೆಮ್ಮೆಯ ಭಾವ ಅಣ್ಣನಲ್ಲಿತ್ತು. ತನ್ನ ತಾಯಿಗೆ ತಾನು ಕಳುಹಿಸುವ ಹಣದಿಂದ ಆಕೆ ತನ್ನ ಜೀವನದ ಸಂಜೆಯನ್ನು ಅತ್ಯಂತ ಸಂತೋಷವಾಗಿ ಕಳೆಯುತ್ತಿದ್ದಳು ಎಂಬ ಗರ್ವ ಕೂಡ ಆತನಲ್ಲಿತ್ತು.

ಅಂತ್ಯ ಸಂಸ್ಕಾರದ ವಿಧಿ ವಿಧಾನಗಳು ಮುಗಿದ ನಂತರ ಎಲ್ಲರೂ ಮನೆಗೆ ಹಿಂದಿರುಗಿ ಸ್ನಾನ ಮಾಡಿ ಸೇರಿದಷ್ಟನ್ನು ತಿಂದು ಮನೆಯ ವರಾಂಡದಲ್ಲಿ ಮೌನವಾಗಿ ಕುಳಿತಾಗ ಅಣ್ಣನ ದೃಷ್ಟಿ ಮನೆಯ ಹೊರ ವಲಯದ ಕಡೆ ಚಾಚಿತು.

ಅರೆ! ಮನೆಯ ಕೈದೋಟ ಇಷ್ಟೇಕ್ಕೆ ಒಣಗಿ ಹೋಗಿದೆ.

ಮನೆಯ ಗೋಡೆಗಳ ಬಣ್ಣವೆಲ್ಲ ಹಕ್ಕಳೆ ಉದುರಿ ಹೋಗಿದೆ. ಕುಣಿಯಲ್ಲಿ ಅಮ್ಮನನ್ನು ಕೂರಿಸುವಾಗ ಲಕ್ಷ್ಯ ಕೊಟ್ಟು ನೋಡಿದರೆ ಅಮ್ಮ ಬಹಳ ಬಡವಾಗಿ ಹೋಗಿದ್ದರು...ಹಾಗಾದರೆ ತಾನು ಹೇಳಿದಂತಹ ಪೌಷ್ಟಿಕ ಆಹಾರವನ್ನು ತಮ್ಮ ಕೊಟ್ಟಿಲ್ಲವೇ ಎಂಬ ಅನುಮಾನ ಆತನನ್ನು ಕಾಡಿತ್ತು. ಇದೀಗ ಮನೆಯ ಪರಿಸ್ಥಿತಿ ಆತನಿಗೆ ಈ ಎಲ್ಲಾ ವಿಷಯಗಳ ಕುರಿತು ಯೋಚಿಸುವಂತೆ ಮಾಡಿತು. ಬಹಳ ಸಮಯದ ನಂತರ ತಮ್ಮನನ್ನು ಕುರಿತು ಈ ಕುರಿತು ಆತ ಪ್ರಶ್ನಿಸಿದ.

ತಮ್ಮ ಏನೊಂದು ಉತ್ತರಿಸದೆ ಅಣ್ಣನ ಮುಖವನ್ನು ಸುಮ್ಮನೆ ದಿಟ್ಟಿಸಿ ನೋಡಿದ. ಹಳೆಯ ಟೀ ಶರ್ಟ್ ಹಾಗೂ ಪಂಚೆಯನ್ನು ಉಟ್ಟಿದ್ದ ಆತನ ಕಣ್ಣುಗಳ ಕೆಳಗೆ ಕಪ್ಪು ವರ್ತುಲ ಮಡುಗಟ್ಟಿದ್ದರೆ ದೇಹದಲ್ಲಿ ದಣಿದ ಭಾವ ಕೈಗಳು ಕಪ್ಪಗಿನ ಕಲೆಯಿಂದ ಕೂಡಿದ್ದವು. ತನ್ನ ಅಣ್ಣನಿಗಿಂತ ಕೇವಲ ಮೂರು ವರ್ಷ ಚಿಕ್ಕವನಾದರೂ ಕೂಡ ಆತ ಅಣ್ಣನಿಗಿಂತ 10 ವರ್ಷ ದೊಡ್ಡವನಂತೆ ಕಾಣುತ್ತಾನೆ. ಮುಖದಲ್ಲಿ ಸೋತ, ದಣಿದ ಭಾವ.

ಆತನ ಉತ್ತರಕ್ಕಾಗಿ ನಿರೀಕ್ಷಿಸದ ಅಣ್ಣ ಎಲ್ಲ ಕಾರ್ಯಗಳು ಮುಗಿದ ಮೇಲೆ ಮನೆಯನ್ನು ಮಾರಿಬಿಡೋಣ. ನನಗೆ ಅಷ್ಟೇನೂ ಹಣದ ಅವಶ್ಯಕತೆ ಇಲ್ಲ. ನಾವು ಅದನ್ನು 60–40 ಶೇಕಡ ಹಂಚಿಕೊಳ್ಳೋಣ ಎಂದು ಹೇಳಿದ. ತಮ್ಮನಿಗೆ ಹೆಚ್ಚಿನ ಪಾಲು ನೀಡುವ ಮಾತನಾಡಿದ್ದಕ್ಕೆ ತಮ್ಮನ ಮುಖದಲ್ಲಿ ಕೃತಜ್ಞತೆಯ ಭಾವವನ್ನು ಅಣ್ಣ ನಿರೀಕ್ಷಿಸಿದ್ದ... ಆದರೆ ಕಟುವಾದ ಅರಗಿಸಿಕೊಳ್ಳಲಾಗದ ಸತ್ಯ ಆತನ ಮುಂದೆ ಬರಲಿತ್ತು.

ನಿಧಾನವಾಗಿ ಮೇಲೆದ್ದ ತಮ್ಮ ಅಲ್ಲಿಯೇ ಇದ್ದ ಮಾಡಿನಲ್ಲಿದ್ದ ಹಳೆಯ ಶಾಲೆಯ ನೋಟ್ ಪುಸ್ತಕ ಒಂದನ್ನು ಅಣ್ಣನ ಕೈಗಿತ್ತ. ತುಂಬಾ ಹಳೆಯದಾದ ಮುದುರಿದ ಅಲ್ಲಲ್ಲಿ ಗೀಚಿದ ಆ ಪುಸ್ತಕವನ್ನು ಕೊಟ್ಟ ತಮ್ಮ ಇದನ್ನು ಓದು ಎಂದಷ್ಟೇ ಹೇಳಿದ. ಅದು ದೈನಂದಿನ ಖರ್ಚು ವೆಚ್ಚಗಳ ಕುರಿತಾದ ಪುಸ್ತಕವಾಗಿರದೆ ಅಮ್ಮನ ದಿನಚರಿಯ ಕುರಿತ ಪುಸ್ತಕವಾಗಿತ್ತು.

ಈ ದಿನ ರಾತ್ರಿ ಅಮ್ಮ ಒಂಚೂರು ಮಲಗಲಿಲ್ಲ. ಆಗಾಗ ಕಣ್ಣು ತೆಗೆದು ಅಣ್ಣ ಬಂದನೇ? ಎಂದು ಕೇಳುತ್ತಿದ್ದಳು. ರಾತ್ರಿಯೆಲ್ಲಾ ಹಾಸಿಗೆ ಒದ್ದೆ ಮಾಡಿದ ಅಮ್ಮನ ಹಾಸಿಗೆಯನ್ನು ಸುಮಾರು ಐದು ಬಾರಿ ನಾನು ಬದಲಿಸಿದೆ. ಅಂತಿಮವಾಗಿ ಅಮ್ಮನಿಗೆ ಮುಂಜಾನೆ ಸ್ನಾನ ಮಾಡಿಸುವಾಗ ಆಕೆ ನನ್ನ ಕೈಯನ್ನು ಕಚ್ಚಿದಳು

ಪುಟವನ್ನು ತಿರುಗಿಸಿದಾಗ ಅಮ್ಮನ ಔಷಧಿಗಳಿಗೆ ಹಣ ಸಾಲುತ್ತಿಲ್ಲ ಆದ್ದರಿಂದ ಈ ದಿನ ನಾನು ನನ್ನ ಮೋಟರ್ ಬೈಕ್ ಮಾರಿದೆ ಎಂದು ಬರೆದಿತ್ತು.

ಮತ್ತೊಂದು ಪುಟದ ಕಡೆ ಕಣ್ಣು ಹಾಯಿಸಿದಾಗ ಈ ದಿನ ಅಮ್ಮ ಯಾರನ್ನೂ ಗುರುತಿಸುತ್ತಿಲ್ಲ... ಆಕೆಗೆ ತನ್ನ ಹಿರಿಯ ಮಗನ ಕಡೆ ಚಿತ್ತ. ಆಗಾಗ ಮನೆಯ ಫೋನಿನ ಕಡೆ ನೋಡಿ ನಿಡುಸುಯ್ಯುತ್ತಿದ್ದ ಆಕೆಯನ್ನು ನೋಡಿ ತಡೆಯಲಾಗದೆ ಈ ಹಿಂದೆ ಅಣ್ಣ ಮಾತನಾಡಿದ ಧ್ವನಿ ಮುದ್ರಿಕೆಯನ್ನು ಆಕೆಗೆ ಕೇಳಿಸಿದಾಗ ಮಾತ್ರ ಆಕೆಯನ್ನು ಸಮಾಧಾನ ಪಡಿಸಲು ಸಾಧ್ಯವಾಯಿತು. ಒಂದರೆ ಕ್ಷಣ ಕೂಡ ನನ್ನನ್ನು ಮಂಚದ ಪಕ್ಕದಿಂದ ಸರಿಯಲು ಅಮ್ಮ ಬಿಡಲಿಲ್ಲ.... ಅಮ್ಮನ ಮಂಚದ ಪಕ್ಕದಲ್ಲಿಯೇ ಕುಳಿತು ನನ್ನ ಪತ್ನಿ ನನಗೆ ಕೊಟ್ಟ ಊಟವನ್ನು ಸೇವಿಸಿದೆ ಎಂದು ಬರೆದಿತ್ತು.

ಪುಟವನ್ನು ತಿರುಗಿಸಿದಾಗ ಅಮ್ಮನನ್ನು ಹೊತ್ತು ಬಚ್ಚಲು ಮನೆಗೆ, ಅಂಗಳಕ್ಕೆ, ಹಜಾರಕ್ಕೆ, ಹಿತ್ತಲಿಗೆ ಎಂದು ಓಡಾಡಿ ನನ್ನ ಬೆನ್ನು ಮೂಳೆಯಲ್ಲಿ ಲಘುವಾದ ಬಿರುಕು ಉಂಟಾಗಿದ್ದು ಇನ್ನು ಮೇಲೆ ನಾನು ಅತಿ ಭಾರವನ್ನು ಹೊರಬಾರದು ಎಂದು ವೈದ್ಯರು ಹೇಳಿದ್ದಾರೆ ಆದ್ದರಿಂದ ಈ ವಾರ ನಾನು ಯಾವುದೇ ಭಾರದ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ.

ಹಿರಿಯ ಮಗನ ಗಂಟಲು ಕಟ್ಟಿತು.... ಮುಂದಿನ ಪುಟವನ್ನು ತಿರುಗಿಸಿ ಓದಲು ಆತನಿಗೆ ಸಾಧ್ಯವಾಗಲೇ ಇಲ್ಲ.

ಇದೀಗ ಅಣ್ಣನನ್ನು ನಿಟ್ಟಿಸಿ ನೋಡಿದ ತಮ್ಮ ಅತ್ಯಂತ ಮೆಲುವಾದ ದನಿಯಲ್ಲಿ ನಿರ್ಭಾವುಕನಾಗಿ ಹೇಳಲಾರಂಭಿಸಿದ.

ಅಣ್ಣ ನೀನು ಪ್ರತಿ ತಿಂಗಳು ಹಣವನ್ನೇನೋ ಕಳುಹಿಸುತ್ತಿದ್ದೆ.. ಅದಕ್ಕೆ ನಿನಗೆ ಧನ್ಯವಾದಗಳು... ನೀನು ದಿನಕ್ಕೆ ಕನಿಷ್ಠ 8 ಗಂಟೆಯಾದರೂ ನೆಮ್ಮದಿಯ ನಿದ್ರೆಯನ್ನು ಮಾಡುತ್ತಿದ್ದೆ, ನಿನಗೆ ವಾರಾಂತ್ಯಗಳಲ್ಲಿ ಹೊರ ಸುತ್ತಾಟಕ್ಕೆ ರಜೆಗಳು ಹಾಗೂ ಸವಲತ್ತುಗಳು ಇದ್ದವು.

ಆದರೆ ನಾನು ಕಳೆದ ನಾಲ್ಕು ವರ್ಷಗಳಲ್ಲಿ ಒಂದೇ ಒಂದು ರಾತ್ರಿಯೂ ಸರಿಯಾಗಿ ನಿದ್ದೆ ಮಾಡಲು ಸಾಧ್ಯವಾಗಿಲ್ಲ. ನನ್ನ ಪತ್ನಿ ಮತ್ತು ಮಕ್ಕಳು ಕೂಡ ನನಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ನಿಜ! ಆದರೆ ಅಮ್ಮನನ್ನು ಜೋಪಾನ ಮಾಡಲು ನಾನು ನನ್ನ ಉದ್ಯೋಗವನ್ನು ತ್ಯಜಿಸಲೇಬೇಕಾಗಿತ್ತು.

ಒಂದೆರಡು ಕ್ಷಣ ಸುಮ್ಮನಿದ್ದು ಮತ್ತೆ ಮುಂದುವರೆಸಿದ ತಮ್ಮ ನೀನು ಕಳುಹಿಸಿದ ಹಣದಿಂದ ಅಮ್ಮನಿಗೆ ಕೇವಲ ಡೈಪರ್‌ಗಳನ್ನು ಕೊಳ್ಳಲು ಸಾಧ್ಯವಾಯಿತು, ನಿಜ ಆದರೆ ಆ ಡೈಪರ್ ಗಳನ್ನು ಹಾಕಲು ತೆಗೆಯಲು ಸ್ವಚ್ಛಗೊಳಿಸಲು ಆ ಹಣದಿಂದ ಸಾಧ್ಯವಿಲ್ಲ.

ನೀನು ಕಳುಹಿಸಿದ ಹಣದಿಂದ ಅಮ್ಮನ ಔಷಧಿಗಳನ್ನು ಕೊಳ್ಳಲು ಸಾಧ್ಯವಾಯಿತು ನಿಜ ಆದರೆ ಎಲ್ಲಾ ಅನಾರೋಗ್ಯಗಳು ಕೇವಲ ಔಷಧಿಯಿಂದ ಗುಣವಾಗುವುದಿಲ್ಲ... ವಯಸ್ಸಾದ ವ್ಯಕ್ತಿಗಳಿಗೆ ಔಷಧಿಗಿಂತ ಹೆಚ್ಚಾಗಿ ಭಾವನಾತ್ಮಕ ಅವಶ್ಯಕತೆಯೂ ಇರುತ್ತದೆ.

ವಯೋ ಸಹಜ ತೊಂದರೆಗಳಿಂದ ಹೆದರಿ ನಡುಗುತ್ತಿರುವ ಅನುಭವಿಸುತ್ತಿರುವ ತಾಯಿಗೆ ಹಣದ ಅವಶ್ಯಕತೆಗಿಂತ ಹೆಚ್ಚಾಗಿ ಆ ಕ್ಷಣದಲ್ಲಿ ಸಾಂತ್ವನದ ಅವಶ್ಯಕತೆ ಇರುತ್ತದೆ. ಹಣದಿಂದ ಡೈಪರ್ ಗಳನ್ನು, ಔಷಧಿಗಳನ್ನು ಕೊಳ್ಳಬಹುದೇ ಹೊರತು ಭದ್ರತೆಯ ಭಾವವನ್ನೆಲ್ಲ ಎಂದು ಹೇಳಿ ನಿಡಿದಾದ ಉಸಿರನ್ನು ಬಿಟ್ಟ ತಮ್ಮ ಮತ್ತೆ ಒಂದು ಹೆಜ್ಜೆ ಮುಂದೆ ನಡೆದು ಬಂದು ಅಣ್ಣ ಇಡೀ ಮನೆಯನ್ನು ಮಾರು ಎಲ್ಲಾ ಹಣವನ್ನು ನೀನೆ ತೆಗೆದುಕೋ ಏಕೆಂದರೆ ಈಗಾಗಲೇ ನಾನು ನನ್ನ ಪಾಲಿನ ಎಲ್ಲ ಶ್ರಮವನ್ನು ದುಡಿಮೆಯನ್ನು ಹಾಕಿದ್ದೇನೆ.... ಇನ್ನು ದುಡಿಯುವ ಅನಿವಾರ್ಯತೆ ಹಾಗೂ ಚೈತನ್ಯ ಎರಡು ನನಗೆ ಇದೆ... ಪ್ರಸ್ತುತ ನನಗೆ ಬೇಕಾಗಿರುವುದು ಒಂದು ನೆಮ್ಮದಿಯ ನಿದ್ರೆ ಮತ್ತು ವಿಶ್ರಾಂತಿ ಎಂದು ಹೇಳಿ ಅಮ್ಮನ ಕೋಣೆಗೆ ಹೋಗಿ ಮಲಗಿದನು. ಹಲವಾರು ವರ್ಷಗಳಿಂದ ಬೇಕು ಬೇಕೆಂದು ಆತ ಕಾತರಿಸುತ್ತಿದ್ದರೂ ತಾಯಿಯ ಪಾಲನೆಯ ಜವಾಬ್ದಾರಿಯಿಂದ ಓಡಿ ಹೋಗುತ್ತಿದ್ದ ನಿದ್ರಾ ದೇವಿ ಕೆಲವೇ ಕ್ಷಣಗಳಲ್ಲಿ ಆತನನ್ನು ಇನ್ನಿಲ್ಲದಂತೆ ಆವರಿಸಿದಳು.

ಅದುವರೆಗೂ ಅತಿ ದೊಡ್ಡ ಭ್ರಮೆಯನ್ನು ಹೊತ್ತು ಕುಳಿತಿದ್ದ ಅಣ್ಣ ಅಲ್ಲಿಯೇ ಇದ್ದ ಹಳೆಯ ಮುರುಕು ಸೋಪಾದ ಮೇಲೆ ತನ್ನೆಲ್ಲ ಮನೋ ದೈಹಿಕ ಭಾರವನ್ನು ಹಾಕಿ ಧೊಪ್ಪೆಂದು ಕುಳಿತ. ಕೈಯಲ್ಲಿದ್ದ ದುಬಾರಿ ಬೆಲೆಯ ವಾಚಿನ ಮಿಡಿಯುವ ಟಿಕ್ ಟಿಕ್ ಎಂಬ ಶಬ್ದ ಆತನಿಗೆ ಕಿರಿಕಿರಿಯನ್ನು ಹುಟ್ಟಿಸಿದರೆ ಮನೆಯ ಮುಂಭಾಗದಲ್ಲಿ ಆತ ಬಿಚ್ಚಿಟ್ಟಿದ್ದ ಬ್ರಾಂಡೆಡ್ ಶೂಗಳು ಆತನನ್ನು ಇನ್ನಿಲ್ಲದಂತೆ ಅಣಕಿಸಿದಂತೆ ಭಾಸವಾಯಿತು.

ಇಲ್ಲಿಯವರೆಗೂ ತಾನು ಮಾಡಿದ ಸಾಧನೆಗಳೆಲ್ಲವೂ ಕ್ಷಣಮಾತ್ರದಲ್ಲಿ ನೆಲಕ್ಕಪ್ಪಳಿಸಿದಂತಾಯಿತು ಆತನಿಗೆ. ಇಡೀ ಕುಟುಂಬದ ಸಂರಕ್ಷಕ ನಾನು ಎಂಬ ಭ್ರಮೆಯ ಮುಖವಾಡ ಕಳಚಿ ಬಿದ್ದಂತಾಯಿತು

ನಿಜವಾಗಿಯೂ ಕುಟುಂಬವನ್ನು ಸಂರಕ್ಷಿಸಿದಾತ ತನ್ನ ತಮ್ಮ.

ನಾನು ಔಷಧಿಗಾಗಿ ಹಣ ಕಳುಹಿಸಿದೆ ನಿಜ ಆದರೆ ಆತ ತಾಯಿಗೆ ಔಷಧಿ, ಮಾತ್ರೆ ತಿನ್ನಿಸಿ, ಹೊತ್ತು ಹೊತ್ತಿಗೆ ಊಟ ಮಾಡಿಸಿ ಆಕೆಯ ಆರೋಗ್ಯವನ್ನು ಕಾಯ್ದ.

ತಾಯಿಯ ಅಂತಿಮ ಕ್ರಿಯೆಗಳಿಗೆ ತಾನು ಹಣ ಖರ್ಚು ಮಾಡಿರಬಹುದು ಆದರೆ ತಾಯಿಯ ಅಂತಿಮ ದಿನಗಳವರೆಗೆ ಆಕೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿದ ತಮ್ಮ ಆಕೆಯ ಪಾಲಿಗೆ ನಿಜವಾದ ಪೋಷಕನಾದ.

ಆ ದಿನ ಮಧ್ಯಾಹ್ನ ಅಣ್ಣ ಸೀದಾ ನೋಟರಿಯ ಬಳಿ ಹೋಗಿ ಇಡೀ ಮನೆಯನ್ನು ತಮ್ಮನ ಹೆಸರಿಗೆ ವರ್ಗಾಯಿಸಿದ.... ತಮ್ಮನಿಗೆ ಮನೆಯ ತನ್ನ ಭಾಗದ ಆಸ್ತಿಯನ್ನುಹಾಗೆ ಕೊಟ್ಟದ್ದು ಕೊಡುಗೆಯಾಗಿ ಅಲ್ಲ ಬದಲಾಗಿ ಮರುಪಾವತಿಸಲೇಬೇಕಾದ ಋಣವನ್ನು ಸಂದಾಯ ಮಾಡುವ ನಿಟ್ಟಿನಲ್ಲಿ.

ಅದಾಗಿಯೂ ತಮ್ಮನ ಜಾಗವನ್ನು ತಾನು ತುಂಬಲು ಸಾಧ್ಯವಿಲ್ಲ ಎಂಬುದರ ಅರಿವು ಆತನಿಗೆ ಈಗ ಬಹಳ ತಡವಾಗಿಯಾದರೂ ಸರಿಯಾಗಿ ಅರ್ಥವಾಗಿತ್ತು.

ಸ್ನೇಹಿತರೆ....ದೂರ ಅಂತರಿಕ್ಷದಲ್ಲಿರುವ ನಮಗೆ ಕಾಲ ಕಾಲಕ್ಕೆ ಸಂದೇಶವನ್ನು ಕಳುಹಿಸುವ ಉಪಗ್ರಹ ಹಾಗೂ ನಮ್ಮ ಜೊತೆಗೆ ಇರುವ ಊರುಗೋಲು ಇವುಗಳಲ್ಲಿ ವೃದ್ಧರ ಮೊದಲ ಆಯ್ಕೆ ಯಾವುದು ಎಂದು ನೀವು ಕೇಳಿದರೆ ಅವರು ಊರುಗೋಲನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ.

ಕುಟುಂಬದ ಅತ್ಯಂತ ಜಾಣ ಮಗ ದೂರದಲ್ಲಿರುವ ಉಪಗ್ರಹದಂತೆ. ಆಗಾಗ ಸಂದೇಶಗಳನ್ನು ಕಳುಹಿಸುವ ಉಪಗ್ರಹದಂತೆ ಮಗನು ಕೂಡ ಆಗಾಗ ಹಣವನ್ನು ಕಳುಹಿಸಿ ತನ್ನ ಕರ್ತವ್ಯವನ್ನು ನಿಭಾಯಿಸಬಹುದು ಆದರೆ ವಯೋ ಸಹಜವಾಗಿ ಆಸರೆಯನ್ನು ಬಯಸುವ ಜೀವಿಗಳಿಗೆ ಅತ್ಯವಶ್ಯಕವಾಗಿ ಬೇಕಾಗುವ ಊರುಗೋಲಿನಂತೆ ಜಾಣನಲ್ಲದೆ ಹೋದರೂ, ಅನಿವಾರ್ಯವಾಗಿಯಾದರೂ ತನ್ನ ಕರ್ತವ್ಯಗಳನ್ನು ನಿಭಾಯಿಸುವ ಮಕ್ಕಳು ಎಷ್ಟೋ ಬಾರಿ ಈ ಸಮಾಜದ ದೃಷ್ಟಿಯಲ್ಲಿ ಏನನ್ನೂ ಮಾಡದ, ಏನನ್ನೂ ಸಾಧಿಸದ ನಿರುಪಯುಕ್ತ ಬದುಕನ್ನು! ಬದುಕುತ್ತಾರೆ..... ಆದರೆ ಅವರ ನಿರುಪಯುಕ್ತತೆಯ ಮೇಲುಹಾಸಿನ ಕೆಳಗೆ ಜವಾಬ್ದಾರಿಯ, ಮಾನವೀಯತೆಯ ಅಂತಸ್ಸತ್ವ ಗಟ್ಟಿಯಾಗಿ ನೆಲೆಯೂರಿರುತ್ತದೆ.

ದೂರದ ಉಪಗ್ರಹ ದೂರದಲ್ಲೇ ಇದ್ದುಕೊಂಡು ಹಣ ಕಳುಹಿಸಬಹುದು, ತಮ್ಮ ಅಭಿಪ್ರಾಯಗಳನ್ನು ಖಚಿತವಾಗಿ



ಹೇಳಬಹುದು, ನಿರ್ಣಯಾತ್ಮಕವಾಗಿ ಮಾತನಾಡಬಹುದು.. ಆದರೆ ಹತ್ತಿರದ ಕೈ ನಿಲುಕಿನಲ್ಲಿರುವ ಊರುಗೋಲು ಜೊತೆಯಾಗಿರುತ್ತದೆ, ಸಹಕಾರಿಯಾಗಿರುತ್ತದೆ, ಬಾಗಿ ನಡೆಯುತ್ತದೆ, ಬೆಂಬಲವಾಗಿರುತ್ತದೆ.... ಮೌನದಲ್ಲಿ ತನ್ನೊಳಗನ್ನು ಖಾಲಿ ಮಾಡಿದರೂ ಹೊರಗೆ ಪ್ರಶಾಂತ ಸರೋವರದಂತೆ ಭಾಸವಾಗುತ್ತದೆ.

ನೋಡಿದಿರಾ ಸ್ನೇಹಿತರೆ.... ನಿಮ್ಮ ಸುತ್ತಲೂ ಇಂತಹ ಎರಡು ವಿಭಿನ್ನ ವ್ಯಕ್ತಿತ್ವದ ಜನರನ್ನು ನೀವು ಕಾಣುತ್ತಲೇ ಇರುತ್ತೀರಿ.

ಹಣವನ್ನು ಕಳುಹಿಸುವ ಮೂಲಕ ಆಗಾಗ ಕರೆ ಮಾಡಿ ವಿಚಾರಿಸಿಕೊಳ್ಳುವ ಮೂಲಕ ನೀವು ಪ್ರೀತಿ ಕಾಳಜಿ ಮತ್ತು ಅವರ ಪ್ರಸ್ತುತ ಬದುಕಿನ ಕುರಿತು ಜವಾಬ್ದಾರಿಯನ್ನು ನಿರ್ವಹಿಸುತ್ತಿರುವಿರಿ ಎಂದು ಭಾವಿಸದಿರಿ

ಹಣದ ಮೊತ್ತವನ್ನು ಲಗತ್ತಿಸಿರುವ ಚೆಕಗಳು ಪಾಲಕರ ಕಣ್ಣೀರನ್ನು ಒರೆಸುವುದಿಲ್ಲ. ಕ್ಷೇಮ ಸಮಾಚಾರದ ಕೇಳುವ ಮೂಲಕ ಅವರ ಒಬ್ಬಂಟಿತನವನ್ನು ಹೋಗಲಾಡಿಸಲು ಸಾಧ್ಯವಿಲ್ಲ.

ಅದೊಂದು ದಿನ ನೀವು ನಿಮ್ಮ ಪಾಲಕರು ಉಳಿಸಿಕೊಂಡು ಬಂದಿರುವ ಪೂರ್ವಾರ್ಜಿತ ಆಸ್ತಿಯನ್ನು ಪಾಲು ಮಾಡಿಕೊಳ್ಳುವವರಾದರೆ ಈ ಮಾತನ್ನು ನೆನಪಿಟ್ಟುಕೊಳ್ಳಿ. ಪಾಲಕರನ್ನು ಕಾಳಜಿ ಮಾಡುವ ಮಗನ ಆರೋಗ್ಯ, ಕೌಟುಂಬಿಕ ಜೀವನ, ಸಮಯ ಹಾಗೂ ಬದುಕನ್ನು ಯಾವುದೇ ಆಸ್ತಿಯನ್ನು ಕೊಟ್ಟು ಪೂರೈಸಲು ಸಾಧ್ಯವಿಲ್ಲ.

ಕೌಟುಂಬಿಕ ನ್ಯಾಯ ಎಂದರೆ ಎಲ್ಲವನ್ನು ಸರಿ ಸಮಾನವಾಗಿ ಪಾಲು ಮಾಡಿಕೊಳ್ಳುವುದು ಎಂದರ್ಥವಲ್ಲ. ಇಡೀ ಕುಟುಂಬದ ಭಾರವನ್ನು ಹೊತ್ತು ನಡೆದವರ ಶ್ರಮವನ್ನು, ಸಹಾಯವನ್ನು, ಬದುಕನ್ನು ಕೂಡ ನಾವು ಅರಿಯಲೇಬೇಕು.... ಅರಿತು ಬಾಳಲೇಬೇಕು.

ಈ ಪಾಠ ಕೇವಲ ಪಾಲು ಮಾಡಿಕೊಳ್ಳುವ ಸಹೋದರ, ಸಹೋದರಿಯರಿಗೆ ಮಾತ್ರವಲ್ಲ. ಅವರೇನು ಮಾಡಿದರು ಇವರೇನು ಮಾಡಿದರು ಎಂದು ಹೀಗಳೆಯುವ.... ನಾವೇನು ಸುಮ್ಮನೆ ಕುಳಿತಿಲ್ಲ ಆಗಾಗ ಹಣ ಕಳುಹಿಸಿದ್ದೇವೆ, ಯೋಗ ಕ್ಷೇಮ ವಿಚಾರಿಸಿಕೊಳ್ಳುತ್ತೇವೆ, ಭೇಟಿಯಾಗಿ ಹೋಗುತ್ತೇವೆ ಎಂದು ಹೇಳುವ ಪ್ರತಿಯೊಬ್ಬ ವ್ಯಕ್ತಿಗೆ ಇದು ಪಾಠವಾಗಬೇಕು.

**ಏನಂತೀರಾ ಸ್ನೇಹಿತರೇ?**

# "ಅಪ್ಪ" ನೆಂಬ ಆಸರೆ ಇಲ್ಲದ ಬದುಕು!!



। ಪ್ರಶಾಂತ್ ಎಂ.ಕಂಬಳಿ

"ಅಪ್ಪಾ" ಈ ಶಬ್ದದಲ್ಲೇ ಅದೆಂಥಾ ಗತ್ತು, ಗಾಂಭೀರ್ಯ... ತಾನು ಎಲ್ಲಾ ಕಡೆ ಇರೊಕೆ ಸಾಧ್ಯವಿಲ್ಲ ಅಂತಾ ಗೊತ್ತಾಗಿ ತಾಯೀನ ಸೃಷ್ಟಿ ಮಾಡಿದ ದೇವ್ರು, ಏಕಕಾಲದಲ್ಲಿ ತನ್ನಿಂದ ಎಲ್ಲರನ್ನು ಸಲಹಲು ಸಾಧ್ಯವಿಲ್ಲ ಎಂದು ತಿಳಿದು ಅಪ್ಪನನ್ನು ಸೃಷ್ಟಿಸಿದನೇನೋ, ಅಪ್ಪ ಅನ್ನೋ ಪದಕ್ಕೆ ಸಾವಿರ ಆನೆಗಳ ಬಲ, ದರ್ಪ. ಕೋಪ, ಅತಿ ಎನ್ನಿಸುವ ಶಿಸ್ತು. ಅನುಮಾನ ಇವೆಲ್ಲದರ ಸಮ್ಮಿಲನವೇ ಅಪ್ಪ. ಅಪ್ಪನ ಬಗ್ಗೆ ಅದೆಂಥದ್ದೋ ಅಮೂರ್ತ ಭಯ.

ಹಾಗಂತ ಆತನಲ್ಲಿ ಪ್ರೀತಿ ಇಲ್ಲ ಎಂದುಕೊಂಡರೇ ತಪ್ಪು. ಆತನಲ್ಲಿ ಅತೀವ ಒಲವಿದೆ. ಆದರೆ ತಾಯಿಯ ಹಾಗೆ ಅದನ್ನು ತೋರಗೊಡಲಾರ. ಅಪ್ಪನ ಪ್ರೀತಿ ಅರ್ಥ ಆಗೋದು ಬಹಳಾನೇ ಕಷ್ಟ.


ಅಪ್ಪ ಎಂಬ ಪದವೇ ಬದುಕಿಗೆ ಒಂದು ಭರವಸೆಯ ನೆರಳು. ಕೈ ಹಿಡಿದು ನಡೆಯುವ ಧೈರ್ಯ, ತಪ್ಪು ಮಾಡಿದಾಗ ತಿದ್ದುವ ಕಾಳಜಿ, ಗೆಲುವಿನಲ್ಲಿ ಬೆನ್ನು ತಟ್ಟುವ ಮೌನದ ಹರ್ಷ?ಇವೆಲ್ಲವೂ ಅಪ್ಪನ ಸಾನ್ನಿಧ್ಯದಲ್ಲೇ ಜೀವಂತವಾಗಿರುತ್ತವೆ. ಆದರೆ ಆ ಆಸರೆ ಇಲ್ಲದ ಬದುಕು, ಹೇಳಲಾಗದ ಖಾಲಿತನವನ್ನು ಹೃದಯದೊಳಗೆ ತುಂಬಿಕೊಂಡೆ ಸಾಗುತಿದೆ..

ಅಪ್ಪ ಇಲ್ಲದ ಮನೆ ಮೌನವಾಗಿ ಮಾತನಾಡುತ್ತದೆ. ಹಬ್ಬ – ಹರಿದಿನಗಳ ನಗುವಿನ ನಡುವಿನಲೂ, ಶಾಲಾ /ಕಾಲೇಜಿನ ಸಮಾರಂಭಗಳ ಸಮಯದಲ್ಲೂ, ಜೀವನದ ಮಹತ್ವದ ತಿರುವುಗಳಲ್ಲಿ ?ಅಪ್ಪ ಇದ್ದಿದ್ದರೆ?? ಎಂಬ ಯೋಚನೆ ಮನಸ್ಸನ್ನು ಮಿಡಿಯಿಸುತ್ತದೆ. ಸಲಹೆ ಬೇಕಾದ ಕ್ಷಣಗಳಲ್ಲಿ, ಧೈರ್ಯ ಕಮ್ಮಿಯಾದಾಗ, ಆಧಾರವಾಗಬೇಕಿದ್ದ ಕೈ ಕಾಣದೆ ಮನಸ್ಸು ಒದ್ದಾಡುತ್ತಿದೆ.

ಆದರೂ ಅಪ್ಪನೆಂಬ ಆಸರೆ ಇಲ್ಲದ ಬದುಕು ದುರ್ಬಲತೆಯಲ್ಲ. ಆ ಕೊರತೆಯಲ್ಲೇ ಬಲ ಬೆಳೆದುಬರುತ್ತದೆ. ತಾಯಿಯ ತ್ಯಾಗ, ಜೀವನದ ಪಾಠಗಳು, ಸ್ವಂತ ಪರಿಶ್ರಮ?ಇವೆಲ್ಲ ಸೇರಿ ವ್ಯಕ್ತಿತ್ವವನ್ನು ಗಟ್ಟಿ ಮಾಡುತ್ತವೆ. ಚಡ್ಡಿ ಹಾಕೋ ವಯಸ್ಸಿನಲ್ಲೇ ಜವಾಬ್ದಾರಿಗಳ ಮೂಟೆ ಹೊತ್ತು ಬೇಗನೆ ದೊಡ್ಡವರಾದಂತೆ, ಜವಾಬ್ದಾರಿ ಕಣ್ಣೀರನ್ನು ಒಳಗಿಟ್ಟುಕೊಂಡೇ ನಗುವ ಶಕ್ತಿ, ಇತರರ ನೋವನ್ನು ಅರಿಯುವ ಮನಸ್ಸು?ಇವು ಅಪ್ಪನಿಲ್ಲದ ಬದುಕು ಕಲಿಸುವ ಮೌನ ಪಾಠಗಳಾಗಿವೆ.

ಅಪ್ಪ ದೈಹಿಕವಾಗಿ ಇಲ್ಲದಿದ್ದರೂ, ಅವರ ಮೌಲ್ಯಗಳು, ನೆನಪುಗಳು, ಮಾತುಗಳು, ಅವರ ಸರಳತೆ ಬದುಕಿಗೆ ದಾರಿದೀಪವಾಗಿವೆ. ಪ್ರತಿಯೊಂದು ಹೆಜ್ಜೆಯಲ್ಲೂ ಅವರು ಕಲಿಸಿದ ಸತ್ಯ, ಶ್ರಮ, ಮಾನವೀಯತೆ ಜೊತೆಯಾಗಿರುತ್ತವೆ. ಹಾಗಾಗಿ ಅಪ್ಪನೆಂಬ ಆಸರೆ ಇಲ್ಲದ ಬದುಕು ಖಾಲಿತನವಷ್ಟೇ ಅಲ್ಲ; ಅದು ನೆನಪುಗಳ ಬೆಳಕಿನಲ್ಲಿ ಸಾಗುವ, ನೋವಿನಿಂದ ಬಲ ಪಡೆದ, ನಿರೀಕ್ಷೆಯತ್ತ ನಡೆಯುವ ಜೀವನವೆಂದರೆ ತಪ್ಪಾಗದು..!

ಅಪ್ಪ ಇಲ್ಲದಿರುವುದನ್ನು ಕಾಲ ಮಾತ್ರ ಮರೆಮಾಚಲಾರದು. ವರ್ಷಗಳು ಜಾರಿದಂತೆ ನೆನಪುಗಳು ಮಸುಕಾಗದೆ ಇನ್ನಷ್ಟು ಗಟ್ಟಿಯಾಗುತ್ತಿವೆ. ಅವರ ಧ್ವನಿಯ ಪ್ರತಿಧ್ವನಿ ಮನಸ್ಸಿನೊಳಗೆ ಉಳಿದು, ಪ್ರತಿಯೊಂದು ನಿರ್ಧಾರಕ್ಕೂ ಮೌನವಾಗಿ ಪ್ರಶ್ನಿಸುತ್ತಿದೆ.



ಇದು ಸರಿಯೋ? ತಪ್ಪೋ? ಎಂದು. ಉತ್ತರ ಸಿಗದ ಎಷ್ಟೋ ಪ್ರಶ್ನೆಗಳು, ಪ್ರಶ್ನೆಗಳಾಗಿಯೇ ಉಳಿದಿವೆ.

ಬಾಲ್ಯದಲ್ಲಿ ಕೈ ಹಿಡಿದು ದಾಟಿಸಬೇಕಿದ್ದ ರಸ್ತೆಗಳನ್ನು ಈಗ ಒಬ್ಬನೇ ದಾಟಬೇಕು. ಸೋಲು ಬಂದಾಗ ತಲೆ ತಟ್ಟುವ ಕೈ ಇಲ್ಲ, ಗೆಲುವು ಬಂದಾಗ ಎದೆ ತುಂಬಿಕೊಳ್ಳುವ ಅಪ್ಪುಗೆಯೂ ಇಲ್ಲ. ಜನರ ಮಧ್ಯೆ ನಿಂತರೂ ಒಳಗೊಂದು ಏಕಾಂತ. ಆದರೆ ಆ ಏಕಾಂತವೇ ಸ್ವಾವಲಂಬನೆಯ ಬೀಜವಾಗುತ್ತಿದೆ; ಕೆಳಗೆ ಬಿದ್ದಾಗ ಎದ್ದು ನಿಲ್ಲುವ ಅಭ್ಯಾಸವನ್ನೇ ಬದುಕು ಕಲಿಸುತ್ತದೆ.

ಕೆಲವೊಮ್ಮೆ ರಾತ್ರಿ ಮೌನದಲ್ಲಿ ಕಣ್ಣೀರು ಮಾತಾಡುತ್ತದೆ. ಯಾರಿಗೂ ಹೇಳಲಾಗದ ನೋವು, ಯಾರೂ ಕೇಳದ ಪ್ರಶ್ನೆಗಳು ಹೃದಯದೊಳಗೆ ಗುಣಗಾಡುತ್ತಿವೆ. ಆ ಕ್ಷಣಗಳಲ್ಲಿ ಅಪ್ಪನ ಫೋಟೋ ಮುಂದೆ ನಿಂತು, ಮಾತಿಲ್ಲದೇ ಹೇಳಿಕೊಂಡ ನೋವು – ನಲಿವುಗಳು, ಮನಸನು ಸ್ವಲ್ಪ ಹಗುರವಾಗಿಸುತ್ತದೆ. ಉತ್ತರ ಬರದಿದ್ದರೂ, ಕೇಳುವವರಿದ್ದಾರನ್ನುವ ಭಾವನೆ ಧೈರ್ಯ ಕೊಡುತ್ತದೆ.



ಅಪ್ಪನೆಂಬ ಆಸರೆ ಇಲ್ಲದ ಬದುಕು ನೋವಿನಿಂದ ಆರಂಭವಾದರೂ, ಅದು ನಿಲ್ಲುವುದು ನಿರಾಶೆಯಲ್ಲಿ ಅಲ್ಲ. ಆ ನೋವೇ ಸಂಕಲ್ಪವಾಗುತ್ತದೆ. ?ನಾನು ಕುಗ್ಗುವುದಿಲ್ಲ? ಎಂಬ ಹಠವಾಗಿ ರೂಪುಗೊಳ್ಳುತ್ತದೆ. ಅಪ್ಪನಿಲ್ಲದ ಖಾಲಿತನವನ್ನು ಅವರ ಕನಸುಗಳನ್ನು ನೆರವೇರಿಸುವ ಮೂಲಕ ತುಂಬುವ ಪ್ರಯತ್ನವೇ ಜೀವನವಾಗುತ್ತದೆ.

ಅಂತಿಮವಾಗಿ ಅಪ್ಪ ಇಲ್ಲದಿದ್ದರೂ, ಅಪ್ಪನ ಹೆಸರಿನಲ್ಲಿ ಬದುಕು ಸಾಗುತ್ತದೆ. ಅವರ ನೆರಳು ಕಾಣದಿದ್ದರೂ, ಅವರ ಮೌಲ್ಯಗಳು ಹೆಜ್ಜೆಹೆಜ್ಜೆಗೂ ಜೊತೆಗಿರುತ್ತವೆ. ಹಾಗೆಯೇ ಆ ಬದುಕು ನೋವಿನೊಳಗೆ ಬೆಳೆದ, ಬಲದಿಂದ ಕಟ್ಟಿದ, ನೆನಪುಗಳಿಂದ ಬೆಳಗಿದ ಒಂದು ಮೌನದ ಜಯವಾಗುವುದು.


# ಕೆಟ್ಟ ನೆನಪು ಕಾಡದಿರಲಿ

ನಾವು ಯಾವುದನ್ನು ಮರೆಯಬಾರದು ಅಂದುಕೊಂಡಿರುತ್ತೇವೆಯೋ ಅದನ್ನು ಬೇಗ ಮರೆತು ಬಿಡುತ್ತೇವೆ. ಆದರೆ ಮರೆಯಬೇಕಾದದ್ದನ್ನು ಎಷ್ಟೇ ಪ್ರಯತ್ನ ಮಾಡಿದರೂ ಮರೆಯಲು ಆಗುವುದಿಲ್ಲ. ಕೆಟ್ಟ ನೆನಪುಗಳು ಮೇಲಿಂದ ಮೇಲೆ ನೆನಪಿಗೆ ಬಂದು ಮನಸ್ಸನ್ನು ಹಿಂಡುತ್ತದೆ. ಸಾಮಾನ್ಯವಾಗಿ ಇದು ಎಲ್ಲರ ಜೀವನದಲ್ಲಿ ಜರಗುವ ಸಾಮಾನ್ಯ ಕ್ರಿಯೆಯಾದರೂ, ಕೆಲವರು ಅದರಿಂದ ಸಾಧ್ಯವಿದ್ದಷ್ಟು ಹೊರಗೆ ಬಂದು ಸಾಮಾನ್ಯ ಜೀವನ ನಡೆಸುತ್ತಾರೆ. ಕೆಲವೊಂದಿಷ್ಟು ಜನರು ಕೆಟ್ಟ ಘಟನೆಗಳಿಂದ ಹೊರಗೆ ಬರದೆ ಒದ್ದಾಡುತ್ತಾರೆ. ಒತ್ತಾಯಪೂರ್ವಕವಾಗಿ ಮರೆಯಲು ಚಟದ ದಾಸರಾಗಲೂಬಹುದು.

ಪ್ರೀತಿಸಿ ಕೈಕೊಟ್ಟ ಪ್ರಿಯತಮೆ, ಅಥವಾ ಪ್ರಿಯತಮನ ನೆನಪು ಪದೇ ಪದೇ ಕಾಡುವುದು ಸಹಜ. ಅವಳು ಸಿಗದಿದ್ದರೆ ಜೀವನವೇ ಮುಗಿದು ಹೋಯಿತೆನ್ನುವಂತೆ ವರ್ತಿಸುತ್ತಾನೆ. ಅವಳೂ ಹಾಗೆಯೇ ಅವನಿಲ್ಲದ ಜೀವನ ನೆನಸಿಕೊಳ್ಳಲು ಆಗುವುದಿಲ್ಲ ಎಂದು ಚಡಪಡಿಸುತ್ತಾಳೆ. ಒಂಟಿತನದಿಂದ ಬಳಲುತ್ತಾರೆ. ಡಿಪ್ರೆಶನ್ ಗೂ ಹೋಗಬಹುದು. ನಿಜವಾಗಿ ಪ್ರೀತಿಯೆಂದರೆ ಭರವಸೆ, ವಿಶ್ವಾಸವಲ್ಲವೇ!! ಪರಿಶುದ್ಧವಾದ ಪ್ರೀತಿ ಮುರಿದು ಬೀಳಲು ಸಾಧ್ಯವಿಲ್ಲ. ಒಂದು ವೇಳೆ ಮುರಿದು ಬಿದ್ದಿದ್ದರೆ ಅದು ಪ್ರೀತಿಯಲ್ಲ ಎಂಬ ಸತ್ಯವನ್ನು ತಿಳಿದುಕೊಳ್ಳಬೇಕು. ಸ್ವಲ್ಪ ತಾಳ್ಮೆಯಿಂದ ಕಾಯ್ದರೆ ಮುಂದೊಂದು ದಿನ ನಿಮ್ಮನ್ನು ಪರಿಶುದ್ಧವಾಗಿ ಪ್ರೀತಿಸುವವರು ಸಿಗಬಹುದು. ಒಂದಿಷ್ಟು ದಿನಗಳವರೆಗೆ ಕಾಯಬೇಕು. ಇನ್ನೊಂದಿಷ್ಟು ಜನ ಇರುತ್ತಾರೆ ಯಾರನ್ನು ಪ್ರೀತಿಸಿ ಇನ್ಯಾರನ್ನೊ ಮದುವೆಯಾಗುತ್ತಾರೆ. ಹಳೆಯ ಪ್ರೇಮಿಯನ್ನು ಹೃದಯದಲ್ಲಿಟ್ಟುಕೊಂಡು ಮದುವೆಯಾದವರಿಗೆ ಮೋಸ ಮಾಡುತ್ತಾ ತನಗೂ ಮೋಸ ಮಾಡಿಕೊಳ್ಳುತ್ತಾ ಜೀವನ ನರಕ ಮಾಡಿಕೊಂಡಿರುತ್ತಾರೆ. ಹಳೆಯದನ್ನು ಮರೆಯದೇ ಹೊಸ ಸಂಬಂಧಕ್ಕೆ ಹೊಂದಿಕೊಳ್ಳದೇ ಒದ್ದಾಡುತ್ತಾರೆ. ಸರಿಯಾಗಿ ವಾಸ್ತವಿಕ ನೆಲೆಯಲ್ಲಿ ಯೋಚಿಸಿ,

ಹಳೆಯದನ್ನು ಮರೆತು ಹೊಸದಕ್ಕೆ ಹೊಂದಿಕೊಂಡು ಇರುವ ಅಲ್ಪ ಆಯುಷ್ಯವನ್ನು ಸಾರ್ಥಕತೆ ಮಾಡಿಕೊಂಡರಾಯಿತು.

ಸಂಬಂಧಿಕರಲ್ಲಿ ಯಾರೊ ನಿಮ್ಮನ್ನು ಅವಮಾನಿಸಿದ ಘಟನೆ ನಿಮ್ಮ ಮನಸ್ಸನ್ನು ಕದಲುತ್ತಿರುತ್ತದೆ. ಬಿಟ್ಟೇನು ಎಂದರೆ ಬಿಡದೆನೊ ಮಾಯೆ ಎನ್ನುವಂತೆ ನೆನಪುಗಳು ಮರಳಿ ಮರಳಿ ಮುನ್ನೆಲೆಗೆ ಬಂದು ಮನಸ್ಸನ್ನು ಹಿಂಡುತ್ತವೆ. ಅವರ ಮೇಲೆ ದ್ವೇಷ ಸಾಧಿಸಲು ನಾವು ತುದಿಗಾಲ ಮೇಲೆ



ನಿಂತಿರುತ್ತೇವೆ. ಇದರಿಂದ ನಮ್ಮ ಮಾನಸಿಕ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತೇವೆ ವಿನಃ ಮತ್ತೇನಾಗುವುದಿಲ್ಲ. ಅದಕ್ಕಿಂತಲೂ ಆ ಘಟನೆಯನ್ನು ಮರೆತುಬಿಟ್ಟರೆ ಹೇಗೆ!!. ನಿಮ್ಮ ಜೀವನದಲ್ಲಿ ಯಾವಾಗಲೂ ಒಂದು ಸಲ ಯಾರೊ ಮೋಸ ಮಾಡಿದ್ದನ್ನು ನೆನಪಿಸಿಕೊಂಡು ಕೊರಗುವುದು ಎಷ್ಟು ಸರಿ!! ಅದನ್ನು ಆದಷ್ಟು ಬೇಗನೆ ಮರೆಯುವುದು ಒಳ್ಳೆಯದಲ್ಲವೇ.

ಬಿಟ್ಟಿರಲಾರದ ಸಂಬಂಧಗಳು ಯಾವುದೋ ಒಂದು ಕೆಟ್ಟ ಗಳಿಗೆಯಲ್ಲಿ ಮುರಿದುಬಿದ್ದಿರುತ್ತದೆ. ನೀವು ಎಷ್ಟೇ ಪ್ರಯತ್ನ ಪಟ್ಟರು ರಿಪೇರಿ ಮಾಡಲಾಗದಷ್ಟು ಪರಿಸ್ಥಿತಿ ಕೈಮೀರಿ ಹೋಗಿರುತ್ತದೆ. ನೀವು ರಾಜಿಯಾಗಲು, ಕ್ಷಮೆ ಕೇಳಲು ಮಾನಸಿಕವಾಗಿ ಸಿದ್ಧರಿದ್ದರೂ ಸಹ ಅವರು ನಿಮ್ಮ ಸಂಬಂಧವೇ ಬೇಡ ಎನ್ನುವ ಪರಿಸ್ಥಿತಿ ಇದ್ದರೆ ಆ ಸಂಬಂಧಕ್ಕೆ ಅನಿವಾರ್ಯ ಎಳ್ಳುನೀರು ಬಿಟ್ಟು ಅದು ಮತ್ತೆ ಮತ್ತೆ ನೆನಪಾಗದಂತೆ ನೋಡಿಕೊಳ್ಳಬೇಕು.

ನಿಮ್ಮ ಆತ್ಮೀಯ ಗೆಳೆಯ ಅಥವಾ ಗೆಳತಿ ನಿಮ್ಮಿಂದ ಕಾರಣವಿಲ್ಲದೇ ದೂರವಾದರೆಂದರೆ ನಮ್ಮ ಅವಶ್ಯಕತೆ ಅವರಿಗಿಲ್ಲದಿರಬಹುದು. ಅಥವಾ ನಮ್ಮ ಯಾವುದೊ ಒಂದು ಗುಣ ಅವರಿಗೆ ಸರಿವೆನಸದಿರಬಹುದು. ನಮ್ಮಿಂದ ತಪ್ಪಾಗಿದ್ದರೆ ಕ್ಷಮೆ ಕೇಳಿ ಗೆಳೆತನ ಉಳಿಸಿಕೊಳ್ಳೋಣ. ನಮ್ಮಿಂದ ತಪ್ಪು ಇಲ್ಲದೇ ಇದ್ದರೆ ಉದ್ದೇಶಪೂರ್ವಕವಾಗಿ ನಮ್ಮ ಗೆಳೆತನ ರಿಜೆಕ್ಟ್ ಮಾಡಿದರೆ ಅವರ ಬಗ್ಗೆ ಬಹಳ ಯೋಚಿಸದೆ ಮುಂದೆ ಸಾಗಿದರಾಯಿತು. ಜೀವನ ನಿಲ್ಲುವ ನಿಲ್ದಾಣವಲ್ಲ, ನಿರಂತರವಾಗಿ ಸಾಗುವ ಪಯಣ. ಆಕಸ್ಮಾತ್ತಾಗಿ ಆತ್ಮೀಯರೊಬ್ಬರು ಬಾರದ ಲೋಕಕ್ಕೆ ಹೋದ ನೆನಪಂತೂ ಎಂತಹ ಕಲ್ಲೆದೆಯವರನ್ನು ಕರಗಿಸಿ ಬಿಡುತ್ತೆ. ಆದರೆ ಮೇಲಿಂದ ಮೇಲೆ ನೆನಪು ಮಾಡಿಕೊಂಡರೂ ಅದರಿಂದ ಪ್ರಯೋಜನವಿಲ್ಲ ಎಂಬುದನ್ನು ತಿಳಿಯಬೇಕು. ಜೊತೆಗೆ ಬಾರದ ಲೋಕಕ್ಕೆ ಹೋದವರು ಮರಳಿ ಬರುವುದಿಲ್ಲವೆಂಬ ಸತ್ಯವನ್ನು ಒಪ್ಪಿಕೊಳ್ಳಬೇಕು.

ನಮ್ಮ ಜೀವನ ಒಳ್ಳೆಯದು ಮತ್ತು ಕೆಟ್ಟದರ ಮೊತ್ತವಾಗಿರುತ್ತದೆ. ಒಳ್ಳೆಯ ಘಟನೆಗಳನ್ನು ನೆನಪಿಸಿಕೊಂಡು ಕಷ್ಟಕರವಾದ ಕೆಟ್ಟ ಘಟನೆಗಳನ್ನು ಮರೆಯಲೇಬೇಕು. ಆದರೆ ಅದು ಅಷ್ಟು ಸುಲಭವಲ್ಲ. ನಾವು ಯಾವಾಗಲೂ ಯಾವುದಾದರೂ ಚಟುವಟಿಕೆಯಲ್ಲಿ ತೊಡಗಿರಬೇಕು. ಅಂದರೆ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ದಿನವಿಡೀ ಬ್ಯುಸಿಯಾಗಿದ್ದರೆ ಕೆಟ್ಟ ಘಟನೆಗಳನ್ನು ಮರೆಯಬಹುದು. ಅನುಕೂಲ ಇದ್ದರೆ ಪ್ರವಾಸ ಮಾಡುವ ಯೋಜನೆ ಹಾಕಿಕೊಳ್ಳಬೇಕು. ಇದರಿಂದ ಸ್ಥಳ ಬದಲಾವಣೆ ಹಾಗೂ ಹೊಸ ಪರಿಸರದಿಂದ ಮನಸ್ಸು ಉಲ್ಲಾಸಭರಿತವಾಗಿ ಹಳೆಯದನ್ನು ಮರೆಯಲು ಸಾಧ್ಯವಾಗುತ್ತದೆ.

"ನೀನು ನಕ್ಕರೆ ಜಗವೇ ನಗುವುದು, ನೀನು ಅತ್ತರೆ ಒಂಟಿಯಾಗಿ ಅಳಬೇಕು" ಎಂಬ ವಾಕ್ಯದಂತೆ ಕೆಟ್ಟ ಘಟನೆಯ ನೆನಪುಗಳನ್ನು ನೆನೆಸಿಕೊಂಡು ಗೋಳಾಡಿ ಅತ್ತರೂ ಪ್ರತಿದಿನ ನಿಮ್ಮನ್ನು ಸಂತೈಸಲು ಯಾರೂ ಬರುವುದಿಲ್ಲ. ಭಾವನಾತ್ಮಕವಾದ ನೋವುಗಳನ್ನು ಅನುಭವಿಸದೇ ಹಳೆಯದನ್ನು ಮರೆತು ಮುಂದೆ ನಡೆದು ಬಿಟ್ಟರಾಯಿತು. ನಕಾರಾತ್ಮಕ ನೆನಪುಗಳನ್ನು ಮರೆಯಲು ಮೊದಲು ನಿಮಗೆ ದ್ರೋಹ, ಮೋಸ ಮಾಡಿದವರನ್ನು ಕ್ಷಮಿಸಿಬಿಡಿ. ಕ್ಷಮಿಸುವುದರಿಂದ ನಮ್ಮ ತಲೆಯಿಂದ ಅವರನ್ನು ಹೊರಗೆ ಹಾಕಿದಂತಾಗಿ ಒಂದಿಷ್ಟು ಭಾರ ಕಡಿಮೆಯಾಗುತ್ತದೆ. ಕಳೆದು ಹೋದ ಪ್ರೀತಿಯನ್ನು ಹುಡುಕುವ ವ್ಯರ್ಥ ಪ್ರಯತ್ನ ಮಾಡುವುದನ್ನು ಬಿಟ್ಟು ಸತ್ಯವನ್ನು ಅರ್ಥಮಾಡಿಕೊಳ್ಳಬೇಕು.

ಮುರಿದು ಹೋದ ಸಂಬಂಧಗಳು ಒಡೆದು ಹೋದ ಕನ್ನಡಿಯಂತೆ ಒತ್ತಾಯಪೂರ್ವಕವಾಗಿ ಜೋಡಿಸಿದರೂ ಅವು ಮೊದಲಿನಂತೆ ಆಗಲೂ ಸಾಧ್ಯವಿಲ್ಲ.



ಬಸವರಾಜ ಹೊನಗೌಡರ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,